# ಕನ್ನಡ ಭಾಷಾ ಪಠ್ಯ

## ಬಿ.ಕಾಂ.

## (ಮೂರನೇ ಸೆಮಿಸ್ಟರ್)

## ೨೦೨೧-೨೨


ಪ್ರಧಾನ ಸಂಪಾದಕರು

**ಡಾ. ಡೊಮಿನಿಕ್**

ಕಾರ್ಯನಿರ್ವಾಹಕ ಸಂಪಾದಕರು

**ಡಾ. ಕೆ.ವೈ. ನಾರಾಯಣಸ್ವಾಮಿ**

ಪರಿಶೀಲಕರು

**ಡಾ. ಬೆಳಕೆರೆ ಲಿಂಗರಾಜಯ್ಯ**

ಸಂಪಾದಕರು

**ಡಾ. ಡಿ.ಕೆ. ನಟರಾಜು**

**ಡಾ. ಜಿ. ಆಶಾ**

**ಪ್ರೊ. ಎನ್.ಎಸ್. ಸತೀಶ್**



ಬೆಂಗಳೂರು ನಗರ ವಿಶ್ವವಿದ್ಯಾಲಯ

BENGALURU CITY UNIVERSITY

ಆಗು ನೀ ಅನಿಕೇತನ

BE BOUNDLESS

## ಬೆಂಗಳೂರು ನಗರ ವಿಶ್ವವಿದ್ಯಾಲಯ

# ಕನ್ನಡ ಭಾಷಾ ಪಠ್ಯ

## ಬಿ.ಕಾಂ.

## (ಮೂರನೇ ಸೆಮಿಸ್ಟರ್)

## ೨೦೨೧-೨೨

ಬೆಂಗಳೂರು ನಗರ ವಿಶ್ವವಿದ್ಯಾಲಯ
BENGALURU CITY UNIVERSITY
ಆಗು ನೀ ಅನಿಕೇತನ
BE BOUNDLESS


ಪ್ರಧಾನ ಸಂಪಾದಕರು

**ಡಾ. ಡೊಮಿನಿಕ್**

ಕಾರ್ಯನಿರ್ವಾಹಕ ಸಂಪಾದಕರು

**ಡಾ. ಕೆ.ವೈ. ನಾರಾಯಣಸ್ವಾಮಿ**

ಪರಿಶೀಲಕರು

**ಡಾ. ಬೆಳಕೆರೆ ಲಿಂಗರಾಜಯ್ಯ**

ಸಂಪಾದಕರು

**ಡಾ. ಡಿ.ಕೆ. ನಟರಾಜು**

**ಡಾ. ಜಿ. ಆಶಾ**

**ಪ್ರೊ. ಎನ್.ಎಸ್. ಸತೀಶ್**


---


**ಬೆಂಗಳೂರು ನಗರ ವಿಶ್ವವಿದ್ಯಾಲಯ**

**KANNADA BHASHA PATYA:**

B.Com. : Third Semester Text Book


Chief Editor : **Dr. Dominic**
Chairperson, Kannada Board of Studies
Bengaluru City University

Edited by : **Dr. D.K. Nataraju**
**Dr. G. Asha**
**Prof. N. S. Satish**



© Bengaluru City University



**ಪ್ರಥಮ ಮುದ್ರಣ** : **2021**

**ಪುಟಗಳು** : **114**

**ಬೆಲೆ** :



**ಅಧ್ಯಯನ ಮಂಡಳಿ ಸದಸ್ಯರು:**
ಡಾ. ಹನುಮಂತರಾಯಪ್ಪ, ಶ್ರೀ ರವೀಂದ್ರನಾಥ ಪುಣ್ಯಶೆಟ್ಟಿ
ಡಾ ಎಚ್.ಕೆ. ಮಳಲಿಗೌಡ, ಡಾ. ಡಿ. ಸಿದ್ಧರಾಜು
ಡಾ. ಶೀಲಾದೇವಿ ಎಸ್. ಮಳೀಮಠ
ಡಾ. ಟಿ. ಮಂಜುನಾಥ, ಎಚ್. ಉಮಾಪತಿ



**ಪ್ರಕಾಶಕರು :**
ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು – 560 001

# ಕನ್ನಡ ಭಾಷಾ ಪಠ್ಯ

## ಬಿ.ಕಾಂ. – ೩ನೇ ಸೆಮಿಸ್ಟರ್

## ೨೦೨೧–೨೨

## ಬೆಂಗಳೂರು ನಗರ ವಿಶ್ವವಿದ್ಯಾಲಯ

# ಪರಿವಿಡಿ

## ಬಿ.ಕಾಂ.

## ೩ನೇ ಸೆಮಿಸ್ಟರ್

### ನೆನಪು


| | | | |
|---|---|---|---|
| ಆಶಯ | : | ಬನವಾಸಿಯ ವರ್ಣನೆ – ಪಂಪ | ೭ |
| | | ೧. ಅಣ್ಣಯ್ಯನಿಗೆ – ಮಧುರಚೆನ್ನ | ೮ |
| | | ೨. ಎಂಟರ ವಯಸ್ಸಿನ ಕೆಲಸದ ಹುಡುಗ – ಎ.ಪಿ.ಜೆ. ಅಬ್ದುಲ್ ಕಲಾಂ | ೧೦ |
| | | ೩. ಅಪ್ಪ – ಸಿದ್ಧಲಿಂಗಯ್ಯ | ೧೭ |
| ಓದು ಪಠ್ಯ | : | ೪. ಮೂಕಜ್ಜಿಯ ಕನಸುಗಳು – ಶಿವರಾಮ ಕಾರಂತ | ೧೯ |


### ಅಭಿವೃದ್ಧಿ


| | | | |
|---|---|---|---|
| ಆಶಯ | : | ಡಾಂಬರು ಬಂದುದು – ದೇವನೂರು ಮಹದೇವ | ೨೮ |
| | | ೧. ಅಭಿವೃದ್ಧಿ ಅಂಧಯುಗ?... – ನಾಗೇಶ್ ಹೆಗಡೆ | ೩೬ |
| | | ೨. ನಮ್ಮ ಊರ ಬಸ್ಸು – ಗೊರೂರು ರಾಮಸ್ವಾಮಿ ಅಯ್ಯಂಗಾರ್ | ೪೦ |
| | | ೩. ನಿಶಾವಾಗ್ಮಿಗಳ ನಿತ್ಯಸತ್ಯಗಳು – ವಸುದೇಂದ್ರ | ೪೬ |
| ಓದು ಪಠ್ಯ | : | ೪. ಹಕ್ಕಿಗಳನ್ನು ಕುರಿತು – ರಾಮಚಂದ್ರದೇವ | ೫೮ |

## ಸಾಧನೆ


ಆಶಯ : ರಾಗಿ ಋಷಿಗೆ ಜನಮನ್ನಣೆ ೬೩
– ಪ್ರೊ. ಎಂ. ನಾರಾಯಣಸ್ವಾಮಿ ತ್ಯಾವನಹಳ್ಳಿ
೧. ಪುರುಷಸೂಕ್ತ – ಜಿ.ಎಸ್.ಎಸ್. ೭೦
೨. ತಾಯಿ ತೆರೇಸಾ – ಶಾಂತಾದೇವಿ ಮಾಳವಾಡ ೭೨
೩. ಕಳೆದುಹೋದ ಒಂಟೆ ಮತ್ತು ಆತ್ಮತೃಪ್ತಿ ೭೮
– ಡಾ. ಜೆ. ಬಾಲಕೃಷ್ಣ
ಓದು ಪಠ್ಯ : ೪. ಡಾಕ್ಟರ್ ವಿಶ್ವೇಶ್ವರಯ್ಯ ವ್ಯಕ್ತಿ ಮತ್ತು ಐತಿಹ್ಯ ೮೦
– ಎ.ಎನ್. ಮೂರ್ತಿರಾವ್


## ದುಃಖ


ಆಶಯ : ಮಂಕುತಿಮ್ಮನ ಕಗ್ಗ – ಡಿ.ವಿ.ಜಿ. ೮೬
೧. ಚಂದ್ರಮತಿಯ ಪ್ರಲಾಪ – ರಾಘವಾಂಕ ೮೭
೨. ಶವದ ಮನೆ – ಚದುರಂಗ ೯೧
೩. ಸ್ಮಶಾನ ಕುರುಕ್ಷೇತ್ರಂ – ಕುವೆಂಪು ೧೦೩
ಓದು ಪಠ್ಯ : ೪. ಪುಟ್ಟ ವಿಧವೆ – ಬೇಂದ್ರೆ ೧೧೦

**ನೆನಪು : ಆಶಯ**

# ಬನವಾಸಿಯ ವರ್ಣನೆ

**– ಪಂಪ**

ಸೊಗಯಿಸಿ ಬಂದ ಮಾಮರನೆತಲ್ತೆಲೆವಳ್ಳಿಯೆ ಪೂತಜಾತಿಸಂ
ಪಗೆಯೆಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆನಲ್ಲರೊಳ್ಮೊಗಂ
ನಗೆಮೊಗದೊಳ್ಪಳಂಚಲೆಯೆಕೂಡುವ ನಲ್ಲರೆನೋಳ್ಪೊಡಾವಬೆ
ಟ್ಟುಗಳೊಳ ಮಾವ ನಂದನನಂಗಳೊಳಂ ಬನವಾಸಿ ದೇಶದೊಳ್॥

ಚಾಗದ ಭೋಗದಕ್ಕರದಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರವಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ
ನಾಗಿಯುಮೇನೊತೀರ್ದಪುದೆ ತೀರದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ಬನವಾಸಿದೇಶದೊಳ್॥

ತೆಂಕಣಗಾಳಿ ಸೋಂಕಿದೊಡಂಒಳ್ನುಡಿಗೇಳ್ದೊಡಮಿಂಪನಾಳ್ದಗೇ
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದಕೆಂದಲಂ
ಪಂಗೆಡೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ
ರಂಕುಸವಿಟ್ಟೊಡಂ ನೆನೆವುದೆನ್ನಮನಂ ಬನವಾಸಿ ದೇಶಮಂ॥

* * *

# ಅಣ್ಣಯ್ಯನಿಗೆ

– ಮಧುರಚೆನ್ನ

ಮಾತುಮಾತಿಗೆ ಬಿಡದೆ ನಡುವೆ ನುಸುಳುವ ನಿನ್ನ
ಅರ್ಥವಿಲ್ಲದ ಆ 'ಅದಲ್ಲ'ದರ್ಥಕೆ ನಾನು
ಬೆರಗುಬಟ್ಟೆನು ನಿನ್ನ ನೇತನೇತಿಯ ಹೋಲ್ವ
ಅರುವಿನಾ ಆಳವರಿದು.

ಇತಿಯೆಂದು ಇತಿಯೆಂದು ಅಲ್ಲಲ್ಲೆ ಮಲೆಮಲೆತು
ಮತಿಯು ಮಡುಗಟ್ಟಿರಲು ನೇತಿಯಿಂದಗಿದುಗಿದು
ಹರಿಗಡಿದ ಹೊನಲನ್ನು ಹರಿಯಹಚ್ಚುವ ನಿನ್ನ
ಹದವುಳ್ಳ ತರ್ಕ ಹಿರಿದು.

ಅಲ್ಲೆನ್ನದಲ್ಲಮನು ಅಹುದೆನುತ ಇದುರಿಪನು
ಅವರಂತೆ ಮಾತಾಡಿ ಅವರ ಮರವೆಯ ಹರಿದು
ನೋವುಗೊಳಿಸದೆ ಕೊಳೆಯ ಕೊಯ್ದು ಕಳೆಯುವ ನಿನ್ನ
ವೈದ್ಯಕದ ಚೋದ್ಯ ಮಿಗಿಲು.

ನೀ ಕಿಚ್ಚು ನಾ ಕೆಂಡ ಬೆನ್ನುಬೆನ್ನಲಿ ಬೆಸೆದ
ಏಕತೇಜದ ಎರಡು ಹಿರಿಕಿರಿಯ ಪಿಂಡಗಳ
ಬೆಳಗಿಸುವ ಜ್ಯೋತಿ ಶ್ರೀ ಅರವಿಂದಯೋಗಿಗಳ
ಹೃದಯಸ್ಥ ವಿಶ್ವಭಾನು.

ಹನ್ನೆರಡು ವರುಷಗಳ ದೈವದಾಟವ ಕಂಡ
ನನ್ನ ನಿನ್ನಯ ಸಖ್ಯ ಮೊಳೆತಂದು ತಪವಿಂದು
ಮುಂದೆ ಬಹುಕಾಲದಲಿ ಬಿಡಲಿರುವ ಹೂ ಕಾಯಿ
ಭವಿತವ್ಯ ಗರ್ಭಗತವು.

ಇಂದು ಬೇಸಿಗೆಯಲ್ಲಿ ಜೀವ ಬಸವಳಿದಿರಲು
ಬಂತು ದ್ವಾದಶ ವರ್ಷದನುಪಮದ ಹಿರಿ ದಿನವು
ಮೀರಲಾಗದು ಪರ್ವಕಾಲ ಸಮಯವನೆಂದು
ಹಾಡಿದೆನು ಅಂತು ಇಂತು.

* * *

# ಎಂಟರ ವಯಸ್ಸಿನ ಕೆಲಸದ ಹುಡುಗ

**– ಎ.ಪಿ.ಜೆ. ಅಬ್ದುಲ್ ಕಲಾಂ**

ಪ್ರತಿ ದಿನ ಬೆಳಿಗ್ಗೆ ಇಂಗ್ಲಿಷ್ ಹಾಗೂ ತಮಿಳು ಭಾಷೆಗಳ ಅನೇಕ ವೃತ್ತ ಪತ್ರಿಕೆಗಳು ನನ್ನ ಮನೆಗೆ ಬಟವಾಡೆಯಾಗುತ್ತವೆ. ನಾನು ವಿದೇಶಗಳಿಗೆ ಹೋದಾಗ ಭಾರತದಲ್ಲಿನ ಆಗುಹೋಗುಗಳ ವಿಷಯ ತಿಳಿಯುತ್ತಿರಲು ನಾನು ವಿವಿಧ ಪತ್ರಿಕೆಗಳ ವಾರ್ತೆಗಳನ್ನೂ ಅವುಗಳ ಬಗ್ಗೆ ಲೇಖನ – ಸಂಪಾದಕೀಯ ಇತ್ಯಾದಿಗಳನ್ನೂ ಅಂತರ್ಜಾಲದಲ್ಲಿ ಓದುತ್ತೇನೆ. ಬೆರಳಿನ ಒಂದು ಚಿಟಿಕೆಯಿಂದ ದೊರಕುವ ಮಾಹಿತಿಯ ರಾಶಿಯನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಇಂಜಿನಿಯರಿಂಗ್ ಹಾಗೂ ವಿಜ್ಞಾನದ ಕ್ಷೇತ್ರ ಗಳಲ್ಲಿ ಕೆಲಸಮಾಡಿದ ನನಗೆ ತಂತ್ರಜ್ಞಾನದ ಪ್ರಗತಿಯನ್ನು ನೋಡಿ ದಿಗ್ಭ್ರಮೆ ಆಗಬಾರದು. ಆದರೆ, ಇಂದಿನ ನಮ್ಮ ಜೀವನವನ್ನು ಎಪ್ಪತ್ತು ವರ್ಷಗಳ ಹಿಂದೆ ದಕ್ಷಿಣ ಭಾರತದ ಒಂದು ಸಣ್ಣ ಪಟ್ಟಣದಲ್ಲಿ ಇದ್ದಂತಹ ಪರಿಸ್ಥಿತಿಯೊಡನೆ ಹೋಲಿಸಿ ನೋಡಿದಾಗ ನನ್ನಂತಹವನು ಸಹಾ ಆಶ್ಚರ್ಯಪಡುವುದು ಸಹಜವೇ ಆಗಿದೆ.

ನಾನು 1931ರಲ್ಲಿ ಹುಟ್ಟಿದೆ. ನಾನು ಸುಮಾರು ಎಂಟು ವರ್ಷದವನಿದ್ದಾಗ ಎರಡನೇ ವಿಶ್ವ ಮಹಾಯುದ್ಧ ಪ್ರಾರಂಭವಾಯಿತು. ನನ್ನ ಪಯಣವಾಯಿತು, ನಾಜಿ ಜರ್ಮನಿಯ ಮೇಲೆ ಬ್ರಿಟನ್ ಯುದ್ಧ ಸಾರಿತು, ಕಾಂಗ್ರೆಸ್ ಪಕ್ಷದ ವಿರೋಧವಿದ್ದರೂ ಸಹ ಬ್ರಿಟಿಷ್ ಆಧಿಪತ್ಯದ ಭಾರತವೂ ಯುದ್ಧದಲ್ಲಿ ಸೇರಿಕೊಂಡಿತು. ಇದರ ಪರಿಣಾಮವಾಗಿ ಭಾರತದ ಸೈನಿಕರು ಪ್ರಪಂಚದ ವಿವಿಧ ಸ್ಥಳಗಳಲ್ಲಿ ಯುದ್ಧ ಕಾರ್ಯಾಚರಣೆಗಳಲ್ಲಿ ದಾಖಲೆ ಸಂಖ್ಯೆಯಲ್ಲಿ ಭಾಗವಹಿಸುವಂತಾಯಿತು. ಪ್ರಾರಂಭದಲ್ಲಿ ಭಾರತದಲ್ಲಿ, ಅದರಲ್ಲೂ ರಾಮೇಶ್ವರದಂತಹ ಮೂಲೆಯಲ್ಲಿ ಯುದ್ಧದ ಪರಿಣಾಮಗಳು ಅಷ್ಟೇನೂ ಕಾಣಿಸಿಕೊಳ್ಳಲಿಲ್ಲ.

ನಾನೀಗಾಗಲೇ ಹೇಳಿರುವಂತೆ ರಾಮೇಶ್ವರವು 1940ರ ದಶಕದಲ್ಲಿ ಸದ್ದು ಗದ್ದಲಗಳಿಂದ ದೂರವಿದ್ದ ಒಂದು ಚಿಕ್ಕ ಪಟ್ಟಣವಾಗಿತ್ತು. ಯಾತ್ರಾರ್ಥಿಗಳು ಬಂದಾಗೊಮ್ಮೆ ಮಾತ್ರ ಅಲ್ಲಿ ಚಟುವಟಿಕೆ ಕಂಡುಬರುತ್ತಿತ್ತು. ಅಲ್ಲಿನ ನಿವಾಸಿಗಳು ಸಾಮಾನ್ಯವಾಗಿ ವ್ಯಾಪಾರಿಗಳು; ಹೆಚ್ಚಿನವರೂ ಸಣ್ಣ ವ್ಯಾಪಾರಿಗಳೇ. ಅಲ್ಲಿ ಒಂದು

ಮಸೀದಿ ಹಾಗೂ ಒಂದು ದೇವಸ್ಥಾನ ಇದ್ದರೂ ದೇವಸ್ಥಾನವೇ ರಾಮೇಶ್ವರದ ಕೇಂದ್ರ ಬಿಂದು ಹಾಗೂ ಚಟುವಟಿಕೆಯ ತಾಣ. ಅಲ್ಲಿನ ನಿವಾಸಿಗಳು ತಮ್ಮ ಪಾಡಿಗೆ ತಾವು ಜೀವನ ಮಾಡಿಕೊಂಡಿದ್ದರು; ಯಾವುದೇ ಹಳ್ಳಿ, ಪಟ್ಟಣದಲ್ಲಿ ಸಂಭವಿಸಬಹುದಾದಂತಹ ಸಣ್ಣಪುಟ್ಟ ಗೋಜಲು–ಗಲಾಟೆಗಳನ್ನು ಬಿಟ್ಟರೆ ಅಲ್ಲಿ ಹೇಳಿಕೊಳ್ಳಬಹುದಾದ ವಿಶೇಷ ಘಟನೆಗಳೇನೂ ನಡೆಯುತ್ತಿರಲಿಲ್ಲ.

ಅಲ್ಲಿನ ಜನರಿಗೆ ಹೊರಗಿನ ಸುದ್ದಿಗಳನ್ನು ತಿಳಿದುಕೊಳ್ಳಲು ಇದ್ದ ಒಂದೇ ಮಾಧ್ಯಮವೆಂದರೆ ವಾರ್ತಾಪತ್ರಿಕೆಗಳು, ವಾರ್ತಾಪತ್ರಿಕೆಗಳ ವಿತರಣೆಯ ಏಜನ್ಸಿಯನ್ನು ಅಲ್ಲಿ ನಡೆಸುತ್ತಿದ್ದವನು ನನ್ನ ಹತ್ತಿರದ ಬಂಧು ಶಂಸುದ್ದೀನ್, ಜಲಾಲುದ್ದೀನ್‌ನಂತೆಯೇ ಇವನೂ ಕೂಡ ನನ್ನ ಬಾಲ್ಯ ಜೀವನದಲ್ಲಿ ನನ್ನ ಮೇಲೆ ಬಹಳ ಪ್ರಭಾವ ಬೀರಿದ ಮಹತ್ವದ ವ್ಯಕ್ತಿ. ಅವನಿಗೆ ಓದು–ಬರಹ ಬರುತ್ತಿತ್ತಾದರೂ ಹೆಚ್ಚು ವಿದ್ಯೆ ಇರಲಿಲ್ಲ. ಹೊರಗೆಲ್ಲೂ ಪ್ರಯಾಣ ಮಾಡಿದವನೂ ಅಲ್ಲ. ಆದರೆ ಅವನಿಗೆ ನಾನೆಂದರೆ ತುಂಬಾ ಪ್ರೀತಿ, ಎಲ್ಲ ಕೆಲಸಗಳಲ್ಲೂ ಅವನು ನನಗೆ ಬೆಂಬಲ, ಪ್ರೋತ್ಸಾಹ ಕೊಡುತ್ತಿದ್ದನಾದುದರಿಂದ ಅವನು ನನ್ನ ಜೀವನದಲ್ಲಿ ಒಬ್ಬ ಮಾರ್ಗದರ್ಶಕನಾದ. ನಾನು ಬಾಯಿ ತೆರೆದು ಹೇಳುವ ಮೊದಲೇ ನನ್ನ ಮನಸ್ಸಿನಲ್ಲಿ ಏನು ನಡೆದಿದೆ ಎಂಬುದನ್ನು ಈ ವ್ಯಕ್ತಿಗಳು ಹೇಳಿ ಬಿಡುತ್ತಿದ್ದರು. ಅಂದಿನ ದಿನಗಳಲ್ಲಿ ನನಗೆ ಬಾಹ್ಯ ಪ್ರಪಂಚದ ಮಾಹಿತಿಗಳನ್ನು ವಿವರವಾಗಿ ಹಾಗೂ ರಂಗುರಂಗಾಗಿ ವಿವರಿಸುತ್ತಿದ್ದುದು ಈ ಇಬ್ಬರೇ ಆಗಿದ್ದರು; ನನ್ನ ಮಟ್ಟಿಗೆ ಇವರು ಬಲು ಪ್ರಾಜ್ಞರಾಗಿದ್ದರು.

ರಾಮೇಶ್ವರದಲ್ಲಿ ಅಂದು ವಾರ್ತಾಪತ್ರಿಕೆಯ ಏಜನ್ಸಿ ಇದ್ದುದು ಶಂಸುದ್ದೀನನದು ಮಾತ್ರ. ಅದು ಸುಮಾರು ಒಂದು ಸಾವಿರ ಮಂದಿ ಅಕ್ಷರಸ್ಥರು ಇರುವ ಒಂದು ಸ್ಥಳ, ಶಂಸುದ್ದೀನ್ ಅವರೆಲ್ಲರಿಗೂ ವೃತ್ತಪತ್ರಿಕೆ ಸಿಗುವಂತೆ ಮಾಡುತ್ತಿದ್ದ. ಆ ಕಾಲದಲ್ಲಿ ಅಂತಿಮ ಘಟ್ಟವನ್ನು ತಲುಪತೊಡಗಿದ್ದ ಸ್ವಾತಂತ್ರ್ಯ ಹೋರಾಟದ ಸುದ್ದಿಗಳನ್ನು ಪತ್ರಿಕೆಗಳಲ್ಲಿ ಓದಿ ಜನ ತಮ್ಮ ತಮ್ಮಲ್ಲೇ ಚರ್ಚಿಸುತ್ತಿದ್ದರು; ಹೀಗಾಗಿ ವೃತ್ತ ಪತ್ರಿಕೆಗಳಿಗೆ ಬಲು ಬೇಡಿಕೆಯಿತ್ತು. ಯುದ್ಧರಂಗದ ಸುದ್ದಿಗಳು, ಹಿಟ್ಲರನ ಸಮಾಚಾರಗಳು ಹಾಗೂ ನಾಜಿ ಸೈನ್ಯದ ಕಾರಾಚರಣೆಗಳ ವಿವರಗಳೂ ಇರುತ್ತಿದ್ದವು. ದಿನಪಂಚಾಂಗ, ಬಂಗಾರದ ಬೆಲೆ ಮುಂತಾದವುಗಳ

ಬಗ್ಗೆಯೂ ಜನರಿಗೆ ಆಸಕ್ತಿಯಿತ್ತು. ಅಲ್ಲಿ ಅತ್ಯಂತ ಹೆಚ್ಚು ಪ್ರಚಾರದಲ್ಲಿದ್ದುದು ತಮಿಳು ದೈನಿಕ ದಿನಮಣಿ.

ರಾಮೇಶ್ವರಕ್ಕೆ ಈ ಪತ್ರಿಕೆಗಳು ಬೆಳಗಿನ ರೈಲಿನಲ್ಲಿ ಬರುತ್ತಿದ್ದವು. ರಾಮೇಶ್ವರ ನಿಲ್ದಾಣದಿಂದ ಶಂಸುದ್ದೀನ್ ಅವುಗಳನ್ನು ಎತ್ತಿಕೊಂಡು ಮನೆ–ಮನೆಗೆ ವಿತರಣೆ ಮಾಡುತ್ತಿದ್ದ. ಅವನು ಅದನ್ನು ನಿರಾಯಾಸವಾಗಿ ಹಾಗೂ ಸುಸೂತ್ರವಾಗಿ ಮಾಡುತ್ತಿದ್ದ. ಆದರೆ ಎರಡನೇ ಮಹಾಯುದ್ಧ ಬಲು ಬಿರುಸನ್ನು ಪಡೆದಾಗ ನಾವು ಸಹಾ ಪ್ರಪಂಚದ ಬೇರೆ ಕಡೆಯ ವಿದ್ಯಮಾನಗಳ ಬಿಸಿಯನ್ನು ಅನುಭವಿಸಬೇಕಾಯಿತು. ನನ್ನ ಜೀವನವನ್ನೂ, ವೃತ್ತಪತ್ರಿಕೆ ವಿತರಣೆ ವ್ಯವಹಾರವನ್ನೂ ಒಂದು ವಿಚಿತ್ರ ರೀತಿಯಲ್ಲಿ ಅದು ಬಾಧಿಸಿತು.

ಬ್ರಿಟಿಷ್ ಸರಕಾರವು ಸರಕಿನ ಪೂರೈಕೆಯ ಮೇಲೆ ಹಲವಾರು ನಿರ್ಬಂಧಗಳನ್ನು ವಿಧಿಸಿತ್ತು. ದೇಶದಲ್ಲಿ ಒಂದು ರೀತಿಯ ತುರ್ತು ಸ್ಥಿತಿಯೇ ಜಾರಿಯಲ್ಲಿತ್ತು. ನಮ್ಮ ದೊಡ್ಡ ಕುಟುಂಬ ಇದರಿಂದಾಗಿ ಬಲು ಕಷ್ಟವನ್ನು ಅನುಭವಿಸ ಬೇಕಾಯಿತು. ಆಹಾರ, ಬಟ್ಟೆ–ಬರೆ, ಮಕ್ಕಳ ಆಹಾರ ಮುಂತಾದವೆಲ್ಲ ಸಿಗುವುದು ಕಷ್ಟವಾಯಿತು. ನಮ್ಮ ಕುಟುಂಬದಲ್ಲಿ ಹೆಣ್ಣೂ ಗಂಡೂ ಸೇರಿ ಐವರು ಮಕ್ಕಳಿದ್ದೆವು. ಜತೆಗೆ ಚಿಕ್ಕಪ್ಪಂದಿರ ಕುಟುಂಬಗಳೂ ನಮ್ಮೊಂದಿಗೆ ಇದ್ದವು, ಎಲ್ಲರಿಗೂ ಅನ್ನ, ಅರಿವೆ ಹಾಗೂ ಇತರ ಸವಲತ್ತು ಒದಗಿಸಲು ಅಜ್ಜಿಯೂ ನನ್ನ ತಾಯಿಯೂ ಬಲು ಕಷ್ಟಪಡುತ್ತಿದ್ದರು.

ಯುದ್ಧದ ದುಷ್ಪರಿಣಾಮಗಳು ನಮ್ಮ ಜೀವನವನ್ನು ಬಾಧಿಸತೊಡಗಿದಾಗ ಶಂಸುದ್ದೀನ್ ಒಂದು ಸಲಹೆಯನ್ನು ಮುಂದಿಟ್ಟ. ಇದರಿಂದ ನನಗೆ ಸಂತೋಷ ಸಂಭ್ರಮಗಳು ಉಂಟಾದವು. ನಾನು ಉತ್ತೇಜಿತನಾದೆ. ಯುದ್ಧದ ಪರಿಣಾಮವಾಗಿ ರಾಮೇಶ್ವರ ನಿಲ್ದಾಣದಲ್ಲಿನ ರೈಲು ನಿಲುಗಡೆಯನ್ನು ರದ್ದುಗೊಳಿಸಿದ್ದರು. ಇದರಿಂದ ನಮ್ಮ ವೃತ್ತಪತ್ರಿಕೆಗಳ ಗತಿಯೇನು ಎಂಬ ಪ್ರಶ್ನೆ ಉಂಟಾಯಿತು. ಸುದ್ದಿ–ಸಮಾಚಾರ ತಿಳಿಯಲು ಜಾತಕ ಪಕ್ಷಿಗಳಂತೆ ಕಾಯುತ್ತಿದ್ದ ಜನರಿಗೆ ವೃತ್ತಪತ್ರಿಕೆಗಳನ್ನು ತಲುಪಿಸುವ ಬಗೆಯೆಂತು? ಇದಕ್ಕೆ ಶಂಸುದ್ದೀನ್ ಒಂದು ಉಪಾಯವನ್ನು ಕಂಡುಹಿಡಿದ. ರೈಲು ರಾಮೇಶ್ವರ ಧನುಷ್ಕೋಟಿ ಮಾರ್ಗವಾಗಿ ಬಂದು ರಾಮೇಶ್ವರ ನಿಲ್ದಾಣವನ್ನು ತಲುಪಿದಾಗ ಶಂಸುದ್ದೀನನ ಏಜನ್ಸಿಯ ವೃತ್ತಪತ್ರಿಕೆಗಳ ಕಟ್ಟುಗಳನ್ನು

ರೈಲಿನಿಂದ ಪ್ಲಾಟ್ ಫಾರಂಗೆ ಎಸೆಯಬೇಕು. ಅದನ್ನು ಯಾರಾದರೊಬ್ಬರು ಹಿಡಿದುಕೊಳ್ಳಬೇಕು. ಚಲಿಸುತ್ತಿರುವ ರೈಲಿನಿಂದ ಎಸೆಯುವ ವೃತ್ತಪತ್ರಿಕೆಗಳ ಕಟ್ಟುಗಳನ್ನು ಹಿಡಿದು ಒಟ್ಟು ಮಾಡಿಕೊಂಡು ರಾಮೇಶ್ವರದ ಮನೆಮನೆಗೂ ವಿತರಿಸುವ ಸಂತೋಷದಾಯಕವಾದ ಕಾರ್ಯವನ್ನು ಶಂಸುದ್ದೀನ್ ನನಗೆ ಕೊಟ್ಟ.

ನನ್ನ ಉತ್ಸಾಹಕ್ಕೆ ಮೇರೆಯೇ ಇರಲಿಲ್ಲ. ಆಗ ನನಗೆ ಬರೇ ಎಂಟು ವರ್ಷ, ಆದರೆ ನಾನು ಕುಟುಂಬದ ವರಮಾನಕ್ಕೆ ಕೊಡುಗೆ ನೀಡುವವನಾಗಿದ್ದೆ! ನನ್ನ ಅಜ್ಜಿ ಹಾಗೂ ತಾಯಿಯ ಊಟದ ಎಲೆಗಳಲ್ಲಿ ಆಹಾರದ ಪ್ರಮಾಣ ಕಡಿಮೆಯಾಗತೊಡಗಿದ್ದನ್ನು ಅನೇಕ ದಿನಗಳಿಂದ ನಾನು ಗಮನಿಸಿದ್ದೆ. ಹಂಚಲು ಆಹಾರ ಕಡಿಮೆ ಇರುತ್ತಿದ್ದುದೇ ಇದಕ್ಕೆ ಕಾರಣವಾಗಿತ್ತು. ಮಕ್ಕಳಿಗೂ ಗಂಡಸರಿಗೂ ಊಟ ಆದ ಮೇಲೆ ಹೆಂಗಸರಿಗೆ ಸಿಗುವ ಆಹಾರ ಕಡಿಮೆ ಬೀಳುತ್ತಿತ್ತು. ನಾವು ಮಕ್ಕಳಂತೂ ಅರೆ ಹೊಟ್ಟೆ ಉಂಡದ್ದು ಇರಲಿಲ್ಲ. ಹೀಗಾಗಿ ಶಂಸುದ್ದೀನ್ ನನಗೆ ಕೆಲಸ ಕೊಟ್ಟಾಗ ಉತ್ಸಾಹದಿಂದಲೇ ಒಪ್ಪಿಕೊಂಡೆ.

ಆದರೆ ನನ್ನ ಹೊಸ ಕೆಲಸವನ್ನು ನನ್ನ ಮಾಮೂಲಿ ಚಟುವಟಿಕೆಗಳೊಡನೆ ಹೊಂದಿಸಬೇಕಾಗಿತ್ತು. ನನ್ನ ಶಾಲೆ, ಕಲಿಕೆ – ಇದಾವುದಕ್ಕೂ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕಿತ್ತು. ನಮ್ಮ ಮನೆಯ ಮಕ್ಕಳ ಪೈಕಿ ನಾನು ಗಣಿತದಲ್ಲಿ ಚುರುಕಾಗಿದ್ದು ಅದರಲ್ಲಿ ಆಸಕ್ತಿ ವಹಿಸುತ್ತಿದ್ದೆ. ಇದರಿಂದಾಗಿ ನನ್ನ ತಂದೆ ನನ್ನನ್ನು ನಮ್ಮ ಗಣಿತ ಶಿಕ್ಷಕರಲ್ಲಿ ಟ್ಯೂಶನ್‌ಗೆ ಸೇರಿಸಿದ್ದರು. ನನ್ನ ಜತೆ ಇನ್ನು ನಾಲ್ವರು ಹುಡುಗರಿಗೂ ಟ್ಯೂಶನ್ ಕೊಡಲು ಅವರು ಒಪ್ಪಿಕೊಂಡಿದ್ದರು. ಆದರೆ ಅವರದು ಒಂದು ಶರತ್ತು ಇತ್ತು. ನಾವು ಸ್ನಾನಮಾಡಿ ಮುಂಜಾನೆಯೇ ಅವರ ಮನೆಗೆ ಹೋಗಬೇಕು ಎಂಬುದೇ ಈ ಶರತ್ತು. ಹೀಗಾಗಿ ಆ ಟ್ಯೂಶನ್ ನಡೆಯುತ್ತಿರುವ ಒಂದು ವರ್ಷ ಕಾಲ ನಾನು ಬೆಳಕು ಹರಿಯುವ ಮೊದಲೇ ಎದ್ದು ಸ್ನಾನಮಾಡಿ ಟ್ಯೂಶನ್‌ಗೆ ಹೋಗುತ್ತಿದ್ದೆ. ನನ್ನ ತಾಯಿ ನನ್ನನ್ನು ಅಲುಗಾಡಿಸಿ ಎಬ್ಬಿಸಿ, ಸ್ನಾನಕ್ಕೆ ನೀರು ಸಿದ್ಧಮಾಡಿಕೊಟ್ಟು, ಸ್ನಾನಮಾಡಲು ಸಹಾಯ ಮಾಡಿ ಗಣಿತದ ಶಿಕ್ಷಕರ ಮನೆಗೆ ಟ್ಯೂಶನ್‌ಗೆ ಕಳಿಸುತ್ತಿದ್ದರು. ಅಲ್ಲಿ ನಾನು ಒಂದು ತಾಸು ಕಾಲ ಕಲಿತು ಐದು ಗಂಟೆಗೆ ಮನೆಗೆ ಬರುತ್ತಿದ್ದೆ. ಆ ವೇಳೆಗೆ ನನ್ನನ್ನು ಅರೇಬಿಕ್ ಶಾಲೆಗೆ ಕರೆದೊಯ್ಯಲು ತಂದೆಯವರು ತಯಾರಾಗಿರುತ್ತಿದ್ದರು. ಅಲ್ಲಿ ನಾನು ಕುರಾನ್ ಶರೀಫ್ ಕಲಿಯುತ್ತಿದ್ದೆ.

ಕುರಾನ್ ಶರೀಫ್ ಪಾಠ ಮುಗಿದ ಕೂಡಲೇ ನಾನು ರೈಲ್ವೇ ನಿಲ್ದಾಣಕ್ಕೆ ಓಡುತ್ತಿದ್ದೆ. ಅಲ್ಲಿ ನಾನು ಒಂದು ಕಾಲಿನಿಂದ ಇನ್ನೊಂದು ಕಾಲಿಗೆ ಶರೀರದ ತೂಕವನ್ನು ವರ್ಗಾಯಿಸುತ್ತಾ ಕುಣಿಯುತ್ತಿದ್ದೆ. ಕಣ್ಣುಗಳು ರೈಲು ಕಾಣಿಸಿಕೊಳ್ಳುವ ದಿಕ್ಕಿನ ಮೇಲೆ ಕೇಂದ್ರೀಕೃತವಾಗಿರುತ್ತಿದ್ದವು. ಕಿವಿಗಳು ಉಗಿ ಇಂಜಿನಿನ ಶಿಷಲಿಗಾಗಿ ಕಾದಿರುತ್ತಿದ್ದವು. ರೈಲು ಬಂಡಿಯು ಭಾರೀ ಗರ್ಜನೆಯೊಡನೆ ನಿಲ್ದಾಣದ ಮೂಲಕ ಮುಂದಕ್ಕೆ ಸಾಗುತ್ತಿತ್ತು. ರೈಲಿನಿಂದ ಕೆಳಗೆ, ಪ್ಲಾಟ್‌ಫಾರಂಗೆ ಪತ್ರಿಕೆಗಳ ಕಟ್ಟುಗಳು ಧಡಲ್ ಎಂದು ಬೀಳುತ್ತಿದ್ದವು. ಆಮೇಲೆ ರೈಲು ಮುಂದಕ್ಕೆ ಚಲಿಸುತ್ತಿದ್ದಂತೆ ಶಂಸುದ್ದೀನನ ಸಹೋದ್ಯೋಗಿಯು ನನ್ನತ್ತ ಕೈಬೀಸುತ್ತಿದ್ದ. ರೈಲು ಹೊರಟ ಕೂಡಲೇ ನನ್ನ ಕೆಲಸ ಪ್ರಾರಂಭವಾಗುತ್ತಿತ್ತು.

ನಾನು ಪತ್ರಿಕೆಗಳ ಕಟ್ಟುಗಳನ್ನು ಬಿಚ್ಚಿ ಆಯಾ ವಠಾರಕ್ಕೆ ಯಾವೆಲ್ಲ ಪತ್ರಿಕೆಗಳು ಎಷ್ಟು ಸಂಖ್ಯೆಯಲ್ಲಿ ಬೇಕೋ ಅಷ್ಟನ್ನು ಬೇರ್ಪಡಿಸಿ ಕಟ್ಟುಗಳನ್ನಾಗಿ ಮಾಡಿ ಅವುಗಳನ್ನು ವಿತರಣೆ ಮಾಡಲು ಹೊರಡುತ್ತಿದ್ದೆ. ರಾಮೇಶ್ವರದಲ್ಲಿ ಎಲ್ಲರ ಮನೆಗೆ ಪತ್ರಿಕೆ ಹಾಕಲು ನನಗೆ ಸುಮಾರು ಒಂದು ಗಂಟೆ ಬೇಕಾಗುತ್ತಿತ್ತು. ರಾಮೇಶ್ವರದಲ್ಲಿ ಯಾರು ಯಾವ ಪತ್ರಿಕೆ ಓದುತ್ತಾರೆ ಎಂಬುದು ಬೇಗನೇ ಗ ಗೊತ್ತಾಯಿತು. ಅನೇಕ ಜನರು ಪತ್ರಿಕೆಗಾಗಿ ಮನೆ ಮುಂದೆ ಕಾದಿರುತ್ತಿದ್ದರು. ಆಗ ನನ್ನೊಡನೆ ಒಂದೆರಡು ಸ್ನೇಹದ ಮಾತುಗಳನ್ನು ಎಲ್ಲರೂ ಆಡುತ್ತಿದ್ದರು. ಮನೆಗೆ ಬೇಗ ಹೋಗು, ಶಾಲೆಗೆ ತಡಮಾಡಬೇಡ ಎಂದು ತಿಳಿಹೇಳುವವರೂ ಇದ್ದರು. ಎಂಟು ವರ್ಷದ ಚುರುಕಾದ ಹುಡುಗನಿಂದ ಪತ್ರಿಕೆ ಇಸಿದುಕೊಳ್ಳುವುದು ಎಲ್ಲರಿಗೂ ಸಂತೋಷದ ವಿಷಯವೇ ಆಗಿತ್ತೆಂದು ನನಗೆ ಈಗ ಅನಿಸುತ್ತಿದೆ.

ನಮ್ಮ ಪಟ್ಟಣವು ಪೂರ್ವ ಕರಾವಳಿಯಲ್ಲಿ ಇರುವುದರಿಂದ ಬೆಳಿಗ್ಗೆ ಎಂಟು ಗಂಟೆಗೆ ನನ್ನ ಕೆಲಸ ಮುಗಿದಾಗ ಸೂರ್ಯ ಬಾನಲ್ಲಿ ಅಷ್ಟೆತ್ತರಕ್ಕೆ ಬಂದಿರುತ್ತಿದ್ದ. ಈಗ ನಾನು ಮನೆಗೆ ಬರುತ್ತಿದ್ದೆ. ಅಮ್ಮ ಊಟ ತಯಾರಿಸಿ ನನಗಾಗಿ ಕಾದಿರುತ್ತಿದ್ದರು. ಅದು ಸಾದಾ ಊಟವಾಗಿರುತ್ತಿತ್ತು. ಆದರೆ ಆ ಘಳಿಗೆಯಲ್ಲಿ ಈ ಬ್ರಹ್ಮಾಂಡ ಹಸಿವು ಇರುತ್ತಿತ್ತು. ತಾಯಿ ಒಂದಗುಳೂ ಅನ್ನ ಉಳಿಯದ ಹಾಗೆ ಊಟ ಮಾಡುವಂತೆ ನೋಡಿಕೊಳ್ಳುತ್ತಿದ್ದರು; ಆಮೇಲೆ ಚೀಲ ಕೊಟ್ಟು ಶಾಲೆಗೆ ಕಳಿಸುತ್ತಿದ್ದರು. ಆದರೆ ನನ್ನ ಕೆಲಸ ಇನ್ನೂ ಮುಗಿದಿರುತ್ತಿರಲಿಲ್ಲ.

ಸಾಯಂಕಾಲ ಶಾಲೆಯಿಂದ ಬಂದ ಮೇಲೆ ವೃತ್ತ ಪತ್ರಿಕೆಗಳ ಚಂದಾ ಸಂಗ್ರಹಿಸುವುದಕ್ಕೆ ಶಂಸುದ್ದೀನನ ಪರವಾಗಿ ಮನೆ–ಮನೆ ತಿರುಗಬೇಕಾಗುತ್ತಿತ್ತು. ನಂತರ ಶಂಸುದ್ದೀನನ ಭೇಟಿ; ಅವನು ಅಂದಂದಿನ ಲೆಕ್ಕವನ್ನು ಅಂದಂದೇ ಚುಕ್ತಾ ಮಾಡುತ್ತಿದ್ದ.

ಆ ಸಂದರ್ಭದಲ್ಲಿ ಸಮುದ್ರ ಕಿನಾರೆಯಲ್ಲಿ ಎಲ್ಲೋ ಕುಳಿತು ಶಂಸುದ್ದೀನನೋ ಜಲಾಲುದ್ದೀನನೋ ಅಂದಿನ ಪತ್ರಿಕೆಗಳನ್ನು ಬಿಡಿಸಿ ಓದತೊಡಗುತ್ತಿದ್ದರು. ಸಮೀಪದಲ್ಲೇ ನಾನಿರುತ್ತಿದ್ದೆ. ಸಮುದ್ರದಿಂದ ಹಿತವಾದ ಗಾಳಿ ಬೀಸುತ್ತಿತ್ತು. ಎಲ್ಲರೂ ದಿನಮಣಿಯಲ್ಲಿ ಸುದ್ದಿಗಳನ್ನು ಓದುತ್ತಿದ್ದೆವು, ಸುದ್ದಿಯನ್ನು ಅವರಿಬ್ಬರಲ್ಲಿ ಯಾರಾದರೊಬ್ಬರು ಗಟ್ಟಿಯಾಗಿ ಓದುತ್ತಿದ್ದರು. ನಿಧಾನವಾಗಿ ಹೊರಗಿನ ಪ್ರಪಂಚವು ನಮ್ಮ ಅಂತರ್ಮನಸ್ಸನ್ನೂ ಭಾವಕೋಶಗಳನ್ನೂ ತುಂಬಿಕೊಳ್ಳುತ್ತಿತ್ತು. ಗಾಂಧಿ, ಕಾಂಗ್ರೆಸ್, ಹಿಟ್ಲರ್, ಪೆರಿಯಾರ್ ಇ.ವಿ. ರಾಮಸ್ವಾಮಿ ಅವರ ಮಾತುಗಳು, ಒತ್ತಾಯಗಳು, ಘೋಷಣೆಗಳು ಸಾಯುಂಕಾಲದ ವಾತಾವರಣದಲ್ಲಿ ಮಿಳಿತವಾಗುತ್ತಿದ್ದವು, ನಾನು ಚಿತ್ರಗಳ ಮೇಲೆ ಶೀರ್ಷಿಕೆಗಳ ಮೇಲೆ ನನ್ನ ಕೈ ಬೆರಳುಗಳನ್ನು ಇರಿಸಿ ಮನನ ಮಾಡಿಕೊಳ್ಳುತ್ತಾ ಹೊರ ಜಗತ್ತಿನಲ್ಲಿ ಇವರೆಲ್ಲರೊಂದಿಗೆ ಇರುವುದೆಂದರೆ ಹೇಗಿರುವುದೆಂದು ಕಲ್ಪಿಸಿಕೊಳ್ಳುತ್ತಿದ್ದೆ. ಒಂದು ದಿನ ನಾನೂ ಮದ್ರಾಸು, ಮುಂಬೈ, ಕಲ್ಕತ್ತಗಳಂಥ ದೊಡ್ಡ ನಗರಕ್ಕೆ ಹೋಗುವೆನೆಂದು ಕಲ್ಪಿಸಿಕೊಳ್ಳುತ್ತಿದ್ದೆ. ಗಾಂಧಿ, ನೆಹರೂ ಅವರಂತಹ ವ್ಯಕ್ತಿಗಳನ್ನು ಭೇಟಿಯಾದರೆ ನಾನು ಅವರೊಡನೆ ಏನು ಮಾತನಾಡುವೆ? ಅಂತಹ ಆಲೋಚನೆಗಳಿಗೆ ನನ್ನ ಒಡನಾಡಿಗಳ ಕೂಗಿನಿಂದ ಕಡಿವಾಣ ಬೀಳುತ್ತಿತ್ತು. ಆಮೇಲೆ ರಾತ್ರಿಯ ಊಟದ ಸಮಯ. ಅದರ ಮೊದಲೋ, ಅನಂತರವೋ ಹೋಂ ವರ್ಕ್ ಮಾಡಲೇಬೇಕಿತ್ತು. ಎಂಟು ವರ್ಷದ ಪೋರನಾದರೂ ಅವನ ಶಕ್ತಿಗೂ ಒಂದು ಮಿತಿಯೆಂಬುದು ಉಂಟಲ್ಲವೇ ? ರಾತ್ರಿ ಒಂಭತ್ತು ಗಂಟೆಗೆಲ್ಲಾ ನಾನು ಮಲಗಿ ನಿದ್ರಿಸಿ ಬಿಡುತ್ತಿದ್ದೆ. ಮರುದಿನ ವಿದ್ಯಾರ್ಥಿಯಾಗಿ ಶಾಲಾ ಕಲಿಕೆಯೂ ಉದ್ಯೋಗಸ್ಥನಾಗಿ ಪತ್ರಿಕೆಗಳ ವಿತರಣಾ ಕರ್ತವ್ಯವೂ ಇದ್ದುದರಿಂದ ತಡಮಾಡದೇ ಮಲಗುವುದು ಅಗತ್ಯ ವಾಗಿತ್ತು.

ಈ ರೀತಿಯ ಕಾರ್ಯಕ್ರಮ ಸುಮಾರು ಒಂದು ವರ್ಷ ನಡೆಯಿತು. ಪತ್ರಿಕೆಗಳನ್ನು ವಿತರಿಸುತ್ತಾ ಓಡಾಡಿದ ಆ ಒಂದು ವರ್ಷದಲ್ಲಿ ನಾನು ಇನ್ನಷ್ಟು

ಎತ್ತರ ಬೆಳೆದೆ. ಚರ್ಮ ಇನ್ನಷ್ಟು ಕಂದು ಆಯಿತು. ಕೈಯಲ್ಲಿ ಪತ್ರಿಕೆಗಳ ಕಟ್ಟು ಹಿಡಿದು ಒಂದೆಡೆಯಿಂದ ನಿರ್ದಿಷ್ಟ ಸ್ಥಳಕ್ಕೆ ಓಡಲು ಎಷ್ಟು ಸಮಯ ಬೇಕು ಎಂಬುದು ನನಗೆ ನಿಖರವಾಗಿ ಗೊತ್ತಾಯಿತು. ಇದರಿಂದಾಗಿ ರಾಮೇಶ್ವರದ ಪ್ರತೀ ಪ್ರದೇಶಕ್ಕೂ ದಿನಾಲೂ ಒಂದೇ ಸಮಯಕ್ಕೆ ಪತ್ರಿಕೆ ಬಟವಾಡೆ ಮಾಡುವ ನನಗೆ ಸಾಧ್ಯವಾಗುತ್ತಿತ್ತು. ಶಂಸುದ್ದೀನನಿಗೆ ಯಾವ ಪತ್ರಿಕೆ ಗ್ರಾಹಕನಿಂದ ಎಷ್ಟು ಹಣ ಸಂದಾಯವಾಗಿದೆ, ಯಾವ ಗ್ರಾಹಕ ಎಷ್ಟು ಬಾಕಿ ಮಾಡಿಕೊಂಡಿದ್ದಾರೆ ಎಂದು ಮನಸ್ಸಿನಲ್ಲೇ ಲೆಕ್ಕಾಚಾರ ಮಾಡಿ ಹೇಳುವುದು ಸಾಧ್ಯವಾಯಿತು. ಉದ್ಯೋಗ ಮಾಡಬೇಕಿದ್ದರೆ, ಯಾವ ಕಾರಣ, ನೆಪಗಳನ್ನೂ ಲೆಕ್ಕಿಸದೆ ಪ್ರತಿದಿನವೂ ಒಂದೇ ಸಮಯಕ್ಕೆ ಎದ್ದು ಕೆಲಸಕ್ಕೆ ಹೊರಡಬೇಕು ಎಂಬ ಶಿಸ್ತು ನನ್ನಲ್ಲಿ ಮೂಡಿತು. ನನಗೆ ಹೊಂವರ್ಕ್, ನಮಾಜು–ಪ್ರಾರ್ಥನೆ ಎಲ್ಲವೂ ಇರಬಹುದು, ಆದರೆ ಮದ್ರಾಸು–ಧನುಷ್ಕೋಟಿ ಮೇಲ್ ಗಾಡಿ ಮಾತ್ರ ನನಗಾಗಿ ಕಾದು ನಿಲ್ಲದು– ನಾನು ರೈಲು ನಿಲ್ದಾಣದಲ್ಲಿ ಸರಿಯಾದ ಸಮಯಕ್ಕೆ ಸರಿಯಾದ ಸ್ಥಳದಲ್ಲಿ ಪತ್ರಿಕೆಗಳ ಕಟ್ಟುಗಳನ್ನು ತೆಗೆದುಕೊಳ್ಳಲು ನಿಲ್ಲಲೇಬೇಕು. ನಾನು ಹೊಣೆಗಾರಿಕೆ ವಹಿಸಿಕೊಂಡು ಕೆಲಸ ಮಾಡಿದ ಮೊದಲ ಸಂದರ್ಭ ಅದಾಗಿತ್ತು. ಪತ್ರಿಕೆಗಳನ್ನು ತೆಗೆದುಕೊಂಡು ವಿತರಣೆ ಮಾಡಿ ಶಂಸುದ್ದೀನ್ ನನ್ನಲ್ಲಿ ಇರಿಸಿದ ಭರವಸೆಯನ್ನು ಪೂರೈಸಿದ ತೃಪ್ತಿಯೂ ನನ್ನದಾಗಿತ್ತು. ನನಗೆ ಅದು ಅತ್ಯಂತ ಸಂತೋಷವನ್ನು ನೀಡಿದ ಕೆಲಸವಾಗಿತ್ತು: ರಾತ್ರಿ ಮಲಗುವ ವೇಳೆಗೆ ನಾನು ಬಳಲಿ, ಶಕ್ತಿಗುಂದಿ ಹೋಗುತ್ತಿದ್ದೆನಾದರೂ ಕೆಲಸ ಮುಗಿಸಿದ ಸಂತೋಷವು ಸರಿಗಟ್ಟುವಂತಹದು ಯಾವುದೂ ಇರಲಿಲ್ಲ. ಈ ಹೆಚ್ಚುವರಿ ಕೆಲಸವನ್ನು ವಹಿಸಿಕೊಂಡು ಯಾಕೆ ತ್ರಾಸ ಪಡುತ್ತೀಯಾ ಎಂದು ನನ್ನ ತಾಯಿ ನನ್ನನ್ನು ಆಗಾಗ್ಗೆ ತರಾಟೆಗೆ ತೆಗೆದುಕೊಳ್ಳುತ್ತಿದ್ದರು, ಆದರೆ ನಾನು ಒಂದು ಮುಗುಳ್ನಗು ಸಹಿತ ತಲೆಯಾಡಿಸಿಬಿಡುತ್ತಿದ್ದೆ. ನನ್ನ ಸಂಪಾದನೆಯಿಂದ ನಮ್ಮ ಕುಟುಂಬಕ್ಕೆ ಸಹಾಯವಾಗುತ್ತಿದೆ ಎಂಬ ಅರಿವು ನನಗಿತ್ತು. ಅಲ್ಲದೆ ಎಂಟನೇ ವರ್ಷದಲ್ಲಿಯೇ ಒಂದು ವೃತ್ತಿಯನ್ನು ಮಾಡಬಲ್ಲಂತಹ ಸಾಮರ್ಥ್ಯ ಹಾಗೂ ಉತ್ಸಾಹ ನನ್ನಲ್ಲಿರುವುದನ್ನು ನೋಡಿ ತಾಯಿ ಮನಸ್ಸಿನೊಳಗೇ ಹೆಮ್ಮೆ ಪಟ್ಟುಕೊಂಡಿದ್ದರು ಎಂದೂ ನನಗೆ ತಿಳಿದಿತ್ತು, ಆದ್ದರಿಂದ ನನಗೆ ಆ ನನ್ನ ಕೆಲಸದ ಬಗ್ಗೆ ಹೆಮ್ಮೆಯೇ ಇತ್ತು.

* * *

# ಅಪ್ಪ

– ಸಿದ್ಧಲಿಂಗಯ್ಯ

ಮನೆಯೇ ಇಲ್ಲದ ಭಿಕಾರಿಯಂತೆ
ಮನಸೇ ಇಲ್ಲದ ಮೌನಿಯಂತೆ
ಹೆಂಡತಿ ಮಕ್ಕಳ ಮರೆತವನಂತೆ
ಗಿಡಮರಗಳ ಜೊತೆ ನೀ ಬೆಳೆದೆ.

ಭಾರದ ನೊಗಕ್ಕೆ ಹೆಗಲನು ಕೊಟ್ಟು
ಗದ್ದೆಯ ಉತ್ತೆ ಎತ್ತಾಗಿ
ಹಗಲಿರುಳೆನ್ನದೆ ದುಡಿಯುತಲಿದ್ದೆ
ಧಣಿಗಳ ಹಟ್ಟಿಯ ತೊತ್ತಾಗಿ.

ಒಡೆಯರ ತೋಟವ ಕಾಯುತಲಿದ್ದೆ
ಆಲೆಮನೆಯಲಿ ಅರೆಯುತಲಿದ್ದೆ
ಹೊಟ್ಟೆಯ ಪಾಡಿಗೆ ಬಟ್ಟೆಯ ಗಿರಣಿಯ
ಕಾರ್ಮಿಕನಾಗಿ ನೀ ದುಡಿದೆ.

ಸಾಲ ವಸೂಲಿಯ ವಾಹನದಲ್ಲಿ
ಬಂದಿಳಿದಾಗ ರಾಕ್ಷಸರು
ಕೈ ಕೈ ಮುಗಿದೆ ಕಾಲನು ಹಿಡಿದೆ
ಕಣ್ಣೀರಿಟ್ಟೆ ದೈನ್ಯದಲಿ.

ಬೈದರೆ ನಿನ್ನಲಿ ಬೈಗುಳವಿಲ್ಲ
ಒದ್ದವರನ್ನೆ ಬುದ್ಧೀ ಎಂದೆ
ವೈರಕೆ ನಿನ್ನಲಿ ವೈರವೆ ಇಲ್ಲ
ಬುದ್ಧನಂತೆ ನೀ ಬದುಕಿದ್ದೆ.

ತೆಂಗಿನ ಮರವನು ಏರಿದೆ ನೀನು
ಅಡಕೆಯ ಮರವನು ಏರಿದೆ ನೀನು
ಉರಿಯುವ ಸೂರ್ಯನ ಬಿಸಿಲಿನ ಝಳಕೆ
ಸುಟ್ಟು ಕರಕಲಾದೆ.

ಅಪ್ಪಾ ನೀನು ಕನಸಿಗೆ ಬರುವೆ
ಬೆದರಿದೆ ಗೋವಿನ ರೂಪದಲಿ
ಕಾಣುವೆ ನೀನು ಬಲೆಯಲಿ ನರಳುವ
ಪಾರಿವಾಳಗಳ ಗುಂಪಿನಲಿ.

* * *

**ಓದು ಪತ್ಯ**

# ಮೂಕಜ್ಜಿಯ ಕನಸುಗಳು

– ಶಿವರಾಮ ಕಾರಂತ

ಇನ್ನು ನಿಮಗೆ ನಮ್ಮ ಊರಿನ ಕತೆಯನ್ನು ಹೇಳುತ್ತೇನೆ. ಇಂದು ನಮ್ಮ ಊರಿಗೆ ಬಂದು ಹೋಗುವ ಜನರು ಕಡಿಮೆ. ಕಾಡುಗುಡ್ಡಗಳ ಸೆರಗದು, ಎರಡು ಮೂರು ಹರದಾರಿಗಳೊಳಗೆ ಪಶ್ಚಿಮ ಘಟ್ಟದ ನಾಗನಕುಲು ಎಂಬ ಬರೆಯೇ ಬರುತ್ತದೆ. ನಮ್ಮ ಊರಿನ ಒಟ್ಟು ಒಂದು ಮೈಲು ಪಾಸಲೆಯಲ್ಲಿ ನೂರು ಮನೆಗಳು ಇವೆಯೋ ಇಲ್ಲವೋ. ಅದೂ ಏನೆನ್ನುತ್ತೀರಿ? ಎಲ್ಲ ಜಾತಿಯಸ್ಥರ ಮನೆಗಳು, ನಮ್ಮ ನಾಡಿನಲ್ಲಿ ಎಷ್ಟೊಂದು ಜಾತಿ ಮತ್ತು ಮತಗಳು ಇವೆಯೋ ಅವೆಲ್ಲವೂ ಇವೆ. ಮೊಗೇರರು, ಕುಡುಬಿಯರು, ಬಿಲ್ಲವರು, ಜೈನರು, ಬ್ರಾಹ್ಮಣರು, ಗಾಣಿಗರು, ಅಡ್ಡಜಾತಿಯವರು, ನೀಟಜಾತಿಯವರು– ಎಂದು ಜಾತಿಗಳ ಮಟ್ಟಿಗೆ ಪ್ರಾತಿನಿಧಿಕ ಹಳ್ಳಿ ನಮ್ಮದು. ಒಂದು, ಎರಡು, ಇಲ್ಲವೆ ಮೂರು, ನಾಲ್ಕು ಮನೆ ಒಂದೊಂದು ಜಾತಿಯವರದ್ದು, ಇಲ್ಲಿನ ಯಾರೊಬ್ಬರೂ ಊರು ಮನೆಯಲ್ಲಿ ನೆಂಟಸ್ತಿಕೆ ಬೆಳೆಯಿಸುವಂತಿಲ್ಲ. ಆಚೀಚಿನ ಹಳ್ಳಿಗಳಿಂದಲೇ ಹೆಣ್ಣನ್ನು ತರಬೇಕು; ಕೊಡಬೇಕು. ಅಂಥದರಲ್ಲಿ ಇಲ್ಲಿಯೇ ಹುಟ್ಟಿ ಇಲ್ಲಿಯೇ ಬೆಳೆದು ಸಾಯದೆಯೂ, ಬದುಕದೆಯೂ ಉಳಿದಿರುವವಳು ತಾನೊಬ್ಬಳೇ ಎನ್ನುವುದುಂಟು, ನಮ್ಮ ಅಜ್ಜಿ.

ಅವರಿಗೆ ಪ್ರಿಯವಾಗಿರುವ ಒಂದು ತಾವು ನಮ್ಮ ಮನೆ ಮುಂದೆ ಹತ್ತು ಮಾರು ದೂರದಲ್ಲಿರುವ ಅಶ್ವತ್ಥದ ಕಟ್ಟೆ. ಚಿಕ್ಕವನಾಗಿರುವಾಗ ನಾನು ಅವರನ್ನು "ಇದೇನು ಅಜ್ಜಿ, ಇಲ್ಲಿಗೆ ಬಂದು ಕುಳಿತಿರುವುದೆಂದರೆ ನಿಮಗೆ ಅಷ್ಟು ಖುಷಿ" ಎಂದು ಪ್ರಶ್ನಿಸಿದ್ದೆ. ಅವರು ಹೀಗೆಂದ ನೆನಪಿದೆ: "ಮಾಣಿ, ಇದೂ ನನ್ನ ಹಾಗೆಯೇ ಇಲ್ಲಿಯೇ ಹುಟ್ಟಿ, ಇಲ್ಲಿಯೇ ಬೆಳೆದದ್ದು. ನಾನು ಒಂದು ನಾಲ್ಕು ದಿನ ನನ್ನ ಗಂಡನ ಮನೆಗೆ ಹೋಗಿ ಇದ್ದದ್ದು ನಿಜ. ನಾಲ್ಕೇ ದಿನ. ಆಮೇಲೆ ಇದ್ದದ್ದು ಇಲ್ಲಿಯೇ. ಈ ಅಶ್ವತ್ಥಕ್ಕೂ ಪ್ರಾಯ ಸಂದಿತು. ನನಗೂ ಸಂದಿದೆ. ಅದರ ಮುಂದೆ ನನ್ನ ಪ್ರಾಯ ಭಾರೀ ಅಲ್ಲ. ಅದಕ್ಕೆ ಸಾವಿರವೋ, ಹತ್ತು ಸಾವಿರವೋ.

"ಹತ್ತು ಸಾವಿರವೇ ? ಅಷ್ಟು ವರ್ಷಗಳ ತನಕ ಯಾವ ಮರವೂ ಬದುಕಲಾರದು."

"ಮಗೂ, ಇದು ಅಶ್ವತ್ಥದ ಮರ. ಅಂತಿಂಥ ಮರವಲ್ಲ. ಈ ಮರ ನಿನ್ನೆ ಮೊನ್ನೆಯದಲ್ಲ. ಇದರ ಸುತ್ತ ಕಾಣಿಸುತ್ತಿರುವುದು ಹೊಸ ಬೇರು. ಹಳೆಯ ದಿಂಡು ಎಲ್ಲೋ ಏನೋ ಬೆಳೆದಿದೆ ಇಲ್ಲೇ. ನನ್ನ ಅಂದಾಜು–ಅದಕ್ಕೆ ಐನೂರರ ಮೇಲೆ ಆಗಿರಬಹುದು ವರ್ಷ. ಅದಕ್ಕಿಂತ ಹಿಂದೆ ಅಂಥದೇ ಮರ ಇಲ್ಲೇ ಇದ್ದಿತ್ತು ಎಂದು ನನ್ನ ಅಂದಾಜು. ಅಂತೂ ನಮ್ಮ ಮೂಡೂರು ಊರು ಆದಂದಿನಿಂದಲೂ ಈ ಮರ ಇಲ್ಲಿಯೇ ಇದ್ದಿತ್ತು ಎಂದು ನನ್ನ ಯೋಚನೆ.

ನಾನು ಶಾಲೆಗೆ ಹೋಗಿ ನಾಲ್ಕು ಚುರುಕಿನ ಮಾತು ಕಲಿತ ಜಂಭಕ್ಕೆ "ಅಜ್ಜಿ, ನಮ್ಮದು ಎಂಥ ಊರು? ಸಾಗರ, ಶಿವಮೊಗ್ಗ, ಕುಂದಾಪುರ, ಉಡುಪಿ– ಅವಾದರೂ ಊರುಗಳು" ಎಂದೆ.

ಅವರು ನಕ್ಕರು: "ಹೌದು, ಹೌದು. ಈಗ ನಮ್ಮ ಊರು ಹೀಗಿದೆ ಅಂತಲೇ? ಹಿಂದೆ ಇದರ ಅಪ್ಪನ ಹಾಗಿನ ಊರು ಇಲ್ಲಿತ್ತು. ಇಕ್ಕೇರಿಗಿಂತ ದೊಡ್ಡದು. ಇಲ್ಲಿ ಒಂದು ಹರದಾರಿಯ ಸುತ್ತಿನೊಳಗೆ ಕಾಡಿನಲ್ಲಿ ಬಿದ್ದುಹೋದ ಗೋಡೆ, ಪೌಳಿ, ಮತ್ತೊಂದು– ಒಂದೆರಡು ಅನ್ನುತ್ತೀಯಾ?" ಎಂದರು.

ಅವರ ಮಾತನ್ನು ನೆನೆದು ಬೇಸಿಗೆಯ ರಜೆ ಬಂದಾಗಲೆಲ್ಲ ಬಿಡುವು ಸಿಕ್ಕಿದಾಗಲೆಲ್ಲ ನನ್ನ ಸ್ನೇಹಿತ ಜನಾರ್ದನನನ್ನು ಕಟ್ಟಿಕೊಂಡು ನಮ್ಮ ಊರಿನ ಬರಿ ಬಯಲುಗಳನ್ನು ಮಾತ್ರವಲ್ಲ, ಕಾಡು ಗುಡ್ಡಗಳಲ್ಲೂ ಅಲೆದಾಡತೊಡಗಿದೆ. ನನ್ನ ತಮ್ಮ ನಾರಾಯಣ ಚಿಕ್ಕವನೆಂಬುದರಿಂದ ಅವನ ಕಣ್ಣನ್ನು ತಪ್ಪಿಸಿಕೊಂಡು ಹೋಗುತ್ತಿದ್ದೆವು. ನಮ್ಮ ಅಜ್ಜಿ ಹೇಳಿದ್ದು ನಿಜ. ನಮ್ಮ ಮನೆಯ ಅತೀ ಸಮೀಪದಲ್ಲೇ ಕನಿಷ್ಠ ಮೂರು ದೇವರ ಹಾಳು ಗುಡಿಗಳಿವೆ. ಆಚೀಚಿನ ಕಾಡುಗುಡ್ಡಗಳಲ್ಲಿ, ದೊಡ್ಡ ದೇವಾಲಯಗಳು ಯಾವುವೂ ಇಲ್ಲ. ಇದ್ದುದರಲ್ಲಿ ಊರಿನ ಈಶ್ವರನ ಗುಡಿ ದೊಡ್ಡದು, ಆದರೆ ಹಿಂದೆ ಅಂಥ ಹಲವಾರು ಗುಡಿಗಳಿದ್ದಿರಬೇಕು. ನಾಗನಕಲ್ಲುಗಳಿಗೆ ದಿಕ್ಕಿಲ್ಲ. ಅಲ್ಲಿ ಇಲ್ಲಿ ಎಸೆದ ಲಿಂಗಗಳೂ, ಒಡೆದ ಮೂರ್ತಿಗಳೂ ಹುಡುಕಿ ಹೊದರೆ ಕಾಣಸಿಗುತ್ತವೆ. ಒಂದೊಂದು ದೇವರ ಗುಡಿಗೆ ಐವತ್ತು ಐವತ್ತರಂತೆ ಭಕ್ತರ ಮನೆಗಳಿವೆಯೆಂದು ಎಣಿಕೆ ಹಾಕಿದರೂ ಸಹ ಒಂದು

ಮೂನ್ನೂರು ಮನೆಗಳಾದರೂ ಇಲ್ಲಿದ್ದಿರಬೇಕು. ಅವುಗಳಲ್ಲಿ ಒಟ್ಟಿಂದ ಒಂದು ಮೂರು ಸಾವಿರದಷ್ಟು ಜನವಾದರೂ ಊರಲ್ಲಿದ್ದಿರಬೇಕು ಎಂದು ಅಂದಾಜು ಮಾಡಿಕೊಂಡೆ. ಅದಕ್ಕಿಂತ ಹೆಜ್ಜೆಗೆ ನನ್ನ ಕುತೂಹಲ ಮುಂದುವರಿಯಲಿಲ್ಲ. ಅಷ್ಟರ ಹಿಗ್ಗಿನಿಂದ ಅಜ್ಜಿಗೆ ಅದನ್ನೆಲ್ಲ ಬಗ್ಗೆ ಹೇಳಿದೆ. ಅವರು "ಹೌದಪ್ಪ, ಅನಾದಿಕಾಲದಲ್ಲಿ ಇದು ಬಹಳ ದೊಡ್ಡ ಪಟ್ಟಣವಾಗಿತ್ತು. ಈಗ ಕಾಲಗತಿ ಕೆಟ್ಟು ಯಾರೂ ಕೇಳುವವರಿಲ್ಲವಾಗಿದೆ' ಎಂದರು.

ಮತ್ತೊಂದು ಗಳಿಗೆಗೆ ನಗುತ್ತ ಈ ಊರೇನು, ನಾನೇನು, ನೀನೇನು? ಏಳುವುದು, ಬೀಳುವುದು ಕೆಲಸ, ನಡುವೆ ಇರುವ ನಾಲ್ಕು ದಿನ ಬಾಳುವುದು, ನಾಯಿಗಳ ಹಾಗೆ ಬಳುವಟ್ಟೆ ತಿರುಗಾಡಿಕೊಂಡು ಇರುವುದು, ಮತ್ತೊಂದು ದಿವಸ ಇಲ್ಲಿಂದ ಹೊರಡುವುದು" ಎಂದರು.

ಹಾಗೆಯೇ, ನಮ್ಮ ಅಜ್ಜಿ ಅನ್ನುತ್ತಿದ್ದ ನೆನಪು ನನಗೆ: "ಈ ಮೂಡೂರಿಗೆ ಮೂರೂರು ಎಂಬ ಹೆಸರಿತ್ತಂತೆ. ಇಲ್ಲಿ ಮತ್ತು ಇದು ಆಚೀಚೆ ಮೂರು ಕಾಡು ಮತ್ತು ಹಾಡಿಗಳ ಸೆರಗುಗಳಿವೆ. ಅವು ಮೂರು ಕೂಡಿ ಒಂದು ಊರಾಗಿತ್ತಂತೆ. ಜನರ ಬಾಯಿ ತೊದಲಿ ಆ ಮೂರೂರು ಮೂಡೂರು ಆಯತು. ಈಗ ಕೇಳಿದರೆ ಮೂಡೂರು ನಮ್ಮದು ಎನ್ನುತ್ತಾರೆ. ನಮ್ಮದು ನಡೂರು, ಆಚಿನದು ಮೂಡೂರು; ನಮ್ಮ ಈಚಿನದು ಪಡೂರು, ಆಚೆ ಮೂಡೂರಿನಲ್ಲಿ ಒಂದು ಹಳೆಯ ಬಸರೀ ಮರವಿದ್ದಿರಬೇಕು. ಅದರ ಸುತ್ತಲೂ ಒಂದು ಕಟ್ಟೆ ಇದ್ದಿರಬೇಕು. ಅದಕ್ಕೆ ಬಸರೀಕಟ್ಟೆ ಎಂದು ಹೆಸರು. ಈಗ ಅದನ್ನೆಲ್ಲ ಕಾಡು ನುಂಗಿಕೊಂಡಿದೆ. ನಮ್ಮದು ಅಶ್ವತ್ಥದ ಕಟ್ಟೆ, ಪಡುವಣದಲ್ಲಿಯೂ ಒಂದು ಕಟ್ಟೆ ಇತ್ತಂತೆ. ಅದಕ್ಕೆ ಬೂದಿಕಟ್ಟೆ ಎಂಬ ಹೆಸರಂತೆ, ಅಲ್ಲಿ ಯಾವ ಮರವಿತ್ತೋ, ಯಾಕೆ ಆ ಹೆಸರಿಟ್ಟರೋ. ನನಗೆ ನಮ್ಮ ಒಂದು ಕಟ್ಟೆ ಮಾತ್ರ ಗೊತ್ತು. ಉಳಿದವು ಯಾವುವನ್ನೂ ಕಂಡ ನೆನಪಿಲ್ಲ. ನಾನು ಎಲ್ಲಿಗೂ ಹೋದವಳಲ್ಲ, ಮನೆ ಬಿಟ್ಟರೆ ಬೇಸರ ನನಗೆ"

ನನಗೆ ಕುತೂಹಲವಾಗಿ "ಅಜ್ಜಿ ಹಾಗೆಯೇ ಈ ಊರಲ್ಲಿದ್ದು, ಇದ್ದು ನಿಮಗೆ ಬೆರ ಬರಲಿಲ್ಲವೆ?" ಎಂದು ಕೇಳಿದೆ.

'ನನಗೆ ಇದೇ ಚಂದ' ಎಂದು ಹೇಳಿ ನಕ್ಕರು.

"ಯಾಕೆ ನಕ್ಕಿರಿ?" ಎಂದು ಕೇಳಿದೆ. ಅವರು ಮೂರು, ಮೂರು ಕಟ್ಟೆಗಳ ವಿಚಾರ ಹೇಳಿದಾಗ ನನ್ನ ತಲೆಯಲ್ಲಿಯೂ ಏನೇನೋ ಅನಿಸಿತ್ತು. ಅವರು ಬರಿದೆ ಕಟ್ಟೆಗಳ ಹೆಸರನ್ನು ಹೇಳಿದ್ದಲ್ಲ ಎಂಬ ಭಾವನೆ ಬಂತು, ಅದಕ್ಕಾಗಿ ಅವರನ್ನು ಪ್ರಶ್ನಿಸಿದೆ. ಅವರು ನಗುನಗುತ್ತಲೇ ಇನ್ನೂ ನನಗೆ ಬೂದಿಕಟ್ಟೆಗೆ ಹೋಗುವ ಕಾಲ ಬರಲಿಲ್ಲ. ಅದಕ್ಕಾಗಿ ಇಲ್ಲಿದ್ದೇನೆ– ಅಶ್ವತ್ಥದ ಕಟ್ಟೆಯ ಬುಡದಲ್ಲಿ. ಅಶ್ವತ್ಥದ ಕಟ್ಟೆ ಎಂದು ಇದನ್ನು ಕರೆಯುವ ಬದಲು, ಬಸರೀಕಟ್ಟೆ, ಬೂದಿಕಟ್ಟೆ ಎಂದ ಹಾಗೆ ಬಾಳ್ ಕಟ್ಟೆ ಎಂದಿದ್ದರೆ ಚೆನ್ನಾಗಿರುತ್ತಿತ್ತು.

"ನನಗೆ ಒಂದೂ ಅರ್ಥವಾಗಲಿಲ್ಲವಲ್ಲ ಅಜ್ಜಿ."

ನಕ್ಕರು; ತಿರುಗಿ "ಆ ಬಸರೀಕಟ್ಟೆಯಲ್ಲಿ ಹುಟ್ಟಿ, ಬೂದಿಕಟ್ಟೆಯಲ್ಲಿ ಮುಗಿಯುವ ಮೊದಲು, ನಾವು ಓಡಾಡಿಕೊಂಡಿರುವ ಕಟ್ಟೆ ಬಾಳಿನ ಕಟ್ಟೆಯಲ್ಲವೇ? ಮೂರೂರು ಅಂದರೆ ಅದೇ. ಈ ಜಗತ್ತೆಲ್ಲ ಮೂರೂರೇ" ಎಂದರು.

ಆಗ ನನ್ನ ಎಳೆಯ ಬುದ್ದಿಗೆ ಜೀವನದ ಹುಟ್ಟು, ಬದುಕು, ಸಾವುಗಳನ್ನು ಕುರಿತು ಆಡಿದ ವಿನೋದ ಅರ್ಥವಾಯಿತು. ಅಶ್ವತ್ಥವೃಕ್ಷ ಚಿರಂತನವಷ್ಟೇ। ಬಾಳು ಹಾಗೆ ಚಿರಂತನವಲ್ಲ, ಬುಡವಿದೆ, ಕೊನೆಯಿದೆ. ಈ ವೃಕ್ಷ ಚಿರಂತನ ಎಂಬ ಭಾವನೆಯಿಂದ ಅವರು ಅದನ್ನು ಮೆಚ್ಚಿ ಅದರ ನೆರಳಿನಲ್ಲಿ ಹೆಚ್ಚಿನ ಹೊತ್ತನ್ನು ಕಳೆಯುತ್ತಿರಬೇಕು. ನಮ್ಮ ಬಾಳು ನಶ್ವರವಾದರೂ, ಅದಲ್ಲದ ಇನ್ನೊಂದನ್ನು ಅವರು ಆಗಾಗ ಸರಿಸುತ್ತಿರಬೇಕು–ಎನಿಸಿತು.

ನಮ್ಮ ಅಜ್ಜಿಯ ಮತ್ತೊಂದು ಗುಣ ಕೂಡ ನನಗೆ ವಿಚಿತ್ರವಾಗಿ ಕಾಣಿಸುತ್ತದೆ. ಅದು ಹಳಬರು. ಊರನ್ನು ಬಿಟ್ಟು ದೂರ ಹೋದವರಲ್ಲ. ಮನೆಯೇ ಅವರ ಮಠವಾಗಿದ್ದರೂ ಕೂಡ ನಮ್ಮ ಆಸುಪಾಸಿನ ಜನಕೆಲ್ಲ ಅವರ ಹೆಸರು ಗೊತ್ತಿತ್ತು ಅಷ್ಟು ಪ್ರಸಿದ್ಧಿಯಿದೆ. ಅವರು ತಾವಾಗಿಯೇ ಯಾರನ್ನೂ ಮಾತಾಡಿಸುವ ಹಂಬಲ ತಾಳಿದ್ದನ್ನು ಕಾಣೆ. ಅಷ್ಟೇ ಅಲ್ಲ, ಅವರ ಮತ್ತೊಂದು ನಡೆಯೂ ವಿಚಿತ್ರದ್ದೆ. ನಾವು ಮನೆ ಮಾಡಿಕೊಂಡು ಇದ್ದ ಮೇಲೆ, ಮನೆಗೆ ನಾಲ್ಕು ಮಂದಿ ಬರದೆ ಹೋಗುತ್ತಾರೆಯೇ? ಬಂದೇ ಬರುತ್ತಾರೆ. ಕೆಲಕೆಲವರು ಮನೆಗೆ ಬರುವುದು ಅವರಿಗೆ ಹೇಗೆ ಗೊತ್ತಾಗುತ್ತದೋ, ಏನೋ ಥಟ್ಟನೆ ಚಕಿತರಾದಂತೆ ಎದ್ದುಬಿಟ್ಟು, ಕೋಣೆಯ ಒಳಕ್ಕೆ ಹೋಗಿ ಕುಳಿತುಬಿಡುತ್ತಾರೆ. ಬಂದವರು ಹೊರಟುಹೋಗುವ

ತನಕವೂ ಕಣ್ಣಿಗೆ ಬೀಳುವುದಿಲ್ಲ. ಅದರಿಂದಲೋ ಏನೋ ಮೂಕಜ್ಜಿ ಎಂಬ ಹೆಸರು ಅವರಿಗೆ ಅದಕ್ಕಿಂತ ಹೆಚ್ಚಿಗೆ ಯಾರಿಗೂ ಏನೂ ತಿಳಿದಿರಲಾರದು. ನಮ್ಮ ನೆರೆ ಗ್ರಾಮಗಳಿಂದ ನೆಂಟರು, ಆಪ್ತರು ಮನೆಗೆ ಬಂದಾಗಲೂ ಸರಿಯೆ, ಅವರ ಕಣ್ಣಿಗೆ ಬಿದ್ದರೂ, ಮಾತನಾಡಿಸಲು ಸಾಹಸ ಪಡುವುದಿಲ್ಲ. ಅಲ್ಲದೆ, ಅವರ ವಯಸ್ಸಿಗೆ ಸಾಟಿಯಾಗುವವರು ಸದ್ಯಕ್ಕೆ ಆಚೀಚೆ ಯಾರ್ಯಾರು ಇರುವಂತೆ ಕಾಣಿಸುವುದಿಲ್ಲ. ಹಾಗೆ ಬರುವ ಆಪ್ತೇಷ್ಟರಲ್ಲಿ ಒಬ್ಬರೋ ಇಬ್ಬರೋ, ಹಿರಿಯ ಹೆಂಗಸರು ಮಾತ್ರ ನಮ್ಮಮನೆಗೆ ಬಂದಾಗ, ಹೊರಡುವ ಮುಂಚೆ ಅವರನ್ನು ಹುಡುಕಿ ಹೋಗಿ, ಅವರ ಕಾಲುಮುಟ್ಟಿ ವಂದಿಸಿ ಹೋದದ್ದನ್ನು ಕಂಡಿದ್ದೇನೆ. ಅಂಥವರು ಕೂಡ ಮಾತನಾಡಿಸುವ ಪ್ರಯತ್ನ ಮಾಡಿದ್ದು ಕಡಿಮೆ. ಅವರ ವಿಷಯದಲ್ಲಿ ಅಷ್ಟೊಂದು ಗೌರವವಿಲ್ಲದೆ ಹೋದರೆ ಹಾಗೆ ಮಾಡಲಾರರು ಎನಿಸುತ್ತದೆ. ಒಬ್ಬಳು ಹಿರಿಯೆ ಮಾತ್ರ, ಅವರ ವಿಚಾರದಲ್ಲಿ "ಅವರೊಬ್ಬರು ದೇವರು" ಎಂದು ಹೇಳಿದನ್ನು ಕೇಳಿದ್ದೇನೆ. ನಮ್ಮ ಮನೆಯಲ್ಲಿ ಬಹಳ ಜನಗಳಿಲ್ಲ, ನಾನು, ನನ್ನ ತಮ್ಮ ನಾರಾಯಣ, ಅವನಿಗೆ ನನಗಿಂತ ನಾಲ್ಕು ವರ್ಷ ಕಡಿಮೆ ಪ್ರಾಯ, ತಂದೆಯವರ ಕಾಲವಾದ ಬಳಿಕ, ನಾನು ಕಾಲೇಜನ್ನು ಮುಗಿಸಿ ಊರನ್ನು ಸೇರಿದೆ, ತಮ್ಮ ಓದುತ್ತಲಿದ್ದ. ನಾನು ಎಲ್ಲ ಮುಗಿಸಿ ಮನೆಗೆ ಬಂದ ಮೇಲೆ ಲಗ್ನ ಮಾಡಿಕೊಂಡು ಗೃಹಸ್ಥನಾದ ಕತೆ ಹೇಳಿದೆನಲ್ಲ. ಲಗ್ನವಾಗಿ ಮನೆಗೆ ಬಂದ ನನ್ನ ಮಡದಿಯನ್ನು ಬಾಯಿ ತುಂಬಾ ಹರಸಿದ್ದಾರೆ. ಆ ಮೇಲೆ ಮಾತ್ರ ಅವಳನ್ನು ಮಾತನಾಡಿಸಲು ಆತುರ ತೋರಿಸಿದವರಲ್ಲ. ಏನಾದರೂ ಕೇಳಿದರೆ ಉತ್ತರ ಹೇಳುತ್ತಾರೆ. ನನ್ನ ಎರಡು ಚಿಕ್ಕ ಮಕ್ಕಳನ್ನು ತಾವಾಗಿಯೇ – ಮಾತನಾಡಿಸುವುದುಂಟು. ನನ್ನ ತಮ್ಮನಿಗೆ ಅವರಲ್ಲಿ ಸರಸಸಲ್ಲಾಪ ಕಡಿಮೆ, 'ಅಜ್ಜೀ' ಎಂದು ರಾಗ ಹೊರಬಿದ್ದರೆ, ಮತ್ತೊಮ್ಮೆ ಮೂರು ದಿನದ ಮೇಲೆ 'ಅಜ್ಜಿ' ಎಂದು ರಾಗ ಮಾಡುವವನು ಅವನು. ಆ ರಾಗದಲ್ಲಿಯೇ ಅವನ ಪ್ರೇಮ ವ್ಯಕ್ತವಾದೀತು, ಆತ ಹೆಚ್ಚಿಗೆ ಮಾತನಾಡಿಸದಿರಲು, ಊರವರ ಅಭಿಪ್ರಾಯದಂತೆ ಅವನು ಸಹ – ಅವರಿಗೆ ಒಂದು ಸುತ್ತು ಸಡಿಲು – ಎಂದು ತಿಳಿದುದು ಕಾರಣವೋ ಏನೋ. ನನ್ನ ಕಿರಿಯ ಮಕ್ಕಳಿಬ್ಬರಿಗೂ, ಕಿಟ್ಟು ಮತ್ತು ಚಂದ್ರರಿಗೆ ಅವರಲ್ಲಿ ಸಲಿಗೆಯಿದೆ. ಮಾತನ್ನು ಆಡಿಸುತ್ತಾರೆ. ಆದರೆ ಅಜ್ಜಿ ಹೇಳಿದ್ದೆಲ್ಲ ಸುಳ್ಳು ಎಂಬ ಅಭಿಪ್ರಾಯ ಬಲವಾಗಿ ಬೇರೂರಿದೆ.

ನನ್ನ ತಮ್ಮ ನೆರೆಗ್ರಾಮದ ಮಂಜುನಾಥನ ದೆಸೆಯಿಂದ ಮೈಸೂರಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದ. ಅನಂತರ ಶಿವಮೊಗ್ಗೆಯಲ್ಲಿ ಚಾಕರಿ ಗಳಿಸಲು ಪ್ರಯತ್ನ ಮಾಡಿದ. ಆತ ದೊಡ್ಡ ರಜೆಗೆ ಊರಿಗೆ ಬಂದರೆ, ನಾಲ್ಕು ದಿನ ಇರುತ್ತಾನೆ. ಮೂಡೂರಿನ ಮೋಹ ಅವನಲ್ಲಿ ಏನೂ ಉಳಿದಿಲ್ಲ. ಈ ಹಾಳು ಕೊಂಪೆಯಲ್ಲಿ ಎರಡೇ ಎರಡು ದಿನ ಕಳೆಯುವುದಕ್ಕೆ ಆಗುವುದಿಲ್ಲವಂತೆ. ಈಗ ಬೆಳೆದು ದೊಡ್ಡವನಾಗಿದ್ದಾನೆ ಎಂಬುದರಿಂದಲೋ ಏನೋ, ಅಜ್ಜಿಯ ಹತ್ತಿರ ಹೋಗಿ ಅಶ್ವತ್ಥದ ಕಟ್ಟೆಯಲ್ಲಿ ಕುಳಿತಿರುವುದುಂಟು, 'ಏನು? ಹೇಗಿದ್ದೀರಿ?' ಎಂದು ಕೇಳಿದವನಲ್ಲ. ಆದರೂ ಒಂದು ದಿವಸ ಅವರು ಅವನಿಗೆ 'ಸಣ್ಣಮಾಣಿ, ಓದಿ ಮುಗಿಯಿತಂತೆ, ನೀನು ಒಂದು ಲಗ್ನ ಮಾಡಿಕೊ, ಎಲ್ಲಾದರೂ ಒಂದು ಚಾಕರಿ ಹುಡುಕಿಕೊಂಡು ಸುಖವಾಗಿರು' ಎಂದರು.

ಇವನು ಚೇಷ್ಟೆಗೆ "ಅಣ್ಣಯ್ಯನಿಗೆ ಹೇಳಿದ ಹಾಗೆ– ಈ ಊರಲ್ಲೇ ಇರು– ಅಂತ ಹೇಳಲಿಲ್ಲ ನೀವು" ಎಂದ.

ಅವರು 'ನಿನಗೆ ಯಾತಕ್ಕೆ ಅಂದೇನು ಹಾಗೆ? ನಿನ್ನ ಋಣ ಈ ಊರಲ್ಲಿ ಬರೆದಿಲ್ಲ' ಎಂದರು.

ಹೀಗಾಗಿ, ನಮ್ಮ ಮನೆ ಸಾಕಷ್ಟು ಬರಿದಾಗಿದೆ. ಮನೆಯ ಹುಟ್ಟುವಳಿ ದುಂದು ಮಾಡದೆ ಹೋದರೆ, ನಮ್ಮ ಜೀವನಕ್ಕೆ ಸಾಕು. ಇಲ್ಲಿ ಸಮಯ ಹೇಗೆ ಹೋಗುತ್ತದೆಂದೇ ತಿಳಿಯುವುದಿಲ್ಲ ಅಥವಾ ಅದನ್ನು ಕಳೆಯುವುದು ಹೇಗೆಂದೂ ಗೊತ್ತಾಗುವುದಿಲ್ಲ. ನಮ್ಮ ಅಜ್ಜಿ ಎಂಬತ್ತು ವರ್ಷಗಳ ಕಾಲವನ್ನಾದರೂ ಇಲ್ಲಿ ಕಳೆದಿರಬೇಕು. ನನಗೆ ಹಾಗೂ ಹೀಗೂ ಮೂವತ್ತು ಕಳೆಯಿತು. ಆದರೂ ಸ್ನೇಹಿತರು ಬೇಕು ಎಂಬ ಹಂಬಲ ಆಗುತ್ತದೆ. ಊರಿನ ಜನಗಳ ಮೇಲೆ ಅಷ್ಟೊಂದು ಆದರ ಬೆಳೆದಿಲ್ಲ ನನಗೆ. ಏನೇನೋ ಅಲ್ಪತನ ವಂಚನೆ, ಮೋಸ ನಡೆದದ್ದನ್ನು ಕೇಳಿ, ಅವರಲ್ಲಿಗೆ ಹೋಗಿ ಬರುವುದಕ್ಕೆ ಮನಸ್ಸು ಹಿಂಜರಿಯುತ್ತದೆ. ನನಗೆ ಹಿಡಿಸುವ ಸ್ನೇಹಿತ ಜನಾರ್ದನ ಒಬ್ಬನೇ ಬಹಳ ಕಾಲದ ಬಳಿಕ ಅವನು ರಜೆಗೆ ಮನೆಗೆ ಬಂದನಾದರೆ ಸಂತೋಷ, ಚಾಕರಿ ಮಾಡಿಕೊಂಡಿದ್ದಾನೆ. ನಮ್ಮ ಮನೆಗೆ ಆಗಾಗ ಬರುತ್ತಾನೆ. ನಾನೂ ಅವನ ಮನೆಗೆ ಹೋಗಿ ಬರುತ್ತೇನೆ. ಏನಾದರೂ ಹಾಳು ಹರಟೆ ಕೊಚ್ಚಿಕೊಂಡಿರುತ್ತೇವೆ. ಆತ ಆಗಾಗ ನನಗೆ ಉಪದೇಶ ಮಾಡುವುದುಂಟು.

"ಮಹಾರಾಯ, ನೀನು ಬಿ.ಎ. ಮಾಡಿದ್ದು ಮಣ್ಣಿಗೆ, ಎಲ್ಲಿಂದಲಾದರೂ ನಾಲ್ಕು ಪುಸ್ತಕ ತರಿಸಿ ಓದಬಾರದೇ? ಒಂದೆರಡು ಪೇಪರು ತರಿಸಿ ಓದಬಾರದೇ?" ಎಂದು ಕೆಣಕುತ್ತಾನೆ.

ನಾನು ಅದಕ್ಕೆ 'ಹಾಗೆ ಕತೆ ಕೇಳುವ ಆಸೆಯಾದರೆ ನಮ್ಮ ಅಜ್ಜಿ ಇದ್ದಾರೆ. ಎಷ್ಟೋ ಕತೆ ಹೇಳಿಯಾರು, ಹಿಂದೆ ಹೇಳಿದವರು" ಎಂದೆ.

ಅಷ್ಟಕ್ಕೆ ಜನ್ನನ ಮುಖ ಸಪ್ಪೆಯಾಗಿ "ನಿಮಜ್ಜಿಗೆ ಈಗೀಗ ಏನೇನೂ ಬುದ್ಧಿ ಸ್ವಯವಿಲ್ಲವಂತಲ್ಲ" ಎಂದ.

"ಮೊದಲಿಂದಲೂ ಅವರು ನನ್ನ ಪಾಲಿಗೆ ಮಾತ್ರ ಒಂದೇ ತರ ಕಾಣಿಸುತ್ತಿದ್ದಾರೆ. ಹೆಚ್ಚು ಇಲ್ಲ; ಕಡಿಮೆಯೂ ಇಲ್ಲ."

"ಅವರಷ್ಟಕ್ಕೆ ಗೊಣಗಿದವರಿಗೆ ಬುದ್ಧಿ ಸ್ವಯವಿಲ್ಲ ಎಂಬ ಲೆಕ್ಕ ನಿನ್ನದು ಅಲ್ಲವೇ?" 'ಸ್ವಯವಿದ್ದವರು ಹಾಗೆ ಮಾಡುತ್ತಾರೇನಯ್ಯ?'

"ಬಾಯಿಯಲ್ಲಿ ಗೊಣಗಬೇಕಾಗಿಲ್ಲ. ಮನಸ್ಸು ಸುಮ್ಮನೆ ಕುಳಿತಿರಲಾರದೆ ನೂರು ಕಡೆಗೆ ಓಡುವುದಿಲ್ಲವೇ? ನನಗೂ ಹಾಗಾಗುತ್ತದೆ; ನಿನಗೂ ಹಾಗಾಗುತ್ತದೆ. ಅಷ್ಟೆ ಒಳಗಿದ್ದದ್ದನ್ನೆಲ್ಲ ಬಾಯಿಬಿಟ್ಟು ಹೇಳುತ್ತಾರೆ. ನಾನೂ ನೀನೂ ಹೇಳುವುದಿಲ್ಲ. ಅಷ್ಟೇ ವ್ಯತ್ಯಾಸ, ಆಗ ಏನೆಂದ ಹಾಗಾಯಿತು? ಮನಸ್ಸಿಗೆ ಕಂಡದ್ದನ್ನು ಬಾಯಿಂದ ಆಡಿದರೆ ಸ್ವಯಗೆಟ್ಟಂತೆ– ಎಂದಲ್ಲವೇ?"

ನನ್ನ ಸ್ನೇಹಿತ ನಕ್ಕ, ಅವನಿಗೂ ಗೊತ್ತಾಯಿತು, ತನ್ನ ಮಾನದಂಡದ ಇತಿಮಿತಿ.

ಜನಾರ್ದನನಂಥ ನನ್ನ ಸ್ನೇಹಿತ ಕೂಡ ನಮ್ಮ ಅಜ್ಜಿಯನ್ನು ಕಂಡು – ಅವರಿಗೆ ಸ್ವಯವಿಲ್ಲ – ಎಂದು ಅನ್ನಬೇಕಾದರೆ, ಅದೂ ನನ್ನೊಡನೆಯೇ, ನನಗೆ ನೋವಾಗದೆ ಹೋದೀತೆ? ಅವನಲ್ಲಿ ಅಂಥ ಅಭಿಪ್ರಾಯ ಇರಬಹುದು. ಅದನ್ನು ನನ್ನಲ್ಲಿ ಬಾಯಿಬಿಟ್ಟು ಹೇಳುವ ಜರೂರಿ ಏನಿತ್ತು? ನಾನು ನನಗಾದ ನೋವನ್ನು ತೋರಿಸಿಕೊಳ್ಳದೆ, ಇನ್ನೊಂದು ಅರ್ಧ ಗಳಿಗೆ ಅವನೊಡನೆ ಮಾತನಾಡಿದೆ. ಅವನು ಮನೆಗೆ ಬಂದರೆ ಮೊದಲಿನಂತೆ ಅವನನ್ನು

ಉಪಚರಿಸಬಾರದು– ಎಂದು ನನಗನಿಸಿತು. ಸಿಟ್ಟು ಮತ್ತೆ ಯಾವುದಕ್ಕೂ ಅಲ್ಲ– ಅಜ್ಜಿ ವಿಷಯದಲ್ಲಿ ಅಗೌರವ ಪ್ರಕಟಿಸಿದ್ದಕ್ಕೆ. ಪಾಪ ಅವರ ವಯಸ್ಸು ಎಂಬತ್ತೋ ಸ್ವಲ್ಪ ಹೆಚ್ಚಿಗೊ; ಅವರ ಜೀವನದಲ್ಲಿ ಆರಂಭದ ಹತ್ತು ವರ್ಷವನ್ನಷ್ಟೇ ಅವರು ನಿಶ್ಚಿಂತೆಯಿಂದ ಕಳೆದಿರಬಹುದು. ಮುಂದೆ ಕುಂಕುಮ ಅಳಿಸಿದ ಮೇಲೆ ಕಳೆದಂಥ ಎಪ್ಪತ್ತು ವರ್ಷಗಳ ಬಾಳ್ವೆ, ಯಾರೊಡನೆಯೂ ತೋಡಿಕೊಳ್ಳದ ಜೀವನ. ಅದನ್ನು ನೆನೆದರೆ ನನಗೆ ಭಯವಾಗುತ್ತದೆ; ಮರುಕವಾಗುತ್ತದೆ. ಅದರಲ್ಲಿಯೂ ಬಾಲ್ಯದಿಂದ ಯೌವನಕ್ಕೆ ಸರಿದ ಅವರ ಜೀವನದಲ್ಲಿ – ತಾನು ವಿಧವೆ, ಅಮಂಗಲೆ–ಎಂಬ ನನಪೊಂದೇ ಅವರನ್ನು ಎಷ್ಟು ಕಾಡಿತ್ತೋ ಏನೋ. ಆ ಕಾಲದಲ್ಲಿ ಅವರ ಅಣ್ಣ, ನನ್ನ ಅಜ್ಜ ಒಬ್ಬರೇ ಅವರಿಗೆ ತಮ್ಮ ಮಾತು ನಡತೆಗಳಿಂದ ಸಮಾಧಾನ ಕೊಟ್ಟವರಂತೆ.

ನಮ್ಮ ತಂದೆಯ ಕಾಲದಲ್ಲೂ ಅವರನ್ನು ತುಂಬಾ ಚೆನ್ನಾಗಿಯೇ ಕಂಡುಕೊಂಡರು. ನಮ್ಮ ತಾಯಿಗೂ ಅವರ ಮೇಲೆ ಬಹಳ ಗೌರವ ಇತ್ತು. ಆದರೆ ನಮ್ಮ ತಾಯಿ ಒಂದು ಸಂಗತಿಯನ್ನು ಹೇಳುತ್ತಿದ್ದುದುಂಟು; ಅದೆಂದರೆ ಅವರಿಗೆ ದೈವಭಕ್ತಿ ಇತ್ತೋ ಇಲ್ಲವೋ ಎಂಬ ವಿಚಾರದ ಸಂಶಯ, ಮನೆಯಲ್ಲಿ ಅಷ್ಟೆಲ್ಲ ಕಟ್ಟುಕಟ್ಟಲೆಗಳಿಂದ ಪೂಜೆ ಪುನಸ್ಕಾರಗಳಾಗುತ್ತಿದ್ದರೂ ಉಳಿದವರಂತೆ ಯಾವ ನಿಷ್ಠೆಯನ್ನೂ ತೋರಿಸಿದವರಲ್ಲವಂತೆ. ನಮ್ಮ ಊರಲ್ಲಿ ಇಂದಿಗೂ ಉಳಿದು ಬಂದಿರುವ ಆ ಎರಡು ಹರುಕುಮುರುಕು ದೇವಾಲಯಗಳಿಗೂ ವಿಶೇಷ ಹೋದವರಲ್ಲ, ಹೋದವರೇ ಅಲ್ಲ – ಎನ್ನುವಂತಿಲ್ಲ. ಹೋಗಿದ್ದಾರೆ, ಸುತ್ತು ಬಂದಿದ್ದಾರೆ. ಆರತಿ, ನೈವೇದ್ಯ ಮುಗಿಯುವ ತನಕ ಕಾದುಕುಳಿತು ನೋಡಿದಂತೆ ಕಾಣೆ.

ಮನೆಯಲ್ಲಿ ಕುಳಿತಿರುವಾಗ ಇವರು ಸದಾ ಕಣ್ಮುಚ್ಚಿ ಏನನ್ನಾದರೂ ನೆನೆಯುತ್ತಿದ್ದರೂ ಅದೇನೆಂದು ನಮ್ಮ ತಾಯಿ ತಿಳಿದುಕೊಳ್ಳಲು ಶಕ್ತರಾಗಲಿಲ್ಲ. ಅಜ್ಜಿಯ ಕೈಯಲ್ಲಿ ಜಪಸರ ಕಂಡವರಿಲ್ಲ. ಅವರು ತುಟಿ ಅಲುಗಿಸಿ "ಓಂ ನಮಃ ಶಿವಾಯ" ಎಂದವರಲ್ಲ. ಇದರಿಂದಾಗಿ, ನನ್ನ ತಾಯಿಗೆ ಅವರ ವಿಷಯದಲ್ಲಿ ಒಂದು ರೀತಿಯ ಕನಿಕರ ಬಂದು "ಇವರು ತಮಗಾದ ಅನ್ಯಾಯವನ್ನು ನೆನೆದು, ದೇವರ ಮೇಲಿನ ವಿಶ್ವಾಸವನ್ನೇ ಕಳೆದುಕೊಂಡಿದ್ದಾರೆ" ಎಂದು ಅರ್ಥ ಮಾಡಿಕೊಂಡದ್ದುಂಟು. ಅಂಥ ಸಂಶಯದ ಬಿತ್ತನ್ನು ನನ್ನ

ತಾಯಿ ನನ್ನ ತಲೆಯಲ್ಲಿಯೂ ಬಿತ್ತಿ ಹೋಗಿದ್ದಳು ಎಂದರೆ ತಪ್ಪಾಗದು. ನಾನು ಕಾಲೇಜಿನಲ್ಲಿ ಕಲಿಯುತ್ತ ಬುದ್ಧಿವಂತನೆನಿಸಿದ ಕಾಲದಲ್ಲಿ ಇಂತಹ ಒಂದು ನೆನಪಿನಿಂದ ಅಜ್ಜಿಯನ್ನು ಕೇಳಿಯೇ ಬಿಡುತ್ತೇನೆ ಎಂದು ಹೊರಟದ್ದುಂಟು. ಅವರು ಆಗ ಅಶ್ವತ್ಥ ಕಟ್ಟೆಗೆ ಸುತ್ತುಬರುತ್ತಿದ್ದರು. ಹಾಗೆ ಸುತ್ತುಬರಬೇಕಾದರೆ ದೇವರ ಮೇಲಿನ ನಂಬಿಕೆಯಿಂದಲೇ ಬರುತ್ತಿರಬೇಕು ಎಂಬ ಭಾವನೆ ನನಗೆ ಬಂದಿತು. ಅವರು ಪ್ರದಕ್ಷಿಣೆ ಮುಗಿಸಿದರು. ಮೈ ಬಗ್ಗಿಸಲಿಲ್ಲ. ಹಣೆ ತಗ್ಗಿಸಲಿಲ್ಲ. ಮೊಣಕಾಲನ್ನು ಊರಲಿಲ್ಲ. ಎರಡೂ ಕೈಗಳನ್ನು ಜೋಡಿಸಲಿಲ್ಲ. ಈಚೆಗೆ ಬಂದು ಕುಳಿತರು. ನಾನು ಹೋಗಿ ಅವರ ಮಗ್ಗುಲಲ್ಲಿ ಕುಳಿತೆ. ಅವರಾಗಿ 'ಏನು ಯೋಚನೆ?' ಎಂದು ಕೇಳಿದರು.

ನನ್ನ ಯೋಚನೆಯನ್ನು ಬಚ್ಚಿಡುವ ನೆಪದಲ್ಲಿ "ಯೋಚನೆ ಎಲ್ಲಿಂದ ಬಂತು? ಯಾವುದಕ್ಕಾಗಿ ಯೋಚನೆ ಮಾಡಬೇಕು? ಪರೀಕ್ಷೆ ಮುಗಿಸಿ ಬಂದಿದ್ದೇನೆ. ಅಲ್ಲಿಯ ತನಕವಾದರೆ ಅದರದ್ದೇ ಯೋಚನೆ ಇತ್ತು" ಎಂದೆ.

"ಆ ಪರೀಕ್ಷೆ ಮುಗಿದದ್ದಕ್ಕೆ ನನ್ನ ಪರೀಕ್ಷೆಗೆ ಹೊರಟಿದ್ದೀ ಅಲ್ಲವೇ?" ಎಂದರು.

* * *

**ಅಭಿವೃದ್ಧಿ : ಆಶಯ**

# ಡಾಂಬರು ಬಂದುದು

**– ದೇವನೂರು ಮಹದೇವ**

**ಊರ ಮೇಲುನೋಟ:**

ಊರಿಂದ ಬಂಡಿ ಮಾತ್ರವೆ ಓಡಾಡಲು ಲಾಯಕ್ಕಾದ ಓಣಿ ಥರ ಹೊರಟ ಹಾದಿ ಮೂರು ಮೈಲಿ ಹೋಗಿ ಬಸ್ಸು ಓಡಾಡುವ ದೊಡ್ಡರಸ್ತೆಗೆ

ಸೇರಿಕೊಳ್ಳುತ್ತದೆ. ದೊಡ್ಡರಸ್ತೆಯಿಂದ ಅದೇ ಹಾದಿ ಹಿಡಿದು ಹಿಂದಕ್ಕೆ ಬಂದರೆ ಕಳ್ಳಿ ಕವುಚಿಕೊಂಡ ಅದು ಗವ್ವನೆ ಊರವರೆಗೂ ಬಂದು ದೆವ್ವ ನಿಂತ ಅರಳಿಮರಗಳ ಬಳಸಿ ಮುಂದೆ ಮೂರು ಸಲೆಯಾಗಿ ಒಡೆದುಕೊಂಡು ಊರೊಳಕ್ಕೆ ಧಾವಿಸುತ್ತದೆ. ಹಿಂಗೆ ಸೆಲೆ ಹೊರಟ ಬೀದಿಯ ಅಕ್ಕಪಕ್ಕ ಒತ್ತೊತ್ತು ಹಟ್ಟಿಗಳು ತಕ್ಕೈಸಿಕೊಂಡಿದ್ದು ಉಸಿರಾಡಲೂ ಅಡಚಣೆ ಮಾಡುವಂತೆ ಮೊದಲು ನೋಟಕ್ಕೆ ಗಕ್ಕೆ ಕಾಣುತ್ತದೆ.

ಅದು ಯಾವುದಕ್ಕೂ ಹೇಳಿಕೊಳ್ಳುವಂಥ ಹಳ್ಳಿ ಅಲ್ಲ, ಏಣಿಸಿದರೆ ಹೆಚ್ಚೆಂದರೆ ಎಂಬತ್ತು ಮನೆಗಳು ಇದ್ದೀತು. ಎಲ್ಲಕಡೆ ಇರುವಂತೆ ಅಲ್ಲಿ

ಇಂದು ತುಂಡು ಹೊಟೆಲ್ಲೂ ಇಲ್ಲ. ಇದ ಹಿಡಿದೇ ಊರ ಊಹಿಸಬಹುದು. ಮತ್ತು ಅಲ್ಲಿ ನಂಜನಗೂಡಲ್ಲೊ ಮೈಸೂರಲ್ಲೋ ಎಸ್ಸೆಲ್ಸಿ ಹತ್ತಿ ಬಂದ ನಾಕಾರು ಜನರೂ ಉಂಟು, ಲಕುಮ, ರಾಜಪ್ಪ, ಮಾದು, ಶಂಭು ಇವು ಅವರ ಹೆಸರುಗಳು.

ಈ ಹೆಸರುಗಳಿಗೂ ಪಟೇಲರಿಗೂ ಅಷ್ಟಕ್ಕಷ್ಟೆ, ಇಂದು ಹುಟ್ಟಿದ ಈ ತುಂಡುಗಳು ತಮ್ಮ ಎದುರಾ ತಲೆ ಎತ್ತಿ ತಿರುಗುವುದನ್ನು ಜನರು ಹೆಂಗೆ ಸಹಿಸುವರು? ತಾವು ಕಂಡಹಾಗೆ ತಮ್ಮ ಆಪ್ಪನ ಕಾಲದಿಂದಲೂ ಆಗಿದ್ದಿಲ್ಲ. ಆ ಮಕ್ಕಳು ಮೇಲುಜಾತಿ ಕೀಳುಜಾತಿ ಅನ್ನದೆ ಒಂದೇ ಹೊಟ್ಟೆಯಿಂದ ಬಿದ್ದಂತೆ ಹೊಲಾರ ಲಕುಮನೊಡನೆ ತಿರುಗುವುದ ಹಿಡಿದು ಅವರವರ ಅಪ್ಪಂದಿರ ಮೂಲಕ ಬೈಸಿದರು. ಅಪ್ಪಂದಿರ ಮಾತ ಕೇಲುತ್ತವೆಯೆ ಅವು? ಆ ಹೈಕಳು ಯಾವುದಾದರು ಹೆಣ್ಣು ಕೆಣಕಿ ಸಿಕ್ಕರೆ ಚಾವಡಿಗೆ ಎಳಸಿ ಬರೀ ನಿಕ್ಕರು ಮಾಡಿ ಕಂಬಕ್ಕೆ ಕಟ್ಟಿಸಿ,

ಸೆಬ್ಬದಲಿ ಸಮಾ ಬಡಿಯುವಂಥ ಟೀಮಿಗೆ ಕಾದಿದ್ದಾರೆ. ಕೆಣಕದೆ ಇರುತ್ತಾವೆಯೆ ಎಂಬ ನಂಬಿಕೆಯು ಇದೆ.

**ರೋಡು ಮಾಡಲು ಆರ್ಡರು:**

ಇಂಥ ಸಂದರ್ಭದಲ್ಲಿ ಊರ ರೋಡಿಗೆ ಆರ್ಡರು ಬಂತು. ಪಟೇಲರ ಮೈಯಿ ಇದ್ದಷ್ಟೂ ಹಿಗ್ಗಿತು. ಕಿಚ್ಚುಹತ್ತಿಕೊಂಡಂತೆ ಊರಿಗೆ ಸುದ್ದಿ ಹಿಡಿಯಿತು. ಈ ಸಂದರ್ಭದಲ್ಲಿ ಎಂಟು ವರ್ಷಗಳ ಕೆಳಗೆ ಊರಿಗೆ ಮಿನಿಸ್ಟರು ಬಂದಿದ್ದನ್ನು ಪಟೇಲರೇ ಕೈಗೆ ನಿಂಬೆಹಣ್ಣು ಕೊಟ್ಟು ಹಾರ ಹಾಕಿ ತಮ್ಮ ಊರು ಒಂದು ಊರು ಅನ್ನಿಸಿಕೊಳ್ಳಬೇಕಾದರೆ ಒಂದು ರೋಡು ಅನ್ನುವುದಾದರೂ ಇರಬೇಕೆಂದು ಮಾಸ್ವಾಮಿಯವರು ಮನಸು ಮಾಡಬೇಕೆಂದು ಬಿನ್ನಯಿಸಿಕೊಂಡಿದ್ದನ್ನು ನೆನೆಸಿಕೊಳ್ಳಬಹುದು. ಇದೇ ಪಟೇಲರು ನಂಜನಗೂಡಿಗೆ ಹತ್ತಿ ಸಂಜೆ ಮಾಡಿಕೊಂಡು ಊರಿಗೆ ಬಂದರು. ನಮ್ಮ ಪಟೇಲರೆ ರೋಡಿಗೆ ಕಂಟ್ರಾಕ್ಟರ್ ಎಂದು ಇನ್ನು ತಿಂಗಳಾನುಗಟ್ಟಲೆ ಯಾರು ಕೆಲಸಕ್ಕೆ ಕೈ ಬಾಯಿ ನೋಡುವಂತಿಲ್ಲವೆಂದು ಮತ್ತು ಸರ್ಕಾರಿ ದುಡ್ಡಲ್ಲಿ ಮುಗಿಸಿ ದೇವಸ್ಥಾನ ಊರ್ಜಿತಗೊಳಿಸುವರೆಂದು ಯಾರ ಹಟ್ಟಿ ಬಾಗಿಲು ತೆಗೆದರು ಸುದ್ದಿ ಆಯ್ತು.

ಅದೆಲ್ಲಾ ಆಗಿ ಹೀಗೆ ಬಹಳ ದಿನಗಳು ತಿಳಿಯದಂತೆ ಕಳೆದಿವೆ. ಈಗ ಊರಮುಂದಲು ಒಂದು ರಣರಂಗವೆ. ಹಿಂದೆ ನೋಡಿದಷ್ಟು ಎತ್ತರಕ್ಕೆ ಹಬ್ಬುತ್ತಿದೆ ಅರಳಿಮರಗಳು ಈಗ ನೆಲ ಕಂಡಿವೆ. ಹಿಂದೆ ಸೆಟೆದು ನಿಂತ ಅರಳಿ ಮರಗಳ ಮರೆಯಲ್ಲಿ ಊರ ಕಂಡವರಿಗೆ ಈಗ ಊರು ಊರು ಬಿಕೋ ಅನ್ನಿಸಲೇಬೇಕು. ಅವು ಇದ್ದವು ಅನ್ನುವದಕ್ಕೆ ಎಲ್ಲೂ ಎಳ್ಳಷ್ಟೂ ಸುಳಿವು ಕಾಣದು. ಅವು ಇದ್ದಂಥ ಸ್ಥಳಗಳಲ್ಲಿ ಈಗ ಮಿಷನ್ನು ಓಡಾಡುತ್ತಿವೆ. ಆಳೆತ್ತರದ ಕಲ್ಲುಚಕ್ರದ ಮಿಷನ್ನುಗಳು ಹೊಗೆಬಿಟ್ಟು ಓಡಾಡುವ ಚಂದಕ್ಕೆ ಪಳ್ಳಿ ಹೈಕಳೇನು ಗಂಡಸು ಯಮ್ಕ ಅನ್ನದೇ ನೋಡುತ್ತಾ ತಮ್ಮ ಮರೆಯುವುದೂ ಉಂಟು. ಅಲ್ಲಿ ಎದ್ದೇಳುವ ಸದ್ದು ಊರ ಮೀರಿ ಆಚೆಗೂ ಹೋಗುವುದು, ದೂರದಿಂದ ನೋಡಿದ ಯಾವ ಮಗನಿಗೂ ಅಲ್ಲೋಲ ಕಲ್ಲೋಲ ಆಗುತ್ತಿರುವಂತೆ ಕಾಣಬೇಕು. ಹತ್ತಿರ ಬಂದರೆ ಅದೇ ಊರಿನ ಜನರು, ಅವರೇ ಮಾತಾಡಿಸಿದರೆ ಅವರೇ ಎಂದು ತಿಳಿಯಬಹುದು ಹೊರತು ಗುರುತು ಹತ್ತದಷ್ಟು ಅವರ ಯಾಸ ವರಸೆ ಬದಲಿಸಿ ಬಿಟ್ಟಿದೆ– ನೆಲಕ್ಕಂಟಿಕೊಂಡು ಕಪ್ಪಾಗಿರುವ ಟಾರಿಗಂಟೆಗೊಂಡು ಅವರು ಮೂಡಿದಂತೆ ಚಲಿಸಿದಂತೆ

ಒಕ್ಕಡೆ ಕುಂತು ಹತ್ತಾರು ಯಮ್ಕ ತಲೆಗೆ ಸೆರಗು ಸುತ್ತಿಕೊಂಡು ಅಲ್ಲಿ ಕಲ್ಲು ಚಚ್ಚುತ್ತಿರುವರು, ಗುಂಪಲ್ಲೆ ಒಬ್ಬಳು ಸಣ್ಣ ದನಿ ಎತ್ತಂಸಿ ಸುವ್ವಿ ಬಾ ಚನ್ನಬಸವಯ್ಯ ಮೊಳಗಿಸುತ್ತಿರುವಳು, ಉಳಿದವರ ಕುಮ್ಮಕ್ಕು ಕೊಡುವ ಸೊಲ್ಲು ಆದ ಮೀರಿಸಿಕೊಂಡು ದೂರದಲ್ಲಿ ಕೆಲಸ ಮಾಡುವವರ ಆಚೆಗೂ ಕೇಳಿಸುವಂತೆ. ಕೆಲಸ ಮಾಡುವವರು ಕೆಲಸ ಮಾಡುತ್ತಾ ಫರ್ಲಾಂಗು ಉದ್ದ ಲವಲವಿಕೆ ತುಂಬಿದೆ. ಅಳತೆ ಮಾಡುವುದು, ಅದ ಅಗೆಯುವುದು, ಅಗೆದು ಸಮ ಮಾಡುವುದು, ಸಮಮಾಡಿ ನೀರು ಚಿಂಪರಿಸುವುದು ನೀರು ಚಿಂಪರಿಸಿ ಹದಮಾಡಿದ ಜಲ್ಲಿ ಟಾರ ಕೈಬಂಡಿಯಿಂದ ಎಳೆದು ತಂದುಸುರಿಯುವುದು, ಸುರಿದುದ ಹರಡುವುದು, ಒಕ್ಕಡೆ ಹಿಂದಕ್ಕೂ ಮುಂದಕ್ಕೂ ಹೋಗುವ ಬರುವ ಮಿಷನ್ನು, ಸಮಾ ಮಾಡುವ ದಗ್ ದಗ್ ಮಿಷನ್ನು, ಬೆಂಕಿ ಉಗುಳುತ್ತ ಚೆಲ್ಲಿ ಟಾರು–ಮರಳು ಒಕ್ಕೂಡಿಸುವ ಮಿಷನ್ನು ಯಾವು ಯಾವುದಕ್ಕೂ ಮಿಷನ್ನು ಎಷ್ಟಂತ ಹೇಳುವುದು, ಎಲ್ಲವೂ ಕಪ್ಪು ಕಪ್ಪಗೆ ಯಾಸ ತಾಳಿ ಮೇಲೇಳುತ್ತಿವೆ.

ಅಳತೆ ಮಾಡುವಲ್ಲಿ ಪಟೇಲರು ಕೈಕಟ್ಟಿ ನಿಂತಿರುವರು. ತಕ್ಷಣವೇ ಹಿಂದಕ್ಕೆ ತಿರುಗುವರು. ಕೊಂಚದೂರ ಮುಂದಕ್ಕೆ ಬರುವರು. ಕೆಲಸ ಆಗುತ್ತಿದೆ ಎಂದು ಅವರ ಮುಖ ನೋಡಿದರೆ ಒಂದು ಕೂಸೂ ಹೇಳಬೇಕು.

ಹೈಕಳು ಎಂದರೆ ಎಲ್ಲಾ ಊರಿನವೂ ಒಂದೇ, ಪಳ್ಳಿ ಬಿಟ್ಟಮೇಲೆ ಅವು ಇಲ್ಲಿ ಜಮಾಯಿಸುತ್ತವೆ. ದೊಡ್ಡವರು ಗದರಿಸಿದಾಗ ದೂರ ಹೋಗುತ್ತವೆ. ಅವರು ಎತಗೋ ತಿರುಗಿದಾಗ ಮತ್ತದೆ. ಒಟ್ಟಲ್ಲಿ ಹೈಕಳೆಲ್ಲ ಸಂಜೆ ಮಾಡುವುದು ಟಾರು ಕಾಯ್ಸುವಲ್ಲೆ.. ಕತ್ತಲು ಇಳಿದು ಶಾಣೆ ಹೊತ್ತಾದರೂ ಹಟ್ಟಿ ಮುಟ್ಟವ ದೊಡ್ಡವರೆ ಊರ ಮುಂದಲಿಗೆ ಬಂದು ಅವಕ್ಕೆ ನಾಕು ಬಡಿದಾದರೂ ತಂತಮ್ಮ ಜತೆ ಕರಕೊಂಡು ಹೋಗಬೇಕು. ಬಂದವರೂ ರೋಡು ಆಗುವ ಅದ್ಭುತವ ಚಣೋತ್ತಾರು ನೋಡದೆ ಹೋಗರು, ಹಟ್ಟಿಕಡೆ ತಿರುಗಲು ಹೈಕಳ

ಕೈ ಹಿಡಿದರೆ ಅವುಗಳ ಕೈ ಟಾರು ದೊಡ್ಡವರಿಗೂ ಮೆತ್ತಿಕೊಳ್ಳುವುದು. ರಂಗಪ್ಪ ಎಂಬಾತ ತನ್ನ ಮಗನ ಕರೆದೊಯ್ಯಲು ಬಂದಾಗ ಹಂಗೆ ಆಯ್ತು. ಅವ ರೇಗಿ ಮಗನಿಗೆ ಮೇಷ್ಟ್ರು ಕಲಿಸಿಕೊಡೋದು ಇದ? ಎಂದು ನಾಕು ಬಿಗಿದ. ಅದು ದೊಡ್ಡಗೆ ಬಾಯಿ ತೆಗೆದು ಆಳಲು ಸುರುಮಾಡಿ ನಿಲ್ಲಿಸಲೇ ಇಲ್ಲ. ರಂಗಪ್ಪಗೆ ಸಹನೆ ಮೀರಿ ಬಾಯಿಗೂ ಒಂದೇಟು ಕೊಟ್ಟಾಗ ಆ ಹೈದ

ಅಳು ಜೋರು ಮಾಡುತ್ತಾ ತನ್ನ ಎರಡು ಕೈಯನ್ನೂ ಬಾಯಿಗೆ ತಂದುಕೊಂಡಿತು. ಕೈಗಳ ಟಾರು ಬಾಯಿಗೆ ಬಂದು ಬಾಯಿ ಬಿಡದಂತಾಗಿ ಆಳು ನಿಂತಿತು.ಹೀಗೆ ಇಂಥವು, ಸಂಜೆ ಆಗುತ್ತೆ.

ಮತ್ತೂ ಅಂದರೆ ಯಮ್ಕ ಕೆಲಸ ಬಿಟ್ಟು ಏಳುವಾಗ ಟಾರನ್ನು ಉಂಡೆ ಮಾಡಿ ಕೈಗೆ ತಕ್ಕೊಳ್ಳುವುದು ರೂಢಿ. ಯಾರೋ ಒಬ್ಬಳು ತೂತು ಮಡಕೆಗೆ ಟಾರು ಮೆತ್ತಿ ಸುರಿಯುವುದು ಏಕ್ ದಂ ನಿಂತು ಹೋಯ್ತಂತೆ. ಇದಾದ ಮೇಲೆ ಎಂಥದು ಊರ ಯಾವ ಮೂಲೇಲಿ ಆದರೂ ಅಲ್ಲಿಗೆ ಟಾರು ಹೋಗುತ್ತದೆ ಅಥವಾ ತಂದಿಟ್ಟಿರುವ ಮನೆಯಿಂದ ಈಸಿಕೊಳ್ಳುವಷ್ಟು ಚಲಾವಣೆ ಇದೆ.

ದೊಡ್ಡ ಮಿಷನ್ನು ನಡೆಸುವ ಒಬ್ಬಾತ ಸೆಳಕಿನವನು ಅಲ್ಲುಂಟು. ಅವ ಕೈಲಿಡಿದು ಬಂದಿದ್ದ ಪೇಪರಲ್ಲಿ ತಮ್ಮ ಊರ ಸುದ್ದಿ ಬಂದಿದೆಯಂತೆ. ನಿಜವೆ ಎಂದು ಗುಲ್ಲು ಎದ್ದು ಯಾರು ಯಾವ ಕೆಲಸಕ್ಕೂ ಕೈ ಹಾಕದೆ ಸೆಳಕಿನವನ ಸುತ್ತಲೂ ಗುಂಪುಗೂಡಿದರು. ಪಟೇಲರು ತುಂಬವೆ ಬಿಸಿ ಈ ಹಿಂದಕ್ಕೆ ಆಗಿದ್ದರು. ಬಂದಿದ್ದ ಊರ ಸುದ್ದಿ ಹಿಂಗಿತ್ತು:

"ಸ್ವಾಮಿ, ನಮ್ಮೂರಿಗೆ ರೋಡು ಆಗಬೇಕೆಂದು ದೊಡ್ಡ ಮನಸು ಮಾಡಿ ಸರ್ಕಾರ ನಡೆಸಿಕೊಡುತ್ತಿರುವುದೂ ಈಗ ರೋಡು ಆಗುತ್ತಿರುವುದೂ ಸರಿಯಷ್ಟೆ ಈ ರೋಡಿನ ಕಂಟ್ರಾಕ್ಟರಾದ ಪಟೇಲರು ಸರ್ಕಾರಿ ದುಡ್ಡಲ್ಲಿ ಮಿಗಿಸಿ ದೇವಸ್ಥಾನ ಊರ್ಜಿತಗೊಳಿಸುತ್ತಾರೆಂದು ತಿಳಿದು ಬಂದಿದೆ. ಏನೇ ಆಗಲಿ, ಇದು ಸರ್ಕಾರಿ ಹಣದ ದುರುಪಯೋಗ, ಇಂತಹುದು ಆಗದಂತೆ ತಡೆಗಟ್ಟಬೇಕೆಂದು ನಾವು ಸಂಬಂಧ ಪಟ್ಟವರಲ್ಲಿ ಪ್ರಾರ್ಥಿಸುತ್ತೇವೆ".

– ನೊಂದವರು.

ಅಂದು ರೋಡಿನ ಕೆಲಸ ನಡೆಯಿತು ಅಂತ, ನಡೆಯಲಿಲ್ಲ ಅಂತ ಕರಾರುವಾಕ್ಕು ಹೇಳಲು ಬರುವುದಿಲ್ಲ, ನಡೆದರೂ ನಡೆಯದಂತೆ ನಡೆಯಿತು. ಅನ್ನಬಹುದೆ? ಎಂಥೆಂಥದೋ ಆಗಬೇಕಾದ್ದು ಎಂಥೆಂಥದೋ ಆಗತೊಡಗಿದೆ. ಏನಾಗುತ್ತೋ ಅಂತ ಊರ ಬೀದಿ ಒಳಗ ಭಯ ಹರಿದಾಡಿತು. ಸಂಜೆ ಆಗುತ್ತ ಆಗುತ್ತ ಅದು ಹೆಚ್ಚು ಹೆಚ್ಚು ದಪ್ಪ ಆಗುತ್ತಿತ್ತು, ನ್ಯಾಯಕ್ಕೆ ಮನೆಗೊಂದಾಳು ಭಾವಡಿಗೆ ಬರಬೇಕೆಂದು ಪಟೇಲರು ತಮಟೆ ಬಡಿಸಿ ಸಾರಿಸಿದರು, ಈಗ

ಈಗಷ್ಟೆ ಕತ್ತಲು ನಿಧಾನ ನೆಲಕ್ಕೆ ಇಳಿಯುತ್ತಿದ್ದುದು ಈಗತಾನೆ ಪೂರ್ತ ಅಗತಕೊಂಡಿದೆ. ಹೊರಗ ನಡೆದಾಡಿದರ ಒಬ್ಬರ ಮೊಖ ಒಬ್ಬರಿಗೆ ಕಾಣದಷ್ಟು ಗವ್ವ ಹಟ್ಟಿ ಕಿಂಡಿಗಳಿಂದ ಮಂಕು ದೀಪದ ಬೆಳಕು ಹೊರಕ್ಕೆ ನೆಸೆದು ಕತ್ತಲೊಳಗಾಗುತ್ತಿತ್ತು.

ಛಾವಡಿ ಒಳಗ ಲಾಟೀನು ದೊಡ್ಡತಗೆ ಹೊಗೆ ಬೆಳಕು ಕುಕ್ಕುತ ಅದೆ. ಆಗಲೇ ನಾಲ್ಕಾರು ಉಂಡಾಡಿಗಳು ತಮಗೆ ಯಾವುದೂ ಸಂಬಂಧ ಇಲ್ಲದವರಂತೆ ಯಾಸ ಹಾಕಿ ಮಲಗಿಬಿಟ್ಟವರೆ. ಅಲ್ಲಿಗೆ ಒಬ್ಬರಾಗಿ ಇಬ್ಬರಾಗಿ ಜನ ಕೂಡಿ ಕೊಳ್ಳುತ್ತಿದೆ. ಹೆಚ್ಚು ಹೆಚ್ಚು ಕೂಡಿದಂತೆ ಗಲಗು ಗದ್ದಲ ಹೆಚ್ಚಾಗುತ್ತಿದೆ.

ಚಣೊತ್ತು ಕಳೆದ ಮೇಲೆ ಅಲ್ಲಿಂದ ಹಾಹೋ ಹೊ ಹೊ ಎದ್ದು ಊರ ಮುಳುಗಿಸತೊಡಗಿತು. ಪಟೇಲರು ನಡುಮಧ್ಯೆ ಕುಂತವರೆ, ಲಾಟೀನು ಬೆಳಕು ನೇರ ಅವರ ಮೊಖಕ್ಕೆ ಬೀಳುತ್ತಿತ್ತು. ಅವರ ಮೊಖದಲ್ಲಿ ತೆಳ್ಳಗೆ ಬೆವರಾಡುವುದನ್ನೂ ಹಣೆಯ ನೆರಿಗೆ ಎದ್ದು ಮಾಯವಾಗಿ ಹೋಗುವ ಬಗೆಯನ್ನೂ ಕಾಣಬಹುದು. ದೂರದ ಮೂಲೆಯಲ್ಲಿ ಕುಂತವರು ಯಾರಾರು ಅಂತ ಬೀಡಿ ಹಚ್ಚಿದಾಗ ಆ ಬೆಳಕಲ್ಲಿ ಗುರುತಿಸಬಹುದು ಅಂಥ ಕಿಕ್ಕಿರಿದಷ್ಟು ಜನರು.

ಒಬ್ಬ : ಸುರು ಮಾಡ್ರಪ್ಪೊ.

ಇನ್ನೊಬ್ಬ : ಎಲ್ಲರ‍್ಗು ಗೊತ್ತಿರೋದೆ ಅದು. ಇನ್ನೇನ್ನ ಸುರು ಮಾಡೋದು ಪೂಜ ಮಾಡೋದ ಬಿಟ್ಟು ?

ರಾಜಪ್ಪ : ನಣ್ಣ ಹಂಗಂದ್ರ ಅರ್ಥ.

ಮತ್ತೊಬ್ಬ : ಅರ್ಥಗಿರ್ಥ ನಿಮಗ್ತಾನಿಯಪ್ಪ ಗೊತ್ತು. ನಾವೇನ ಇಸ್ಕೊಲ್ಲೋಗಿ ಮಂಟಾಕಿದ್ದವ ?

ಶಾನುಭೋಗರು : ವಸಿ ಸುಮ್ಮಿರಯ್ಯ, ಮಾತಾಡಿ ಪಟೇಲ್ರೇ ನೀವು

ಪಟೇಲರು : ಮಾತಾಡೋದು ಏನಿದ್ದದು ಹೇಳಿ

ಶಾನುಭೋಗರು : ಕಾಗ್ದ ಬರ್ದು ಊರ ಮಾನ ತೆಗೆದವರು ನೀವುಗಳೇ ಅಂತ ಎಲ್ಲರ‍್ಗು ಗೊತ್ತು. ಅದ ಒಪ್ಪೋ ಥರ ಅಪ್ರಿ ತಾನೆ ನೀವುಗಳು. (ಲಕುಮ

ರಾಜಪ್ಪ ಶಂಭು ಮಾದು ಕಡೆ ಶಾನುಭೋಗರು ನೋಡುವರು. ಹೌದು ಎಂಬಂತೆ ಅವರು ತಲೆ ಆಡಿಸುವರು. ಹೊರಗೆ ಇದ್ದವರ ಎದೆಗೆ ಗುದ್ದುವಂತೆ ಗದ್ದಲ ಎದ್ದು ಹೊರ ಬರುವುದು),

ಪಟೇಲರು : ಅದ್ರಲ್ಲಿ ಏನಯ್ಯ ನೀವುಗಳು ಅನ್ಯಾಯ ಕಂಡದ್ದು? (ಪಟೇಲರ ಮಾತುಗಳಷ್ಟೇ ಒಡೆದು ಕೇಳಿಸುವುದು. ಯಾರು ತುಡಿಪಿಟಿಕನ್ನುವುದಿಲ್ಲ).

ರಾಜಪ್ಪ : ಯಾವ ಹಣಾನೊ ಯಾವುದಕ್ಕೂ ಹಾಕದ್ರ ಇನ್ನೇನ ಆಗೋದು? (ಸದ್ದು ಏಳುವುದು. ಶಾನುಭೋಗರು ಕೈಯಾಡಿಸುವರು. ಸದ್ದು ನಿಧಾನ ಕಮ್ಮಿಯಾಗುವುದು).

ಪಟೇಲರು : ನಾ ಯಾನ ನನ್ನ ಇರೊ ಮಕ್ಕಳಾಗಿ ಹಣ ತಿಂದ್ರೆ, ಊರಾಗಿ ದೇವ್ರ ಕೆಲ್ಸಕ್ಕಾಗಿ ಹಂಗ ಮಾಡ್ತನೊ?

ಮಾದು : ನೀವು ಯಾಕಾರು ಮಾಡಿ ಸ್ವಾಮಿ. ಆದ್ರೆ ಮಾಡೊ ಅಂತದ್ಕ ಮಾಡಿಲ್ಲ. (ಸದ್ದು ಏಳುವುದು ಮುನ್ನಿಗಿಂತ ಜೋರಾಗೆ ಯಥಾಪ್ರಕಾರ ಶಾನುಭೋಗರು ಈ ಸಲ ಒಂದಿಬ್ಬರು ಎದ್ದೂ ನಿಲ್ಲುವರು)

ಒಬ್ಬ : ನಿಮ್ಗ ದೇವ್ರು ದಿಂಡ್ರು ಹಿರೀಕರು ಅಂತ ಒಬ್ರೂ ಇಲ್ವಾ ?

ಇನ್ನೊಬ್ಬ : ಇದ್ರ ಈ ಯಾಪಾರ ಮಾಡ್ತ್ತಿದ್ವ ಅವು ?

ಮತ್ತೊಬ್ಬ : ಸಾಕು ಸುಮ್ನಿರಪ್ಪೊ ತಲಗೊಂದು ಮಾತ್ಯಾಕ?

ಮಗದೊಬ್ಬ : ಹಿಡ್ಕಂಡು ನಾಕ ಬಡೀರುಡ, ಸರಿಯಾಯ್ತದ. ಕೇಮಿಲ್ದೆ ಮಾತಾಡಿ ಇನ್ನೂವಿ. ರಾಜಪ್ಪ, ಶಂಭು

ಶಂಭು ಅಪ್ಪ: ಯಾರಪ್ಪ ಅವ? ಬಡೀರಿ ಬನ್ನಿ ಮತ್ತ. ಅದ್ನೂ ನೋಡವು. ನಿಮ್ಮ ಮೂಗ್ನ ನ್ಯಾರಕ ನಿಮ್ಗ ಸರಿ.

ಪಟೇಲರು : (ದನಿ ಎತ್ತರಿಸಿ) ನೀವ್ಗಳು ಮಾಡಿದ್ದೇ ಬೋಸರಿ ಕಣ್ರಯ್ಯೋ

ಶಂಭು : ನೀವು ಮಾಡಿದ್ದೆ ನಿಮ್ಮ ಸರಿ, ಅದಕ್ಯಾಕ ಮಾತು?

ಪಟೇಲರು : ಅದೇನ್ರಲ? ಅಷ್ಟೊ ಧಿಮಾಕ್ನ ಮಾತ ಆಡ್ತ ಅವ್ರಿ. ಅಷ್ಟು ಸದರ ಬಿದ್ದೋಗಿದ್ದನ ನಾನು ?

ಎಂದು ಪಟೇಲರು ಕಯಿ ಬಿಗಿ ಹಿಡಿದುಕೊಂಡು ತಟಕ್ಕೆ ಎದ್ದು ನಿಂತರು. ಆ ರಭಸಕ್ಕೆ ಲಾಟನಿಗೆ ತಲೆ ಬಡಿದು ಗಾಜು ಒಡೆದು ಟಳ ಟಳ ನೆಲಕ್ಕೆ ಉದುರಿತು ಲಾಟೀನ ಬೆಳಕು ಹಾರಾಡಿ ಹಾರಾಡಿ ಕೊನೆಗೆ ಜೀವ ಹೋಗಿ ಕತ್ತಲು ಅಮರಿಕೊಂಡಿತು. ಆಕ್ಷಣವೇ ಹಾ ಹೊ ದಬ್ ದಬ್ ಬಯ್ಗಳು ತುಂಬಿಕೊಂಡವು. ಆದಷ್ಟು ಬೇಗ ಛಾವಡಿಯಿಂದ ಕಿತ್ತುಕೊಂಡು ಹೊರಕ್ಕೆ ಹೋಗಿಬಿಡಲು ಎಲ್ಲ ಹವಣಿಸಿದರು. ಹಿಂಗೆ ಚಡೊತ್ತು ನಡೆದು ಅಲ್ಲಿಂದ ಆಮೇಲೆ ಎಲ್ಲ ನಿಂತು ಹೋಯ್ತು, ಊರ ಹಟ್ಟಿದಾರಂದಗಳು ಮುಚ್ಚಿಕೊಂಡು ಬಿಟ್ಟವು.

ಅಷ್ಟೆಲ್ಲ ಆದದ್ದು ಅಷ್ಟಕ್ಕೇ ನಿಲ್ಲಲಿಲ್ಲ. ಟಾರಿನ ಡ್ರಮ್ಮುಗಳನ್ನು ಕಾಯಿಸಿ ಊರ ಮುಂದಲು ಇಟ್ಟಿದ್ದು ಸರಿಯಷ್ಟೆ, ಬೆಳಿಗ್ಗೆ ನೋಡಲು ಅವಾವು ಒಂದೂ ಅಲ್ಲಿ ಇರಲಿಲ್ಲ. ಅವು ಹೋದ ದಿಕ್ಕು ಹಿಡಿದು ಹೋಗಿ ನೋಡಿದರೆ ಅವು ಊರಾಚೆಗಿನ ಒಂದು ಗುಂಡಿಯ ಸುತ್ತ ಇರೋ ತಮ್ಮ ಬಾಯಿಯ ಇದ್ದಷ್ಟೂ ಅಗಲಿಸಿಕೊಂಡು ಒಳಗಿನ ಟಾರನ್ನು ಹಿಂಟು ಹಿಂಟಾಗಿ ಕಪ್ಪಗೆ ಗುಂಡಿಗೆ ಕಕ್ಕುತ್ತಾ ಬಿದ್ದಿದ್ದವು. ಮೇಲಿಂದ ಬಿಸಿಲು ಏರುತ್ತ ಏರುತ್ತ ಗುಂಡಿಗೆ ಟಾರು ಇಳಿಯುತ್ತ ಇಳಿಯುತ್ತ ಡಮ್ಮುಗಳ ಕಡೆಗೆ ಟಾರು ನಿಧಾನ ಚಾಚಿಕೊಳ್ಳುವುದು ನಡೆದಿತ್ತು. ಸುತ್ತ ನೋಡುತ್ತ ನಿಂತವರು ನೋಡುತ್ತಲೆ ನಿಂತರು. ನೋಡದವರು ನೋಡಲು ಹಿಂಡು ಹಿಂದು ಬಂದರು. ನೋಡಿ ನೋಡಿ ಕಣ್ಣಿಗೆ ಕಪ್ಪ ಹಿಡಿಯಲು ಕಾಲು ತೆಗೆಯುವರು. ಯಾರ ಬಾಯಲ್ಲು ಮಾತಿಲ್ಲ.

ಪಟೇಲರ ಬಾಯಲ್ಲು ಮಾತಿಲ್ಲ. ಒಬ್ಬ ಪಟೇಲರಿಗೆ ನೀವು ಹೂ ಅನ್ನಬೇಕಿತ್ತು. ಮಕ್ಕಳಿಗೆ ರಾತ್ರೀನೆ ಹುಟ್ಟಿದ ದಿನ ಕಾಣಿಸಬಹುದಿತ್ತು ಅಂದನು. ಪಟೇಲರು ಅದಕ್ಕೂ ಅವುಡು ಕಚ್ಚಿದರು. ಮಾತಾಡಲಿಲ್ಲ. ಪೋಲೀಸು ಸ್ಟೇಷನ್ನಿಗೆ ಅಲ್ಲಿಂದಲೆ ಹಾಗೆ ಹೋದರು. ಬಂದದ್ದು ಸಂಜೆಯಲ್ಲೆ. ನಾಳೆ ಮೊಬ್ಬಿಗೆ ಪೋಲೀಸಿನವರು ಬಂದು ಮಹಜರು ಮಾಡಿಕೊಂಡು ಹೋಗುವರೆಂದೂ ಮುಂದಣ ಕತೆ ಹೇಗಾಗುವುದೆಂದು ಯಾರಿಗೂ ತಿಳಿಯದೆಂದೂ ತಿಳಿದುಬಂತು. ಹಿಂಗೆ ಒಂದರ ಮೇಲೊಂದು ಬಿದ್ದು ಕಪ್ಪಗೆ ಹಿಗ್ಗುತ್ತಾ ಹೋಗುತ್ತಿದ್ದ ಇಂಥದಕ್ಕೆ ಕೂಡಿಕೊಳ್ಳಲು ಊರಿಗೆ ಕತ್ತಲು ಹಿಡಿಯುವುದನ್ನೆ ಕಾಯುತ್ತ ಮತ್ತೊಂದು ಕಾದು ಕುಳಿತಿತ್ತು.

ಮುಸ್ಸಂಜೆಗೆ ಎಲ್ಲರ ಹಟ್ಟಿದಾರಂದಗಳೂ ಮುಚ್ಚಿ ಬೀದಿ ಒಳಗ ನರಪಿಳ್ಳೆಯ ಸುಳಿವಿಲ್ಲದಿದ್ದರೂ ರಂಗಪ್ಪನ ಹೈದ ಮಾತ್ರ ಹಟ್ಟಿ ಕಂಡಿರಲಿಲ್ಲ. ಪಳ್ಳಿಗೆ ಮಧ್ಯಾಹ್ನ ಉಂಡುಹೋದುದಂತೆ. ಮೇಸ್ಟರನ್ನು ಕೇಳಿದರು, ಹಟ್ಟಕಡೆ ಹೊಂಟುದ ತಾವ ಮಿದ್ದು ಕಂಡೆ' ಎಂದರು. ಹೊಂಟಕಡೆ ಹೊಂಟೇಬಿಡುವ ಬೆಪ್ಪು ಹೈದ ತಮ, ಲಾಟೀನು ಈಸಿಕೊಂಡು ಹಟ್ಟಿ ಹಟ್ಟಿ ತಟ್ಟಿ ಬಂದು ಆಯ್ತು.

ಆಡುವ ಗೆಣಕಾರರ ಕೇಳಿ ಆಯ್ತು. ಎಲ್ಲರೂ ಕಂಡಿದ್ದೆವು ಅನ್ನುವವರೆ, ಯಾವ ಕೇರಿ ಯಾವ ಬೀದಿಯನ್ನೂ ಬಿಡಲಿಲ್ಲ. ಹಿಂಗೆ ಎಷ್ಟೊತ್ತು ಆಯ್ತೊ. ಆಹೈದನ ಅವ್ವನ ಅಳು ಸದ್ದಡಗಿದ ಊರಲ್ಲಿ ರಾಗವಾದ ಸದ್ದಾಗಿ ಸಮರಾತ್ರಿ ಮೀರಿಯೂ ಇತ್ತು.

ಮೊಬ್ಬಿಗೇ ಪೋಲೀಸು ವ್ಯಾನು ಕಷ್ಟಪಟ್ಟುಕೊಂಡು ಊರ ಮುಂದು ಬಂದು ನಿಂತಿತು. ನೋಡಬಂದವನಿಗೆ ಪಟೇಲರ ಕರೆತರುವಂತೆ ಇನ್ಸ್ ಪೆಕ್ಟರು ಕಳಿಸಿದರು. ಪಟೇಲರು ತಡಬಡಾಯಿಸಿಕೊಂಡು ಬಂದು ನಿಂತರು. ಎಲ್ಲರೂ ಊರಾಚೆಗಿನ ಟಾರು ಗುಂಡಿ ಹತ್ತಿರ ಬಂದು ನೋಡಿ, ನೋಡಿದಾಕ್ಷಣ ಚಿಕ್ಕ ನಿಂತುಬಿಟ್ಟರು. ರಂಗಪ್ಪನ ಹೈದನ ಕಾಲನ್ನು ಗುಂಡಿಗೆ ಇಳಿದಿದ್ದ ಟಾರು ಹಿಡಿದುಕೊಂಡಿತ್ತು. ಎರಡೂ ಕೈಗಳನ್ನು ಟಾರಿನ ಡ್ರಮ್ಮು ಕಚ್ಚಿಕೊಂಡಿತ್ತು. ಮಯ್ಯಿ ಕಯ್ಯಿ ಮೊಖ ಅನ್ನದೆ ಟಾರು ಟಾರಾಗಿತ್ತು. ಮತ್ತೂ ಹತ್ತಿರದಿಂದ ನೋಡಿದರೆ ಹೈದನ ಮಯ್ಯೊಳಗೆ ಇನ್ನೂ ಜೀವ ಆಡುತ್ತಿತ್ತು.

* * *

# "ಅಭಿವೃದ್ಧಿಯ ಅಂಧಯುಗ, ಅದರಾಚಿನ ಒಂದು ಯುಗ"

**– ನಾಗೇಶ್ ಹೆಗಡೆ**

[ಇಂದು "ಸಂಕುಲ" ಕ್ಲಬ್ ಹೌಸ್ನಲ್ಲಿ ನನ್ನದೊಂದು ಉಪನ್ಯಾಸ ಇತ್ತು. ಯಂತ್ರಯುಗದ ಈ ಮನುಷ್ಯ ಇಡೀ ಭೂಮಿಯ ಪಾಲಿಗೆ ಪ್ರಳಯಾಂತಕ ಜೀವಿಯಾಗಿ ಬೆಳೆದಿದ್ದಾನೆ. ತನ್ನ ಭೀಮ ಹೆಜ್ಜೆಯಿಂದಾಗಿ ಜೀವಸಂಕುಲವನ್ನೇ ಹೊಸಕಿ ಹಾಕ್ತಾ ಇದಾನೆ. ಭೂಮಿಯನ್ನು ಬಿಸಿ ಮಾಡ್ತಾ ಇದಾನೆ. ಆತ ಮಾರ್ಗವನ್ನು ಬದಲಿಸಿಕೊಳ್ಳದೇ ಇದ್ದರೆ ಇನ್ನು 20–30 ವರ್ಷಗಳಲ್ಲಿ ಇಡೀ ಪೃಥ್ವಿಗೆ ದೊಡ್ಡ ಕಂಟಕ ಬರಲಿದೆ ಅನ್ನೋದನ್ನ ಒಲಿಂಪಿಕ್ಸ್ ಉದಾಹರಣೆಗಳ ಜೊತೆ ನಾನು ವಿವರಿಸಿದೆ. ಅದರ ಸಂಕ್ಷಿಪ್ತ ರೂಪ ಇಲ್ಲಿದೆ]

ನೀರಜ್ ಚೋಪ್ರಾಗೆ ಅಭಿನಂದನೆ. ಇಡೀ ರಾಷ್ಟ್ರದ ಎಲ್ಲರ ಎದೆನೂ 56 ಇಂಚು ಉಬ್ಬೋ ಹಾಗೆ ಮಾಡಿದ್ನಲ್ಲ. ಅವನಿಗೆ ಅಭಿವಂದನೆ. ಈ ಬಾರಿ ಅನೇಕ ಸಂಕಷ್ಟಗಳ ನಡುವೆ ಒಲಿಂಪಿಕ್ಸ್‌ನಲ್ಲಿ ನಡೆಯಿತು. ಕೊರೊನಾ ಮಹಾಮಾರಿಯಿಂದಾಗಿ ಕ್ರೀಡಾಂಗಣ ಖಾಲಿ ಖಾಲಿ. ಟೋಕಿಯೋಕ್ಕೆ ಅಪರೂಪ ಎನಿಸಿದ 42 ಡಿಗ್ರಿ ಸೆಕೆಯಿಂದ ಕ್ರೀಡಾಳುಗಳು ಒದ್ದಾಡ್ತಾ ಇದ್ರು. ಜೊತೆಗೆ 'ಹಗಿಬಿಸ್' ಹೆಸರಿನ ಸುಂಟರಗಾಳಿ (ಟೈಫೂನ್) ಅತ್ತಲೇ ಸಾಗಿ ಬರ್ತಾ ಇತ್ತು. ಸದ್ಯ, ಎಲ್ಲ ಸುಖಾಂತವಾಯ್ತು.

ಇಂದಿನ ಕ್ಲಬ್ಹೌಸ್ ಸಭೆಯಲ್ಲಿ ನಾನು ಮಾತಾಡಬೇಕು ಅಂತ ಮಿತ್ರ ಹರ್ಷಕುಗ್ವೆ ಈ ವಿಶೇಷ ದಿನವನ್ನ ಆಯ್ಕೆ ಮಾಡ್ಕೊಂಡಿದಾರೆ. ಮೊನ್ನೆ ಆಗಸ್ಟ್ 6 ಹಿರೊಶಿಮಾ ದಿನ ಇತ್ತು. ಇಂದು ಆಗಸ್ಟ್ 8 ನಾಗಾಸಾಕಿ ದಿನ. ಈ ಆಟಂಬಾಂಬ್‌ಗಳನ್ನ ಸೃಷ್ಟಿ ಮಾಡಿದ್ದು ಇದೆಯಲ್ಲ, (ಪರಮಸೂಕ್ಷ್ಮ ಪರಮಾಣುವನ್ನ ಒಡೆದು ಅದರಿಂದ ಅಪಾರ ಶಕ್ತಿಯನ್ನ ಹೊಮ್ಮಿಸೋಕೆ ಕಲಿತಿದ್ದು) – ಅದು ವಿಜ್ಞಾನದ ಪರಮೋಚ್ಚ ಸಾಧನೆ. ಈ ಜಗತ್ತನ್ನೇ ಅದು ನಾಶ ಮಾಡಲು ಸಾಧ್ಯ ಅನ್ನೋದು ಜಪಾನ್ನಲ್ಲಿ ಸಾಬೀತಾಯ್ತು. ಹಿರೊಶಿಮಾದಲ್ಲಿ ಯುರೇನಿಯಂ ಬಾಂಬ್ ಬಿದ್ದಾಗ ಏಕ್ದಮ್ ಒಂದೂಕಾಲು ಲಕ್ಷ ಜನ ಸತ್ತರು. ನಾಗಾಸಾಕಿಲಿ ಪ್ಲುಟೋನಿಯಂ ಬಾಂಬ್ ಬಿದ್ದಾಗ ಸುಮಾರು 80 ಸಾವಿರ. ಒಟ್ಟೂ ಸುಮಾರು 225 ಸಾವಿರ ಆ ಒಂದೆರಡು ವಾರಗಳಲ್ಲಿ ಸತ್ತರು. ಅದರ

ನಂತರದ ವರ್ಷಗಳಲ್ಲಿ, ನಂತರದ ಪೀಳಿಗೆಯವರೂ ಲೆಕ್ಕವಿಲ್ಲದಷ್ಟು ಜನ ಸತ್ತರು.

ಆದರೆ ಆ ವಿಕಿರಣದ ಮಧ್ಯೆ ಭರವಸೆಯ ಒಂದು ಕಿರಣವೂ ಹೊಮ್ಮಿತ್ತು. ಇಡೀ ಜಗತ್ತನ್ನೇ ಅತ್ಯಂತ ಕರಾಳ ಸಂಕಟಕ್ಕೆ ನೂಕುವ ಶಕ್ತಿ ವಿಜ್ಞಾನಕ್ಕಿದ್ದರೂ ಅದನ್ನು ನಿಯಂತ್ರಣದಲ್ಲಿ ಇಡೋಕೆ ಸಾಧ್ಯ ಅನ್ನೋದೂ ನಮಗೆ ಗೊತ್ತಾಗಿದೆ. ಯಾಕೆಂದರೆ ಆ ಒಂದು ಜೋಡಿ ಬಾಂಬ್ ಬಿದ್ದ ನಂತರದ ಈ 74 ವರ್ಷದಲ್ಲಿ ಮತ್ತೊಂದು ವಿಶ್ವಯುದ್ಧ ಆಗಲಿಲ್ಲ ಮತ್ತು ಯಾವುದೇ ಯುದ್ಧದಲ್ಲಿ ಒಂದೇ ಒಂದು ಆಟಮ್ ಬಾಂಬ್ ಕೂಡ ಪ್ರಯೋಗ ಆಗಲಿಲ್ಲ. ಅದು ಮನುಕುಲದ ವಿವೇಕವನ್ನು ತೋರಿಸ್ತದೆ.

ನಾನು "ಅಭಿವೃದ್ಧಿಯ ಅಂಧಯುಗ, ಅದರಾಚಿನ ಒಂದು ಯುಗ" ಅಂತ ಹೇಳಿದ್ನಲ್ಲ. ಇಂದಿನ ಈ ಮಹಾಸಂಕಟದ ಯುಗವನ್ನು ದಾಟಿ ಹೊಸ ಯುಗಕ್ಕೆ ಹೋಗಬೇಕು ಅಂದರೆ ಮನುಕುಲದ ಆ ಸಮಷ್ಟಿ ವಿವೇಕ ನಮಗೆ ತುಂಬ ಬೇಕಾಗ್ತದೆ.

ಅಭಿವೃದ್ಧಿಯ ಹುಚ್ ಕುದ್ರೆ ಹತ್ತಿ ಹೋಗ್ತಾ ಇರೋ ಮನುಷ್ಯ ಇಡೀ ಭೂಮಿಯನ್ನ ಸಂಕಟದ ಪ್ರಪಾತಕ್ಕೆ ತಂದಿದಾನೆ. ಭೂಮಿಯ ತಾಪಮಾನ ದಿನದಿನಕ್ಕೆ ಏರ್ತಾ ಇದೆ. ನಾವು ಬಿಸಿಪ್ರಳಯದ ಬಾಗಿಲಲ್ಲಿ ಇದ್ದೇವೆ. ಜಗತ್ತಿನ ಎಲ್ಲ ಖಂಡಗಳಲ್ಲೂ ಅದರ ಲಕ್ಷಣಗಳು ದಿನದಿನಕ್ಕೆ ಪ್ರಖರವಾಗಿ ಕಾಣ್ತಾ ಇದೆ. ಜಡಿಮಳೆ, ಸುಂಟರಗಾಳಿ, ಹಿಮಖಂಡ ಛಿದ್ರ, ದಿಢೀರ್ ಮಳೆ, ಕ್ಷಿಪ್ರ ಬರಗಾಲ ಇವೆಲ್ಲ ಹಿಂದಿಗಿಂತ ಜಾಸ್ತಿ ಸಂಖ್ಯೆಯಲ್ಲಿ, ಜಾಸ್ತಿ ಪ್ರಖರವಾಗಿ ಕಾಡ್ತಾ ಇವೆ.

ಇದನ್ನ ಅತಿಮಾನವ ಯುಗ (ಆಂಥ್ರೊಪೊಸೀನ್) ಅಂತ ಹೆಸರಿಡಬೇಕು ಅಂತ ವಿಜ್ಞಾನಿಗಳು ತೀರ್ಮಾನಿಸಿದ್ದಾರೆ. ಯಾಕೆ ಅಂದ್ರೆ, ಈ ಮನುಷ್ಯ ಇದಾನಲ್ಲ, ಅವನು ಒಂದು ಡೈನೊಸಾರ್ಗಿಂತ, ಒಂದು ಜ್ವಾಲಾಮುಖಿಗಿಂತ, ಒಂದು ಸುಂಟರಗಾಳಿಗಿಂತ, ಒಂದು ಸುನಾಮಿಗಿಂತ ಹೆಚ್ಚಿನ ಶಕ್ತಿಶಾಲಿ ಆಗಿದಾನೆ. ಅವನೇ ನಿಸರ್ಗದ ಮಹಾ ಶಕ್ತಿಶಾಲಿ ಆಗಿದಾನೆ. ಒಂದು ಗುಡ್ಡವನ್ನೇ ಎರಡು ವರ್ಷಗಳಲ್ಲಿ ನೆಲಸಮ ಮಾಡ್ತಾನೆ.

ಬಳ್ಳಾರಿಯ ಅದುರಿನ ಬೆಟ್ಟವನ್ನು ನಮ್ಮವರು ಕಿತ್ತು ಚೀನಾಕ್ಕೆ ಕಳಿಸಿದ್ದೆವಲ್ಲ, 2008ರ ಬೀಜಿಂಗ್ ಒಲಿಂಪಿಕ್ಸ್ ಸಿದ್ಧತೆಗೆ ಅವರಿಗೆ ಕಬ್ಬಿಣದ ಅದುರಿನ ಬೆಟ್ಟಗಳೇ

ಬೇಕಾಗಿದ್ದವು. ಕಬ್ಬಿಣ ಕಳಿಸಿದ್ವಿ . ನಮ್ಮ ದೇಶಕ್ಕೇನೊ ಒಂದು ಚಿನ್ನದ ಪದಕವೇನೊ (ಅಭಿನವ ಭಿಂದ್ರಾದ್ದು) ಸಿಕ್ತು. ಆದರೆ ಗಣಿಮಾಲಿಕರು ಕ್ವಿಂಟಾಲ್ಗಟ್ಟಲೆ ಚಿನ್ನವನ್ನ ಬಾಚಿಕೊಂಡ್ರು. ನೆಲೆ ಕಳೆದುಕೊಂಡ ಲಕ್ಷಾಂತರ ಜನರ ಬದುಕು ಮೂರಾಬಟ್ಟೆ ಆಯ್ತು. ಅದು ಬೇರೆ ಕತೆ ಬಿಡಿ; ಈ ಗಣಿಗಾರಿಕೆ ಏನಿದೆ: ಪ್ರಕೃತಿ 20 ಸಾವಿರ ವರ್ಷಗಳಲ್ಲಿ ಮಾಡಿರೋ ಕೆಲಸಾನ್ನ ನಾವು ಎರಡೇ ವರ್ಷಗಳಲ್ಲಿ ಮಾಡ್ತೀವಿ. ಅದಕ್ಕೇ ಇದನ್ನ ಅತಿ ಮಾನವ ಯುಗ ಅಂತ ಕರೀಬೇಕು ಅಂತ ವಿಜ್ಞಾನಿಗಳು ನಿರ್ಧಾರ ಮಾಡಿದ್ದಾರೆ. ಸರಿ, ಆದರೆ ಮನುಷ್ಯ ಅನ್ನೋ ಈ ಮಹಾಪ್ರಚಂಡ ಜೀವಿ ಯಾವಾಗಿಂದ ಇಷ್ಟು ಪ್ರಳಯಾಂತಕ ಆದ? ಒಂದು ಗಡಿ ಅಂತ ಇದೆಯಾ?

ಇದಾವೆ. ಹತ್ತಾರಿವೆ. ಆದರೆ ವಿಜ್ಞಾನಿಗಳು ಆಯ್ಕೆ ಮಾಡಿಕೊಂಡಿದ್ದು ಇದೇ ಆಟಮ್ ಬಾಂಬಿಗಾಗಿ ಎರಡು ವರ್ಷ ಮುಂಚೆ ಅಮೆರಿಕದವರು ನೆವಾಡಾ ಮರುಭೂಮಿಯಲ್ಲಿ ಪರೀಕ್ಷಾರ್ಥ ಸ್ಫೋಟ ಮಾಡಿದ್ದರು. ಆ ಆಸ್ಫೋಟದಿಂದ ವಿಕಿರಣ ಮೇಘ ವಾಯುಮಂಡಲಕ್ಕೆ ಸೇರಿ ಅಲ್ಲಿಂದ ಇಡೀ ಭೂಮಿಗೆ ಹಬ್ಬಿದೆ. ಎಲ್ಲ ಖಂಡಗಳ ಹೂಳಿನಲ್ಲೂ ಅದು ಸಿಗ್ತಾ ಇದೆ. ಲಕ್ಷಾಂತರ ವರ್ಷಗಳ ನಂತರ ಅದು ಶಿಲಾಸ್ತರವಾಗಿ ಶಾಶ್ವತವಾಗಿ ನಮ್ಮ ಮನುಕುಲದ ?ಸಾಧನೆ?ಯನ್ನು ಅಚ್ಚೊತ್ತಿರುತ್ತದೆ. ಇನ್ನು ಐದು ಕೋಟಿ ವರ್ಷಗಳ ನಂತರ ಯಾರಾದರೂ ಡ್ರಿಲ್ಲಿಂಗ್ ಮಾಡಿದರೆ ಅವರಿಗೆ ಈ ಕಣಗಳು ದಂಡಿಯಾಗಿ ಸಿಗ್ತವೆ.

ಮತ್ತೆ ಒಲಿಂಪಿಕ್ಸ್ಗೆ ಬರುತ್ತೇನೆ. ಈ ಒಲಿಂಪಿಕ್ಸ್ ಕ್ರೀಡಾ ಮಹೋತ್ಸವಗಳ ಘೋಷವಾಕ್ಯ ("ಇನ್ನಷ್ಟು ವೇಗ, ಇನ್ನಷ್ಟು ಎತ್ತರ, ಇನ್ನಷ್ಟು ಸಶಕ್ತ") ಏನಿದೆ, ಅದು ಮನುಷ್ಯನ ರುದ್ರ ಇತಿಹಾಸವನ್ನು ಪ್ರತಿನಿಧಿಸುವ ಅತ್ಯಂತ ಸೂಕ್ತವಾಗಿದೆ. ಮನುಷ್ಯ ಮನುಷ್ಯರ ನಡುವಣ ಈ ಸ್ಪರ್ಧೆಯೇ ನಮ್ಮನ್ನು ಕರಾಳ ಯಂತ್ರಯುಗಕ್ಕೆ, ಬಂಡವಾಳಶಾಹಿ ಯುಗಕ್ಕೆ ತಂದಿಟ್ಟಿದೆ. ಅವರು ಪೈಪೋಟಿಯಲ್ಲಿ ಭೂಮಿ ನೆಲದಾಳದಲ್ಲಿ ಹೂತಿಟ್ಟಿದ್ದ ಫಾಸಿಲ್ ಇಂಧನಗಳನ್ನ ಮೇಲೆತ್ತಿ ಕೈಗಾರಿಕಾ ಕ್ರಾಂತಿ, ಹಸಿರು ಕ್ರಾಂತಿ, ತಂತ್ರಜ್ಞಾನ ಕ್ರಾಂತಿ ಇವೆಲ್ಲವನ್ನೂ ಸಾಧಿಸಿದರು. ಹಾಗೇಯೇ ಮನುಷ್ಯ ಮನುಷ್ಯರಲ್ಲಿ ಅದು ಅಸಮತೋಲವನ್ನು ಹೆಚ್ಚಿಸಿತು, ಜೀವಲೋಕವನ್ನು ಧ್ವಂಸ ಮಾಡಿತು., ಭೂಮಿಯ ತಾಪಮಾನವನ್ನು ಹೆಚ್ಚಿಸಿತು.

ನಾವು ಸತತವಾಗಿ ನಿಸರ್ಗದ ಮೇಲೆ ದಾಳಿ ಮಾಡ್ತಾ ಇದೇವೆ. ಆ ಸಮರದಲ್ಲಿ ಅಂತಿಮವಾಗಿ ನಾವು ಗೆದ್ದರೂ ಸೋಲು ನಮ್ಮದೇ ಅನ್ನುವ ವಿವೇಕವೇ ಇಲ್ಲದಂಥ ಯುಗಕ್ಕೆ ನಾವು ಬಂದಿದೇವೆ. ಈ ಭೂಗ್ರಹವೇ ನಮ್ಮ ಏಕೈಕ ಮನೆ; ಅದಕ್ಕೆ ಬೆಂಕಿ ಬಿದ್ದಿದೆ ಅನ್ನೋ ಅರಿವೇ ಇಲ್ಲದೇನೇ ನಾವೆಲ್ಲ ಆ ಮನೇಲಿ ಕೆಲವರು ಇನ್ನೂ ಎತ್ತರ, ಇನ್ನೂ ಬಲಿಷ್ಠ ಬೆಳೆಯೋಕೆ ಪೈಪೋಟಿಗೆ ಬಿದ್ದಿರೊದನ್ನು ನೋಡ್ತಾ ಇದೇವೆ.

ವಿಶ್ವಮಟ್ಟದಲ್ಲಿ ಕ್ಯೋಟೊ ಒಪ್ಪಂದ, ಕೊಪೆನ್ಹೇಗೆನ್ ಒಪ್ಪಂದ, ಪ್ಯಾರಿಸ್ ಒಪ್ಪಂದ ಎಲ್ಲ ಆಗ್ತಾ ಇವೆ. ಆದರೆ ಜೀವಸಂಕುಲವನ್ನು ರಕ್ಷಣೆ ಮಾಡೋಕೆ ಯಾವ ಮುತ್ಸದ್ದಿಯೂ ಮುಂದಾಗ್ತಾ ಇಲ್ಲ. ಎಲ್ಲರಿಗೂ ತಂತಮ್ಮ ದೇಶದ ಹಿತಾಸಕ್ತಿಯೇ ಮುಖ್ಯ ಆಗ್ತಾ ಇದೆ.

ಅದಕ್ಕೇ ಈಗ ಭೂಮಿ ವರ್ಷ ವರ್ಷ ಜೋರು ಧ್ವನಿಯಲ್ಲಿ ಎಚ್ಚರಿಕೆ ನೀಡ್ತಾ ಇದೆ. ಭೂಕುಸಿತ– ಹಿಮಕುಸಿತದ ಮೂಲಕ, ಮೇಘಸ್ಫೋಟದ ಮೂಲಕ, ಕಾಡಿನ ಬೆಂಕಿಯ ಮೂಲಕ, ಸುಂಟರಗಾಳಿಯ ಮೂಲಕ ಮಾತಾಡ್ತಾ ಇದೆ. ಅದನ್ನು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿ ನಾವಿಲ್ಲ.

ಕೊನೆಯದಾಗಿ ಮತ್ತೆ ಒಲಿಂಪಿಕ್ಸ್‌ಗೇ ಬರ್ತೀನಿ: ಈ ಕ್ರೀಡಾ ಮಹೋತ್ಸವದ ಮೂರು ಘೋಷವಾಕ್ಯಗಳ ಜೊತೆಗೆ ಇದೇ ಮೊದಲ ಬಾರಿ 4ನೇ ಘೋಷವಾಕ್ಯವನ್ನು ಈ ವರ್ಷ ಸೇರಿಸಲಾಗಿದೆ. ಅಲ್ಲಿ ನನಗೆ ಆಶಾ ಕಿರಣ ಕಾಣಿಸ್ತದೆ. ಅತಿ ವೇಗ, ಅತಿ ಎತ್ತರ, ಅತಿ ಬಲ ಇದರ ಜೊತೆ "ನಾವೆಲ್ಲ ಒಂದಾಗಿ" (Faster, Higher, Stronger + Together) ಹೊಸ ಸವಾಲನ್ನು ಎದುರಿಸೋಣ ಅನ್ನೋ ಮಾತನ್ನು ಸೇರಿಸಿದ್ದರಲ್ಲಿ ಮನುಕುಲಕ್ಕೆ ಒಂದು ಸಂದೇಶ ಇದೆ.

ನಾವೆಲ್ಲ ನಮ್ಮ ನಮ್ಮ ಚಿಲ್ಲರೆ ಆಸಕ್ತಿಗಳನ್ನು (ಜಾತಿ ರಾಜಕಾರಣ, ಜನಾಂಗದ್ವೇಷ, ಗಡಿಜಗಳ ಇತ್ಯಾದಿಗಳನ್ನು ಬದಿಗಿಟ್ಟು) ಭೂಮಿಯ ರಕ್ಷಣೆ ಒಂದಾಗಿ ನಮ್ಮ ಸಾಮರ್ಥ್ಯವನ್ನು ಪಣಕ್ಕಿಡೋಣ ಅನ್ನೋದೇ ಆ ಸಂದೇಶ.

ಅದು ಮುಂದಿನ ಯುಗದ ಆಶಾ ಕಿರಣ.

* * *

# ನಮ್ಮ ಊರ ಬಸ್ಸು

**– ಗೊರೂರು ರಾಮಸ್ವಾಮಿ ಅಯ್ಯಂಗಾರ್**

ನಮ್ಮ ಊರಿನ ಬಸ್ಸಿನ ವಿಚಾರ ಕೇಳಿದರೆ ನಿನಗೆ ನಕ್ಕು ಹೊಟ್ಟೆ ಹುಣ್ಣಾಗುವುದು, ಕುಲಮೂಲವನ್ನೂ ಋಷಿಮೂಲವನ್ನೂ ಕೇಳಕೂಡದಂತೆ, ಹಾಗೆಯೇ ನಮ್ಮ ಊರಿನ ಬಸ್ಸಿನ ಮೂಲವನ್ನೂ ನೀವು ಕೇಳಕೂಡದು. ಅದಕ್ಕೇ ಹೇಳುತ್ತೇನೆ; ಅಷ್ಟೆ.

ಆ ದಿವಸ ಮಧ್ಯಾಹ್ನ ಗಂಟೆ ಸುಮಾರು ಹನ್ನೆರಡು ಇದ್ದಿರಬಹುದು, ಸೂರ್ಯನನ್ನು ಮೋಡಗಳು ಮುತ್ತಿಗೆ ಹಾಕಿದ್ದುವು. ಮಿತಿಯಿಲ್ಲದೆ ನನ್ನ ಗದ್ದೆಯ ಮೇಲೆ ಹರಿಯುತ್ತಿದ್ದ ನಾಲೆಯ ನೀರಿನ ಪ್ರವಾಹವನ್ನು ಬೇರೆಕಡೆ ತಿರುಗಿಸಲು ಪ್ರಯತ್ನಿಸುತ್ತಾ, ಕೈಯಲ್ಲೊಂದು ಗುದ್ದಲಿಯನ್ನು ಹಿಡಿದುಕೊಂಡು ಗದ್ದೆಯ ಬದುವನ್ನು ಅಗೆಯುತ್ತಾ ನಿಂತಿದ್ದೆ. ಮಗ್ಗುಲು ಗದ್ದೆಯಲ್ಲಿ ನಮ್ಮ ಆಳು ಬೋರನೂ ಅದೇ ಕೆಲಸವನ್ನು ಮಾಡುತ್ತಾ ನಿಂತಿದ್ದನು. ಬೋರನಿಗೆ ವಯಸ್ಸು ಅರವತ್ತು, ನನಗೆ ಇಪ್ಪತ್ತು. ಬೋರನು ಪದೇ ಪದೇ "ನೀವೆಲ್ಲಾ ಪುಳ್ಚಾರಿನ ಹಾರುವರು, ತುಪ್ಪ ಮೊಸರು ಕಾಫಿ ಕುಡಿಯೋದಕ್ಕೆ ಸರಿ. ನನ್ನ ಹಾಗೆ ಒಂದು ದಿವಸ ಈ ಗದ್ದೆಯ ಹೆಸರಿನಲ್ಲಿ ನಿಂತು ಕೆಲಸ ಮಾಡಿದರೆ ಆಮೇಲೆ ಹದಿನೈದು ದಿವಸ ಬೇನೆಯಿಂದ ನರಳುತ್ತೀರಿ" ಎನ್ನುತ್ತಿದ್ದನು.

ನಾನು "ಆ ಕಾಲುವೆ ನೀನು ತೆಗೆ; ನಾನು ಈ ಕಾಲುವೆ ತೆಗೆಯುತ್ತೇನೆ ಯಾರು ಮುಂಚೆ ಅಚ್ಚುಕಟ್ಟಾಗಿ ಕೆಲಸಮಾತ್ತಾರೋ ನೋಡೋಣ" ಎಂದೆ. ಬೋರನು ಒಪ್ಪಿಕೊಂಡ. ಅವನು ಒಪ್ಪಿಕೊಳ್ಳದೆ ಇದ್ದಿದ್ದರೆ ಚೆನ್ನಾಗಿತ್ತು: ಹೆಮ್ಮೆ ಕೊಚ್ಚಿಕೊಂಡಮೇಲೆ ಕೆಲಸ ಮಾಡದಿದ್ದರೆ ವಿಧಿಯಿರಲಿಲ್ಲ. ಬೋರನು ಮುದಿ ಎತ್ತಿನಂತೆ ಒಂದೇ ಸಮನಾಗಿ ದುಡಿಯಲು ಪ್ರಾರಂಭಿಸಿದ ಅವನಿಗೆ ಬೇಸರಿಕೆಯಾಗಲಿ, ಕಷ್ಟವಾಗಲಿ ಆದಂತೆ ತೋರಲಿಲ್ಲ. ಪುಳ್ಚಾರಿನವನಾದ ನನಗೆ ಗುದ್ದಲಿಯಿಂದ ನಾಲ್ಕು ಪೆಟ್ಟು ನೆಲಕ್ಕೆ ಬಿಡುವ ವೇಳೆಗೆ ಮೈಯೆಲ್ಲಾ ಬೆವತುಕೊಂಡಿತು. ಸೊಂಟ ನೋಯುವುದಕ್ಕೆ ಪ್ರಾರಂಭವಾಯಿತು. ಇವನ ಹತ್ತಿರ ಅನ್ಯಾಯವಾಗಿ ಹಟ ತೊಟ್ಟು ಕೆಟ್ಟೆನಲ್ಲಾ ಎನ್ನಿಸಿತು. ಸುದಾರಿಸಿ ಕೊಳ್ಳಲು ಒಂದು ಗಳಿಗೆ ನಿಲ್ಲುವುದಕ್ಕೂ ನನಗೆ ಧೈರ್ಯವಿರಲಿಲ್ಲ. ನಿಂತರೆ ಕೆಲಸವು

ಹಿಂದಾಗುವುದು, ಬೋರ "ನಾನು ಹೇಳಲಿಲ್ಲವೆ? ತುಪ್ಪ ತಿಂದ ಮೈ ತುಪ್ಪದಂತೆ ಮದು" ಎಂದು ಹಾಸ್ಯ ಮಾಡುತ್ತಿದ್ದನೆಂಬ ಭಯ. ಈ ಉಭಯ ಸಂಕಟಕ್ಕೆ ಸಿಲುಕಿ ಹಾಗೂ ಹೀಗೂ ಅಗೆಯುತ್ತಾ ಇದ್ದೆ.

ಒಮ್ಮಿಂದೊಮ್ಮೆ ಬೋರನು ಗುದ್ದಲಿಯನ್ನು ಕೆಳಗಿಟ್ಟು, ಗಾಳಿಗೆ ಕಿವಿ ಗೊಟ್ಟು ಆಲಿಸತೊಡಗಿದನು. ಸದ್ಯ ಸಮಯ ದೊರೆತದ್ದೇ ಸಾಕೆಂದು ನಾನೂ ಗುದ್ದಲಿಯನ್ನು ಕೆಳಗಿಟ್ಟು –––

"ಏನು ಬೋರ, ಆಕಾಶವಾಣಿ ಕೇಳುತ್ತಿರುವುದೊ? ಅಥವ ದೇವಸ್ತ್ರೀಯರೇನಾದರೂ ನಿನ್ನ ಕಿವಿಯಲ್ಲಿ ಗುಟ್ಟನ್ನು ಹೇಳುತ್ತಿರುವರೋ" ಎಂದೆ.

ಬೋರನು ನನ್ನ ಮಾತಿಗೆ ಲಕ್ಷವನ್ನು ಕೊಡಲಿಲ್ಲ. ಜುಗುಪ್ಸೆಯಿಂದ "ತಡೀರಿ ಸ್ವಾಮಿ" ಎಂದುಬಿಟ್ಟು ಮೊದಲಿನಂತೆಯೇ ಆಲಿಸುವುದಕ್ಕೆ ಪ್ರಾರಂಭಿಸಿದ. ನೋಡೋಣವೆಂದು ನಾನೂ ಕಿವಿಗೊಟ್ಟು ಕೇಳಿದೆ, ದೂರದಲ್ಲಿ ಗುಡಿಗಿನಂತೆ ಶಬ್ದವಾಗುತ್ತಲಿದ್ದಿತು. ಪ್ರತಿ ಕ್ಷಣದಲ್ಲಿ ಹೆಚ್ಚು ಹೆಚ್ಚಾಗಿ ಕೇಳಿಸುತ್ತಿದ್ದಿತು. ಆಕಾಶವಿಮಾನವೇನಾದರೂ ನಮ್ಮ ಮೇಲೆ ಹೋಗುತ್ತಿರುವುದೇನೋ ಎಂದು ಅಂತರಿಕ್ಷದ ಕಡೆ ನೋಡಿದೆ. ಒಂದೆರಡು ಹಕ್ಕಿಗಳು ಮಾತ್ರ ಕಂಡವು. ಸ್ವಲ್ಪ ಹೊತ್ತಿನೊಳಗಾಗಿ ಶಬ್ದವು ಬಹಳ ಜೋರಾಗಿಯೂ ಸ್ಪಷ್ಟವಾಗಿಯೂ ಕೇಳಿಸಿತು. ಬೋರ "ಇದೆಂತಹ ಶಬ್ದ ಸ್ವಾಮಿ, ಭೂಮಿಯ ನಡುಗುವಂತೆ ತೋರುತ್ತದೆ" ಎಂದ. ನಾನು ನಗುತ್ತಾ "ಭೂಮಿಯೂ ನಡುಗುವುದಿಲ್ಲ. ಆಕಾಶವೂ ನಡುಗುವುದಿಲ್ಲ. ಈ ಕಡೆಗೆ ಯಾವುದೋ ಮೋಟಾರ್ ಬರುತ್ತಿರಬೇಕು" ಎಂದೆ. ಬೋರ "ಮೋಟಾರ್ ಅಲ್ಲ ಸ್ವಾಮಿ, ನಾನೇನು ಮೋಟಾರ್ ಕಂಡಿಲ್ಲವೆ. ಮೋಟಾರ್ ಎಂದಿಗೂ ಇಷ್ಟು ಶಬ್ದ ಮಾಡುವುದಿಲ್ಲ" ಎಂದ.

ಬೋರನ ಮಾತು ಮುಗಿಯುವುದರೊಳಗಾಗಿ ದೂರದಲ್ಲಿ ರಸ್ತೆಯಲ್ಲಿ ನಮ್ಮ ಕಣ್ಣಿಗೆ ಬಸ್ ಕಂಡಿತು. ಬೋರ "ಅದೇನು ಸ್ವಾಮಿ ? ಪಿಶಾಚಿಯಂತೆ ಬರುತ್ತಿದೆ. ಹಾವಿನಂತೆ ರಸ್ತೆಯ ಈಚೆಗೂ ಆಚೆಗೂ ನಲಿದಾಡುತ್ತಾ ಬರುತ್ತಿದೆಯಲ್ಲ?" ಎಂದ. ನಾನು "ಇದು ಬಸ್" ಎಂದೆ. ನನಗೆ ಬಹಳ ಆನಂದವಾಯಿತು. "ನಮ್ಮೂರಿಗೂ ಒಂದು ಬಸ್ ಬಂದಿತು. ನಾಗರಿಕತೆಯ ತುದಿಯನ್ನು ಏರಿಬಿಟ್ಟೆವು ನಾವು "ಎಂದು ನಾನು ಕುಣಿದಾಡತೊಡಗಿದೆ.

ನಮ್ಮೆದುರಿಗೆ ಬಂದ ಮೇಲೆ ಕೂಡ, ಅದು ಬಸ್ ಎಂದು ತಿಳಿಯುವುದೇ ನನಗೆ ಕಷ್ಟವಾಯಿತು. ಪ್ರಯಾಣಿಕರು ಕುಳಿತುಕೊಳ್ಳುವುದಕ್ಕಾಗಿ ಎಂದು ಅದನ್ನು ಮಾಡಿದ್ದರೂ ಅದಕ್ಕೆ ಕಮಾನಾಗಲಿ ಮುಸುಕಾಗಲಿ ಇರಲಿಲ್ಲ.

ಅದೊಂದು ದೊಡ್ಡ ಒಡ್ಡರ ಬಂಡಿಯಂತೆ ತೋರುತ್ತಿದ್ದಿತು. ಅದರ ಯಜಮಾನನು ಅದನ್ನು ಕೊಂಡುಕೊಂಡ ಕತೆಯೂ ಬಹಳ ವಿನೋದವಾಗಿದೆ. ಸಕಲೇಶಪುರಕ್ಕೆ ಹೋಗುವಾಗ ಆ ಬಸ್ಸು ದಾರಿಯಲ್ಲಿ ಎಲ್ಲೋ ಒಂದು ಹಳ್ಳಕ್ಕೆ ಬಿದ್ದು ಹೋಯಿತಂತೆ, ದೇವರ ದಯದಿಂದ ಯಾರಿಗೂ ಪೆಟ್ಟಾಗಲಿಲ್ಲ. ಮೇಲಕ್ಕೆ ಎತ್ತುವುದಕ್ಕಾಗದೆ ಅದು ಆರು ತಿಂಗಳು ಆ ಹಳ್ಳದಲ್ಲಿಯೇ ಬಿದ್ದಿದ್ದಿತಂತೆ. ಕೊನೆಗೆ ಬಸ್ಸಿನ ಒಡೆಯನು “ಇದನ್ನು ಯಾರುಬೇಕಾದರೂ ಎತ್ತಿಕೊಂಡು ಉಪಯೋಗಿಸಿಕೊಳ್ಳಿ, ನನ್ನದು ಅಭ್ಯಂತರವಿಲ್ಲ” ಎಂದನಂತೆ. ಕೂಡಲೇ ಈಗಿನ ಬಸ್ಸಿನ ಈ ಯಜಮಾನನು ಅದಕ್ಕೆ ಒಂದು ಹಗ್ಗವನ್ನು ಕಟ್ಟಿ, ಇಪ್ಪತ್ತು ಜೊತೆ ಎತ್ತುಗಳಿಂದ ಬಹಳ ಕಷ್ಟ ಪಟ್ಟು ಮೇಲಕ್ಕೆ ಎಳೆಸಿದನಂತೆ. ಅದರ “ಸೀಟು, ಕಮಾನು” ಮುಂತಾದುವುಗಳನ್ನೆಲ್ಲ ಗೆದ್ದಲು ತಿಂದುಹಾಕಿದ್ದಿತು. ಏನೋ ಸ್ವಲ್ಪ ರಿಪೇರಿ ಮಾಡಿ ಹಳ್ಳಿಯವರಿಗೆ ಇರಲಿ ಎಂದು ನಮ್ಮೂರಿಗೆ ಇಟ್ಟು ಬಿಟ್ಟ.

ಬಸ್ಸಿನ ಧ್ವನಿ ಸುಮಾರು ನಾಲ್ಕು ಮೈಲಿ ‘ಕಿರೋ’ ಎಂದು ಕೇಳುತ್ತದೆ. ನಮ್ಮ ಹಳ್ಳಿಯಲ್ಲಿ ಯಾರಾದರೂ ಗಟ್ಟಿಯಾಗಿ ಕಿರಚಿದರೆ “ಬಸ್ಸು ಕಿರಚಿದಂತೆ ಅವನು ಕಿರಚುತ್ತಾನೆ” ಎನ್ನುತ್ತಾರೆ. ಒಂದು ದಿವಸ ನಾನು ನಮ್ಮೂರ ಈ ಬಸ್ಸಿನಲ್ಲಿ ಹಾಸನಕ್ಕೆ ಹೋಗಬೇಕಾಯಿತು. ನಾನು ಕುಳಿತಿದ್ದ ಸ್ಥಳದಲ್ಲಿ ಬಸ್ಸಿನ ನೆಲದ ಮೇಲೆ ಹಾಸಿದ್ದ ಹಲಗೆಗೆ ತೂತು ಬಿದ್ದಿದ್ದಿತು. ಬಸ್ಸು ಹೊರಟ ಕೂಡಲೇ ಅದರಿಂದ ಹೊಗೆಯು ಹೊರಡಲು ಪ್ರಾರಂಭವಾಯಿತು. ಹೊಗೆಯು ಬಸ್ಸನ್ನೆಲ್ಲಾ ತುಂಬಿಕೊಂಡಿತು. ನಾನು ಧರಿಸಿಕೊಂಡು ಹೋಗಿದ್ದ ಬಿಳಿಯ ಬಟ್ಟೆಗಳು, ನನ್ನ ಮೈಯೆಲ್ಲಾ ರೈಲ್ವೆ ಇಂಜಿನ್ ಡ್ರೈವರನ ಮೈಯಂತೆ ಕಪ್ಪಾಗಿ ಹೋದವು. ಹಾಸನದಲ್ಲಿ ಈ ಕಪ್ಪನ್ನು ತೊಳೆಯುವುದಕ್ಕೆ ಒಂದು ಹಂಡೆ ನೀರನ್ನು ಎಲ್ಲಿ ಒದಗಿಸುವುದೆಂಬುದೇ ನನಗೆ ಯೋಚನೆಯಾಯಿತು. ಆಗ ನನ್ನ ಮುಖವನ್ನು ಯಾರಾದರೂ ನೋಡಿದ್ದರೆ ಗಾಬರಿಯಿಂದ ಹೆದರಿ ಓಡುತ್ತಿದ್ದರು. ಸ್ವತಃ ನನಗೇ ನನ್ನ ಗುರುತು ಹತ್ತಲಿಲ್ಲ. ಬಸ್ಸಿನಲ್ಲಿ ನಾನು ಕುಳಿತುದು ಅದೇ ಮೊದಲನೆಯ ಸಲವಾದುದರಿಂದ, ಈ ನನ್ನ ವೇಷವೂ ಅದರ ಆನಂದಕ್ಕೆ ಸೇರಿದುದೇನೋ ಎಂದುಕೊಂಡೆನು.

## ವಾಸ್ಕೋಡಿಗಾಮನು ಏಜೆಂಟ್ ಆದುದು

ನಮ್ಮ ಊರ ಬಸ್ಸಿಗೆ ಏಜೆಂಟುಗಳ ಕಾಟ ಹೇಳಿ ತೀರದು. "ದೇಹಕ್ಕಿಂತ ಬಾಲವೇ ಭಾರ" ಎಂಬಂತೆ ನಮ್ಮೂರಿನ ಬಸ್ ಯಜಮಾನನಿಗೆ ದೊರೆಯುವ ಪ್ರಯಾಣಿಕರಿಗಿಂತ ಟಕಿಟ್ ಮಾರುವ ಏಜೆಂಟುಗಳ ಸಂಖ್ಯೆಯೇ ಹೆಚ್ಚು. ಬಸ್ಸಿಗೆ ನಾಲ್ಕು ಏಜೆಂಟುಗಳು, ಒಂದು ಸಲ ಈ ಏಜೆಂಟುಗಳ ಸಂಖ್ಯೆಯು ಎಂಟಕ್ಕೆ ಏರಿತ್ತು. ಅನೇಕ ದಿನ ಪ್ರಯಾಣಿಕರು ದೊರಕುವುದೇ ಕಷ್ಟವಾದರೂ ಬಸ್ಸೇನೋ ಈ ಏಜೆಂಟುಗಳಿಂದ ತುಂಬಿಹೋಗುತ್ತದೆ. ಸಾಮಾನ್ಯವಾಗಿ ಯಾರು ಯಾರು ದುಡ್ಡು ಕೊಟ್ಟು ಪ್ರಯಾಣಮಾಡಬೇಕೋ, ಅಂತವರೆಲ್ಲಾ ಏಜೆಂಟುಗಳೇ ಆಗಿಬಿಟ್ಟರೆ ಪಾಪ, ಬಸ್ಸಿನ ಯಜಮಾನನ ಗತಿ ಏನು ? ಮೊದಲು ನಮ್ಮೂರ "ವಾಸ್ಕೋಡಿಗಾಮ ಇದಕ್ಕೆ ಏಜೆಂಟ್ ಆದ. ಓಹೊ ಮರತೆ, ವಾಸ್ಕೋಡಗಾಮನೆಂದರೆ ಯಾರೆಂಬುದನ್ನೇ ನಿಮಗೆ ತಿಳಿಸಲಿಲ್ಲ. ಪೋರ್ಚುಗೀಸರು ಇಲ್ಲಿ ಎಲ್ಲಿ ಬಂದರೆಂಬುದಾಗಿ ಯೋಚಿಸಬೇಡಿ. ಇವನಿಗೆ "ವಾಸ್ಕೋಡಿಗಾಮ" ನೆಂದು ಹೆಸರು ಬರಲು ಕಾರಣವನ್ನು ಹೇಳುತ್ತೇನೆ. ನಮ್ಮ ಊರು ಮಲೆನಾಡ ಹಳ್ಳಿ, ಅಲ್ಲಿ ಹಿಂದಿನಿಂದಲೂ ಅಂಗಡಿ ಯಾವುದೂ ಇರಲಿಲ್ಲ. ಗ್ರಾಮಸ್ಥರು ಯಾವ ಸಾಮಾನು ಬೇಕಾದರೂ, ಸುತ್ತುಮುತ್ತಲ ಸಂತೆಗಳಿಗೆ ಹೋಗಿ ತರುತ್ತಿದ್ದರು. ಆಗ ನಮ್ಮ ಊರಿನಲ್ಲಿ ಮೊದಲು ನಿಂಗನು ವ್ಯಾಪಾರವನ್ನು ಪ್ರಾರಂಭಿಸಿದನು. ವ್ಯಾಪಾರಕ್ಕಾಗಿ ಹಿಂದೂ ದೇಶಕ್ಕೆ ಮೊದಲು ಬಂದವನು ವಾಸ್ಕೋಡಿಗಾಮ ತಾನೇ. ಆದುದರಿಂದ ಆದಾವುದೋ ತರ್ಕದಿಂದ ಈ ಎರಡು ಹೆಸರುಗಳನ್ನೂ ಒಟ್ಟಾಗಿ ಸೇರಿಸಿ, ಹುಡುಗರು ನಿಂಗನನ್ನು "ವಾಸ್ಕೋಡಿಗಾಮ"ನೆಂದು ಕರೆಯಲು ಪ್ರಾರಂಭಿಸಿದರು. ಈಚೆಗೆ ಅವನಿಗೆ ಆ ಹೆಸರೇ ನಿಂತುಹೋಯಿತು. ಇರಲಿ, ಈ ವಾಸ್ಕೋಡಗಾಮನಿಗೆ ಸಾಮಾನು ತರುವುದಕ್ಕೆ ಪದೇ ಪದೇ ಗಾಡಿಯ ಆವಶ್ಯಕತೆಯಿದ್ದುದರಿಂದ, ಅವನು ಉಪಾಯವಾಗಿ ಮೊದಲು ಬಸ್ ಏಜೆಂಟ್ ಆದನು. ಇದರಿಂದ ಅವನಿಗೆ ಹಾಸನಕ್ಕೆ ಹೋಗುವ ಪ್ರಯಾಣದ ಖರ್ಚು ಪೂರ್ತಾ ಉಳಿದುಹೋಗುತ್ತಿದ್ದಿತು, ಎಷ್ಟು ಸ್ವಲ್ಪ ಸಾಮಾನು ಬೇಕಾದರೂ ಬಸ್ಸಿನಲ್ಲಿ ಹೋಗಿ ತರುತ್ತಿದ್ದನು. ಒಂದು ದಿವಸ ನಾನೂ ಅವನ ಜತೆಯಲ್ಲಿ ಹಾಸನಕ್ಕೆ ಹೋದೆ. ಅವನು ಅಲ್ಲಿ ಒಂದು ಒಳ್ಳೆಣ್ಣೆ ಡಬ್ಬ ಕೊಂಡು ಬಸ್ಸಿನಲ್ಲಿಟ್ಟನು. ಆ ಡಬ್ಬ ನಮ್ಮೂರಿನಂತಹ ಚಿಕ್ಕ ಹಳ್ಳಿಯಲ್ಲಿ ಖರ್ಚಾಗಬೇಕಾದರೆ ನಾಲ್ಕು ತಿಂಗಳು ಬೇಕು. ಹಾಗೆ ಖರ್ಚಾದನಂತರ ಉಳಿಯುವ ಲಾಭ ನಾಲ್ಕು ಆಣೆ ಮಾತ್ರ.

ವಾಸ್ಕೋಡಿಗಾಮನು ಬಸ್ಸಿನಲ್ಲಿ ಅದರ ಜೊತೆಯಲ್ಲಿಯೇ ಒಂದು ಚಿಕ್ಕ ಸಕ್ಕರೆಯ ಗಂಟನ್ನೂ ಇಟ್ಟ. ಅಂತು ಬಸ್ಸು ನಮ್ಮೂರಿನ ಕಡೆ ಹೊರಟಿತು.

ಅದರ ಕಿರೋ ಎಂಬ ಶಬ್ದದಿಂದ ನನ್ನ ಕಿವಿ ಮರವಾಗಿ ಹೋಯಿತು, ಬಸ್ಸಿನಲ್ಲಿ ಆ ದಿವಸ ದುರದೃಷ್ಟವಶಾತ್ ನಾನು, ವಾಸ್ಕೋಡಿಗಾಮ ಇಬ್ಬರೇ ಇದ್ದೆವು. ನೀವು ಬಸ್ಸಿನಲ್ಲಿ ಕುಳಿತ್ತಿದ್ದರೆ ನಿಮಗೆ ಗೊತ್ತಾಗುತ್ತದೆ; ಬಸ್ಸು ತುಂಬಿ ಅದರಲ್ಲಿ ಹೆಚ್ಚು ಜನರಿದ್ದರೆ ಅದು ಕುಲುಕಾಡುವುದಿಲ್ಲ. ದೋಣಿಯಂತೆ ಇಲ್ಲದಿದ್ದರೆ ಒಳಗೆ ಕುಳಿತಿರುವವರ ಕರುಳೆಲ್ಲಾ ಅಲ್ಲಾಡಿ ಹೋಗುತ್ತದೆ. ಮಲೆನಾಡಿನ ರಸ್ತೆಯಲ್ಲಂತೂ ದೇವರೇ ಗತಿ. ನಾವು ಬೀಳದಂತೆ ಹಿಡಿದುಕೊಂಡು ಕುಳಿತುಕೊಳ್ಳುವುದೇ ನಮಗೆ ಸಾಕಾಗಿ ಹೋಯಿತು. ವಾಸ್ಕೋಡಿಗಾಮ ಮೂಗು ಮುಂದಲ ಸೀಟಿಗೆ  ತಗಲಿ ಸ್ವಲ್ಪ ಪೆಟ್ಟೇ ಆಯಿತು. ಆದರೆ ಅವನು ಟಿಕೆಟ್‌ಗೆ ದುಡ್ಡು ಕೊಟ್ಟಿರಲಿಲ್ಲ. ಕಷ್ಟವಿಲ್ಲದೆ ಸುಖ ಬರುತ್ತದೆಯೆ? ನೋವಿಲ್ಲದೆ ದುಡ್ಡು ಉಳಿಯುತ್ತದೆಯೆ?

ಒಂದು ಕಡೆ ರಸ್ತೆ ಸ್ವಲ್ಪ ಹಳ್ಳವಾಗಿದ್ದಿತು. ಬಸ್ಸು ಬೆದರಿದ ಕುದುರೆಯಂತೆ ನೆಗೆದು ಕೆಳಕ್ಕೆ ಕುಕ್ಕರಿಸಿತು. ಆದರೆ ನಿಲ್ಲಲಿಲ್ಲ ಮುಂದಕ್ಕೆ ಹೊರಟಿತು. ಆ ಕುಕ್ಕರಿಸಿದ ವೇಗಕ್ಕೆ ವಾಸ್ಕೋಡಿಗಾಮನು ಕುಳಿತಿದ್ದ ಸೀಟಿನ ಮತ್ತೆಯು ಕೆಳಕ್ಕೆ ಬಿದ್ದುಹೋಯಿತು. ಎದುರು ಬದರಾಗಿ ಕುಳಿತಿದ್ದ ನಾವಿಬ್ಬರೂ ಒಬ್ಬರ ಮೇಲೊಬ್ಬರು ಬಿದ್ದೆವು. ಊರನ್ನು ತಲುಪಿದ ಕೂಡಲೆ ವಾಸ್ಕೋಡಿಗಾಮನು ತನ್ನ ಮನೆಯ ಮುಂದೆ ಬಸ್ಸನ್ನು ನಿಲ್ಲಿಸಿ, ಎಣ್ಣೆಯ ಹಬ್ಬದ ಕೆಳಗೆ ಒಂದು ಕೈ ಮೇಲಕ್ಕೆ ಒಂದು ಕೈ ಹಾಕಿ ಮೆಲ್ಲನೆ ಎತ್ತಿದನು. ಆದರೆ ಡಬ್ಬ ಬಹಳ ಹಗುರವಾಗಿ ಕೈಗೆ ಬಂದಿತು. ಅವನು ತುಂಬಿದ ಡಬ್ಬವನ್ನು ಅಷ್ಟು ಸುಲಭವಾಗಿ ಎತ್ತಿದುದನ್ನು ಕಂಡು ನನಗೂ ಆಶ್ಚರ್ಯವಾಯಿತು. ವಾಸ್ಕೋಡಿಗಾಮನು ಹುಚ್ಚನಂತೆ ನನ್ನ ಕಡೆಯೇ ನೋಡುತ್ತ ನಿಂತುಬಿಟ್ಟನು. ಆಮೇಲೆ ಡಬ್ಬವನ್ನು ಕೆಳಗಿಟ್ಟು ಸಕ್ಕರೆಯ ಗಂಟನ್ನು ಎತ್ತಿಕೊಂಡನು. ಅದರಿಂದ ಎಣ್ಣೆಯು ಧಾರಾಕಾರವಾಗಿ ತೊಟ್ಟಿಕ್ಕುತ್ತಿದ್ದಿತು. ಎಣ್ಣೆಯ ಡಬ್ಬವು ಕುಲಕಾಟದಲ್ಲಿ ಒಡೆದು ಹೊಗಿ, ಆ ಎಣ್ಣೆಯು ಸಕ್ಕರೆಯೊಂದಿಗೆ ಬೆರೆತು ಕರಗಿ ಬಸ್ಸಿನ ಕೆಳಭಾಗವೆಲ್ಲಾ ಅಂಟಾಗಿದ್ದಿತು. ವಾಸ್ಕೋಡಿಗಾಮನಿಗೆ ಬಹಳ ಸಂಕಟವಾಗಿರಬೇಕು. ನಾಲ್ಕಾಣೆಯ ಲಾಭಕ್ಕೆ ಆಸೆಪಟ್ಟು, ಅವನು ಹತ್ತು ರೂಪಾಯಿನ ಸಾಮಾನು ಕಳೆದುಕೊಂಡನು. ನನ್ನ ಕಡೆ ನೋಡಿ “ಮುಳುಗಿದೆ ಸ್ವಾಮಿ, ಮುಳುಗಿದೆ” ಎಂದನು. ವಾಸ್ಕೋಡಿಗಾಮನು ಮತ್ತೆ ಏಜೆಂಟ್ ಆಗಲಿಲ್ಲ.

ಈಗ ಗಾಡಿ ಮಾಡಿಕೊಂಡೇ ಸಾಮಾನುಗಳನ್ನು ತರುತ್ತಿದ್ದಾನೆ. ಆಮೇಲೆ ಹದಿನೈದು ಇಪ್ಪತ್ತು ದಿವಸಗಳವರೆಗೆ ಎಣ್ಣೆ ಮತ್ತು ಸಕ್ಕರೆಯು ಸೇಚನವಾಗಿದ್ದ ಬಸ್ಸಿಗೆ ನೊಣಗಳು ಮುತ್ತಿ " ಝ್ಯು ಝ್ಯು" ಎಂದು ಸಂಗೀತವನ್ನು ಹಾಡುತ್ತಿದ್ದವು. ಅವುಗಳನ್ನು ಓಡಿಸುವುದೇ ಪ್ರಯಾಣಿಕರಿಗೆ ಕೆಲಸವಾಗಿತ್ತು.

## ಭಟ್ಟನ ಸಂಪಾದನೆಯ ಮಾರ್ಗ

ವಾಸ್ಕೋಡಿಗಾಮನ ಅನಂತರ ನನ್ನ ಸ್ನೇಹಿತ ನಾರಾಯಣ ಭಟ್ಟನು ಬಸ್ಸಿನ ಏಜೆಂಟಾದನು. ಅವನು ಏಜೆಂಟಾಗುವುದಕ್ಕೆ ಅವನು ಒಂದು ವಿಧದಲ್ಲಿ ತೋರಿಸಿದ ಸ್ವಾರ್ಥತ್ಯಾಗವೇ ಮುಖ್ಯ ಕಾರಣ. ಅದು ಈ ರೀತಿ. ಒಂದು ದಿವಸ ಬಸ್ಸಿನಲ್ಲಿ ಹೋಗುತ್ತಿರುವಾಗ ದಾರಿಯಲ್ಲಿ ಅದಕ್ಕೆ ನೀರು ಬೇಕಾಯಿತು. ರಸ್ತೆಯ ಮಗ್ಗುಲಲ್ಲಿ ಒಂದು ಹಳ್ಳವಿದ್ದಿತು. ಅದರ ನೀರು ಕೆಂಪಾಗಿ ಕೊಚ್ಚೆಯಾಗಿತ್ತು, "ಕ್ಲೀನರ್" ಮಹಾಶಯನು ಆ ನೀರನ್ನು ತಂದನು. ಆದರೆ ಡ್ರೈವರ್ ಬೇಡ ಆ ನೀರು ಹಾಕಬೇಡ, ಸೋದಿಸಬೇಕು. ಅದರಲ್ಲಿರುವ ಕೆಸರೆಲ್ಲಾ ಒಳಕ್ಕೆ ಹೋದರೆ ಆಮೇಲೆ ದೇವರೇ ಗತಿ ಎಂದನು. ಆದರೆ ಸೋದಿಸುವುದಕ್ಕೆ ಬಟ್ಟೆ ಎಲ್ಲಿದೆ ? ಬಸ್ಸಿನಲ್ಲಿ ಕುಳಿತಿದ್ದ ಉಳಿದವರೆಲ್ಲಾ ಉದಾಸೀನದಿಂದಿದ್ದರು. ನನ್ನ ಸ್ನೇಹಿತ ಭಟ್ಟ ಮಾತ್ರ ಗಾಡಿಯಿಂದ ಇಳಿದು, ಬೆಳ್ಳಗೆ ಶುಭ್ರವಾಗಿ ಇಸ್ತ್ರಿ ಮಾಡಿ ಗರಿ ಗರಿಯಾಗಿದ್ದ ತನ್ನ ರುಮಾಲಿನ ಒಂದು ಸೆರಗನ್ನು ಬಸ್ಸಿನ ನೀರು ಕೊಳವೆಯ ಬಾಯಿಗೆ ಇಟ್ಟು "ಬಿಡಯ್ಯ ನೀರನ್ನು, ಸೋದಿಸಿ ಬಿಡೋಣ" ಎಂದನು. ಸೋದಿಸಿದ ನಂತರ ಆ ರುಮಾಲಿನ ತುದಿಯನ್ನು ಅದೇ ನೀರಿನಲ್ಲಿ ಹಿಂಡಿ ತೊಳೆದನು. ಆದರೆ ತೆಳುವಾದ ರುಮಾಲಾದುದರಿಂದ ಅದನ್ನು ಬಿಗಿಯಾಗಿ ಹಿಂಡಲು ಇಷ್ಟವಿಲ್ಲದೆ, ಏನೋ ಸುಮಾರಾಗಿ ಹಿಂಡಿ ಹೆಗಲಿನ ಮೇಲೆ ಹಾಕಿ ಕೊಂಡನು. ಬಸ್ಸು ಹೊರಟಿತು, ಹಾಸನಕ್ಕೆ ತಲುಪಿದೆವು. ಆದರೆ ಬಸ್ಸಿನಿಂದ ಇಳಿದ ಕೂಡಲೆ ನಮ್ಮ ಭಟ್ಟನ ರೂಪು ವಿಚಿತ್ರವಾಗಿತ್ತು. ಚೆನ್ನಾಗಿ ಹಿಂಡದ ರುಮಾಲಿನಿಂದ ಕೆಂಪು ನೀರು ನಿಧಾನವಾಗಿ ಅವನ ಬಿಳಿಯ ಕೋಟಿನ ಮೇಲೂ ಪಂಚೆಯ ಮೇಲೂ ಸೋರಿದ್ದಿತು. ದೇವಸ್ಥಾನಗಳಿಗೂ ಮನೆಯ ಜಗುಲಿಗಳಿಗೂ ಸುಣ್ಣವನ್ನು ಹಚ್ಚಿ ಅದರ ಮೇಲೆ ಕೆಮ್ಮಣ್ಣಿನ ಪಟ್ಟಿಗಳನ್ನು ಬಳಿಯುವುದನ್ನು ನೀವು ನೋಡಿರಬಹುದು. ಎತ್ತುಗಳಿಗೆ ಕೆಂಪು ಬಿಳುಪಿನ ಗೌಸನ್ನು ಹಾಕುವುದನ್ನು ನೀವು ಕಂಡಿರಬಹುದು. ಭಟ್ಟನನ್ನು ನೋಡಿ ನನಗೆ ಅವುಗಳ ಜ್ಞಾಪಕ ಬಂದಿತು.

* * *

# ನಿಶಾವಾಗ್ಮಿಗಳ ನಿತ್ಯಸತ್ಯಗಳು

– ವಸುದೇಂದ್ರ

ಅಮೆರಿಕಾ ದೇಶ ಆರ್ಥಿಕ ಮುಗ್ಗಟ್ಟಿನಿಂದ ಒದ್ದಾಡಲು ಶುರು ಮಾಡಿದ ತಕ್ಷಣ ಇಡೀ ಪ್ರಪಂಚದ ಎಲ್ಲಾ ದೇಶಗಳು ಆರ್ಥಿಕ ಮುಗ್ಗಟ್ಟಿನಿಂದ ಒದ್ದಾಡಿದವು. ನೆಲದ ಮೇಲೆ ಬಿದ್ದು ಒದ್ದಾಡುತ್ತಿರುವ ಆನೆಯ ಬುಡದಲ್ಲಿ ಸಿಕ್ಕಿಬಿದ್ದ ಸಣ್ಣಪುಟ್ಟ ಆರೋಗ್ಯ ಜೀವಿಗಳಂತೆ! ಅಂತಹ ಪರಿಸ್ಥಿತಿಯಲ್ಲೂ ಅಮೆರಿಕಾ ಛಲದಿಂದ ಎರಡು ಭರ್ಜರಿ ಯುದ್ಧಗಳನ್ನು ಮಾಡಿ ಗೆದ್ದಿದೆ. ಯುದ್ಧ ಭೂಮಿಯಲ್ಲಿ ಪ್ರಯೋಗಿಸಿದ ಶಸ್ತ್ರಾಸ್ತ್ರಗಳಿಗಿಂತಲೂ ಶಕ್ತಿಯುತ ಮಾರಕ ಅಸ್ತ್ರಗಳು ಪ್ರಪಂಚದ ಎಲ್ಲೆಡೆಯೂ ಪ್ರಹಾರವಾದಂತೆ ದೇಶಗಳು ಮತ್ತಷ್ಟು ಆರ್ಥಿಕ ಮುಗ್ಗಟ್ಟಿನಿಂದ ವಿಲವಿಲನೆ ಒದ್ದಾಡಿವೆ. ಈಗ ಅಮೆರಿಕಾ ಸಮಾಧಾನದಿಂದ ಉಸಿರಾಡಲು ಪ್ರಾರಂಭಿಸಿದೆ. ಬದುಕಿದೆಯಾ ಬಡ ಜೀವವೇ ಎಂದು ಬಾಕಿ ಎಲ್ಲಾ ದೇಶಗಳು ಸಣ್ಣಗೆ ಉಸಿರಾಡಲು ಮೊದಲಿಟ್ಟವೆ, ಕಳೆದ ಹದಿನೈದು ವರ್ಷಗಳಲ್ಲಿ ಹುಣ್ಣಿಮೆಯ ಕಡೆ ಧಾವಿಸಿದ ಶುಕ್ಲಪಕ್ಷದ ಚಂದ್ರನಂತೆ ಒಂದೇ ಸಮನೆ ಅಭಿವೃದ್ಧಿಯನ್ನು ಕಂಡಿದ್ದ ಭಾರತದ ಸಾಫ್ಟ್ವೇರ್ ವ್ಯಾಪಾರ ಈಗ ಕೃಷ್ಣಪಕ್ಷದ ಕತ್ತಲೆಯನ್ನು ಅನುಭವಿಸುವಂತಾಗಿದೆ. ಆರ್ಥಿಕ ಮುಗ್ಗಟ್ಟಿನಿಂದ ತತ್ತರಿಸಿ ಕಣ್ಣುಮುಚ್ಚಿದ ಕಂಪನಿಗಳದೆಷ್ಟೋ! ಕೆಲಸ ಕಳೆದುಕೊಂಡು ಮನೆಯಲ್ಲಿ ಕೂಡಬೇಕಾಗಿ ಬಂದ ಚಾಣಾಕ್ಷ ಇಂಜಿನಿಯರುಗಳೆಷ್ಟೊ ! ತಿಂಗಳಿಗೆ ಲಕ್ಷ ರೂಪಾಯಿ ಸಂಬಳವನ್ನು ಪಡೆಯುತ್ತಿದ್ದ ಸಾಫ್ಟ್‌ವೇರ್ ಉದ್ಯೋಗಿ ಹತ್ತು ಸಾವಿರಕ್ಕೂ ಕೆಲಸ ಮಾಡಲು ಶುರು ಮಾಡಿದ್ದು ನುಂಗಲಾರದ ಸತ್ಯ. ಸಾಫ್ಟ್‌ವೇರ್‌ನಲ್ಲಿ ಬರುತ್ತಿದ್ದ ಸಂಬಳದ ಮೋಡಿಗೆ ಸಿಕ್ಕು ಉನ್ನತ ವಿದ್ಯಾಭ್ಯಾಸವೆಂದರೆ ಕಂಪ್ಯೂಟರ್ ಸೈನ್ಸ್ ಮಾತ್ರ ಎಂಬಂತೆ ನಮ್ಮ ಯುವಜನಾಂಗ ದುಬುದುಬು ಕಂಪ್ಯೂಟರ್ ಪದವಿಗಳನ್ನು ಮುಗಿಸಿ ಹೊರಬಂದು ಕಾಣದವರಂತೆ ಕಂಗಾಲಾಗಿ ಕುಳಿತಿದ್ದಾರೆ. ಮನೆಗೊಬ್ಬರಂತೆ ಅಮೆರಿಕಾಗೆ ಹೋದ ನಮ್ಮವರು ಈಗ ಮನೆಗೊಬ್ಬರಂತೆ ಹಿಂತಿರುಗಿ ಬರುತ್ತಿದ್ದಾರೆ.

ಈ ಎಲ್ಲಾ ಏರಿಳಿತಗಳಿಂದ ಆದ ಲಾಭವೆಂದರೆ, ಬರೀ ಒಂದೇ ಬಗೆಯ ವ್ಯಾಪಾರವನ್ನು ನಂಬಿಕೊಂಡು ಕೂತರೆ ಅಪಾಯ ಎನ್ನುವದನ್ನು ಭಾರತ ಅರ್ಥ ಮಾಡಿಕೊಂಡಿದೆ. ಸಾಫ್ಟ್‌ವೇರ್ ವ್ಯಾಪಾರದ ವೈಭವದ ದಿನಗಳಲ್ಲಿ

ಪ್ರಪಂಚ ಸುತ್ತಿರುವ ಭಾರತೀಯ ಜಗತ್ತಿನ ಇತರ ಅವಶ್ಯಕತೆಗಳನ್ನು ಅರ್ಥ ಮಾಡಿಕೊಂಡಿದ್ದಾನೆ. ಬೇರೆ ಬಗೆಯ ವ್ಯಾಪಾರದ ಸಾಧ್ಯತೆಗಳನ್ನು ಕಂಡುಕೊಂಡು ಅದಕ್ಕೆ ಭಾರತ ಯಾವ ರೀತಿಯಲ್ಲಿ ಸ್ಪಂದಿಸಬಹುದೆಂದು ಕಂಡುಕೊಂಡಿದ್ದಾನೆ. ಅಂತಹ ಅನ್ವೇಷಣೆಯಿಂದಾಗಿ ಹೊಸದಾಗಿ ಶುರುವಾದ ವ್ಯಾಪಾರ 'ಕಾಲ್ ಸೆಂಟರ್' ಅಥವಾ 'ಬಿ.ಪಿ.ಓ.' (ಬಿಜಿನೆಸ್ ಪ್ರೋಸೆಸ್ ಔಟ್‌ಸೋರ್ಸಿಂಗ್– ವ್ಯಾಪಾರದ ಕಾರ್ಯಾಚರಣೆಗಳ ಗುತ್ತಿಗೆ)

'ಜನಸಂಖ್ಯೆಯೇ ನಮ್ಮೆಲ್ಲಾ ಸಮಸ್ಯೆಗಳಿಗೆ ಕಾರಣ' ಎನ್ನುವುದು ಹುರುಳಿಲ್ಲದ ಮಾತೆನ್ನುವದನ್ನು ಭಾರತ ಈಗ ಒಪ್ಪಿಕೊಳ್ಳುತ್ತಿದೆ. ಭಾತದ ಅಗಣಿತ ಜನಸಂಖ್ಯೆಯೇ ಅದರ ಶಕ್ತಿಯೆಂಬುದು ಎಲ್ಲರಿಗೂ ಮನದಟ್ಟಾಗುತ್ತಿದೆ. ಮುಂದುವರೆದ ದೇಶಗಳಾದ ಅಮೆರಿಕಾ, ಇಂಗ್ಲೆಂಡ್‌ಗಳ ತೀರ್ಥದಷ್ಟು ಜನಸಂಖ್ಯೆ ನಮ್ಮ ಜನಸಾಗರದ ಮುಂದೆ ಯಾವ ಲೆಕ್ಕ? ಭಾರತೀಯರೆಲ್ಲಾ ಸೇರಿ ಇಂಗ್ಲೆಂಡಿನ ಮೇಲೆ ಉಗಿದರೆ ಅದು ಸಮುದ್ರದಲ್ಲಿ ಕೊಚ್ಚಿಕೊಂಡು ಹೋಗುತ್ತದೆ ಎಂದು ಕತೆಗಾರ ಆರ್.ಕೆ. ನಾರಾಯಣ್ ಹೇಳಿದ್ದು ಸುಳ್ಳಲ್ಲ.

ಜನಶಕ್ತಿಯ ಕೊರತೆಯಿಂದಾಗಿ ಈ ಎಲ್ಲಾ ಮುಂದುವರೆದ ದೇಶಗಳಲ್ಲಿ ಯಾವುದೇ ಕೆಲಸಕ್ಕೆ ಮನುಷ್ಯನ ಸ್ಪರ್ಶವಿದ್ದರೂ ಸಾಕು, ಅವೆಲ್ಲಾ ಒಂದಕ್ಕೆ ಹತ್ತು ಪಟ್ಟು ದುಬಾರಿಯಾಗಿದೆ. ಕೆಲವೊಮ್ಮೆ ಹತ್ತು ಪಟ್ಟಿರಲಿ, ನೂರು ಪಟ್ಟು ಹೆಚ್ಚು ಹಣ ಕೊಡುತ್ತೇನೆಂದರೂ ಅಲ್ಲಿ ಅವರಿಗೆ ಸಿಕ್ಕುವುದಿಲ್ಲ. ದೊಡ್ಡ ದೊಡ್ಡ ಹುದ್ದೆಯಲ್ಲಿರುವ ಜನರೂ ತಮ್ಮ ಅಡಿಗೆಯನ್ನು ತಾವೇ ಬೇಯಿಸಿಕೊಳ್ಳುವುದು ತಪ್ಪುವುದಿಲ್ಲ. ಆದರೆ ಶ್ರೀಮಂತ ದೇಶವಾದ್ದರಿಂದ ಇದ್ದ ಬದ್ದ ಜನರೆಲ್ಲಾ ಪಲ್ಲಕ್ಕಿಯಲ್ಲಿ ಕೂಡುತ್ತೇನೆನ್ನುತ್ತಾರೆ ! ಎಲ್ಲರೂ ಪಲ್ಲಕ್ಕಿಯಲ್ಲಿ ಕೂತರೆ ಅದನ್ನು ಹೊರುವವರಾರು?

ಭಾರತ ಈ ಸಮಸ್ಯೆಯನ್ನು ವ್ಯಾಪಾರವಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿದೆ. ಮುಂದುವರೆದ ದೇಶಗಳಿಗೆ ಬೇಕಾದ ಸೇವಾಸೌಲಭ್ಯವನ್ನು ಅತ್ಯಂತ ಕಡಿಮೆ ಬೆಲೆಗೆ ಭಾರತದ ಜನಶಕ್ತಿಯನ್ನು ಉಪಯೋಗಿಸಿಕೊಂಡು ಒದಗಿಸುವುದು ಈ ವ್ಯಾಪಾರದ ಉದ್ದೇಶ. ಹಾಗಂತ ನಾವು ಗುಲಾಮರಾಗಲು ಹೊರಟಿದ್ದೇವೆ ಎಂದು ಅವಸರದ ನಿರ್ಧಾರ ಮಾಡುವುದು ಬೇಕಿಲ್ಲ. ಇಂದಿನ ವ್ಯಾಪಾರೀ ಯುಗದಲ್ಲಿ ಸೇವೆಯ ಪರಿಕಲ್ಪನೆಯೇ ಬೇರೆ.

ಗ್ರಾಹಕನಿಗೆ ಬೇಕಾದ ಸೇವೆಯನ್ನು ಒದಗಿಸಿ ಅದಕ್ಕೆ ಪ್ರತಿಯಾಗಿ ಹಣವನ್ನು ಪಡೆಯುವುದು ಎಲ್ಲಾ ದೇಶಗಳು ಗೌರವದಿಂದ ಕಾಣುವಂತಹ ವ್ಯವಹಾರ. ಭಾರತದ ಹೇರಳ ಮಾರುಕಟ್ಟೆಗೆ ಆಸೆಪಟ್ಟು ಸಮುದ್ರಯಾನ ಮಾಡಿ ಯೂರೋಪಿಯನ್ನರು ಇಲ್ಲಿಗೆ ಬಂದಿದ್ದು ಈ ಮನೋಭಾವದಿಂದಲೇ.

ಮುಂದಿನ ವಿಚಾರಗಳಿಗಿಂತ ಮುಂಚೆ ಒಮ್ಮೆ ಕಾಲ್ ಸೆಂಟರ್ಗಳೆಂದರೆ ಏನೆಂಬುದನ್ನು ಚುಟುಕಾಗಿ ಹೇಳುತ್ತೇನೆ.

ಮುಂದುವರೆದ ದೇಶಗಳಲ್ಲಿ ಪ್ರತಿಯೊಂದು ವ್ಯವಹಾರವೂ ದೂರವಾಣಿಯಲ್ಲಿಯೆ ನಡೆಯುತ್ತದೆ. ನಿಮ್ಮ ಸಿನಿಮಾ ಟಿಕೆಟ್ ಕಾಯ್ದಿರಿಸುವುದು, ಟಿ.ವಿ. ರಿಪೇರಿಗಾಗಿ ತಂತ್ರಜ್ಞನನನ್ನು ಕರೆಸಿಕೊಳ್ಳುವುದು ಒಂಟಿತನದ ಬೇಸರ ನೀಗುವುದಕ್ಕಾಗಿ ಅಪರಿಚಿತ ವ್ಯಕ್ತಿಯೊಂದಿಗೆ ಹರಟೆ ಹೊಡೆಯುವುದು, ತಿಂಗಳ ದಿನಸಿಯ ಪಟ್ಟಿಯನ್ನು ಸೂಪರ್ ಮಾರ್ಕೆಟ್ಗೆ ಹೇಳುವುದು, ನೌಕರಿಗಾಗಿ ಸಂದರ್ಶನ ಮಾಡುವುದು, ಗಂಡಿಗೆ ಹೆಣ್ಣನ್ನು ಜೋಡಿಸುವುದು.... ನೀವು ಯಾವುದೇ ವ್ಯವಹಾರವನ್ನು ಹೇಳಿ, ಅದನ್ನು ಸಾಧ್ಯವಾದಷ್ಟು ಫೋನಿನಲ್ಲಿಯೇ ಮುಗಿಸಿಬಿಡಲು ಪ್ರಯತ್ನಿಸುತ್ತಾರೆ. ಇಂತಹ ದೂರವಾಣಿ ಕರೆಗಳಿಗೆ ಉತ್ತರಿಸುವ ಜವಾಬ್ದಾರಿಯನ್ನು ಹೊತ್ತ ಸಂಸ್ಥೆಗಳಿಗೆ ಕಾಲ್ ಸೆಂಟರ್‌ಗಳೆಂದು ಕರೆಯುತ್ತಾರೆ.

ಈ ಕರೆಗಳನ್ನು ಉತ್ತರಿಸುವವರು ಭೂಮಿಯ ಮೇಲೆ ಎಲ್ಲೇ ಇರಬಹುದಲ್ಲವೆ? ಆದ್ದರಿಂದಲೇ ಭಾರತೀಯರು ಈ ಕಾಲ್ ಸೆಂಟರ್‌ಗಳನ್ನು ನಮ್ಮ ನೆಲದಲ್ಲಿಯೇ ಅತ್ಯಂತ ಕಡಿಮೆ ಬೆಲೆಯಲ್ಲಿ ನಿರ್ವಹಿಸಲು ಮುಂದೆ ಬಂದಿದ್ದಾರೆ. ಆಧುನಿಕ ತಂತ್ರಜ್ಞಾನವು ಅಲ್ಲಿಯ ಸ್ಥಳೀಯ ಕರೆಗಳನ್ನು ಭಾರತಕ್ಕೆ ಹೆಚ್ಚಿನ ಖರ್ಚಿಲ್ಲದ ಇಂಟರ್ನೆಟ್ ಮೂಲಕ ಅಥವಾ ಸ್ವಂತ ನೆಟ್ವರ್ಕ್ ಮೂಲಕ ರವಾನಿಸುವ ಸೌಕರ್ಯವನ್ನು ಒದಗಿಸಿಕೊಟ್ಟಿದೆ. ಅದೇ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಇಲ್ಲಿಂದ ದೂರದ ದೇಶಗಳಿಗೆ ದೂರವಾಣಿ ಕಛೇರಿಯ ಹಂಗಿಲ್ಲದೆ ಕರೆ ಮಾಡಬಹುದಾಗಿದೆ.

ಬ್ರಿಟೀಷರು ನಮ್ಮನ್ನು ನೂರಾರು ವರ್ಷ ಆ ಕಹಿ ನೆನಪನ್ನು ಉಳಿಸಿ ಹೋಗಿದ್ದರೂ, ಅವರು ಯಾವ ಘನ ಉದ್ದೇಶವಿಲ್ಲದೆ ಬಿಟ್ಟುಹೋದ ಇಂಗ್ಲೀಷ್ ಭಾಷೆಯ ಪಾಂಡಿತ್ಯ ಇಂದು ಸಹಾಯಕ್ಕೆ ಬರುತ್ತಿದೆ. ಪ್ರಪಂಚದ ಎಲ್ಲಾ

ಮುಂದುವರೆದ ದೇಶಗಳ ಭಾಷೆಯೂ ಹೆಚ್ಚುಕಡಿಮೆ ಇಂಗ್ಲಿಷ್ ಆಗಿರುವುದರಿಂದ ಇಂತಹ ಕಾಲ್ ಸೆಂಟರ್ಗಳನ್ನು ನಿರ್ವಹಿಸಲು ನಮಗೆ ಅಷ್ಟೇನೂ ಕಷ್ಟವಲ್ಲ. ಆದರೆ ಕೇವಲ ವ್ಯಾಕರಣಬದ್ಧವಾದ ಇಂಗ್ಲೀಷ್ ಭಾಷೆ ಮಾತ್ರ ಗೊತ್ತಿದ್ದರೆ ಸಾಕಾಗುವುದಿಲ್ಲ. ನಾವು ಕನ್ನಡದಂತೆಯೋ, ತೆಲುಗು ತಮಿಳಿನಂತೆಯೋ ಇಂಗ್ಲಿಷನ್ನು ಮಾತನಾಡಿದರೆ ಅಲ್ಲಿಯವರಿಗೆ ಹೇಗೆ ತಾನೆ ಅರ್ಥವಾದೀತು ? ಸಿಂಬ್ಲಿ ಗ್ರಾಸ್‌ದಿ ರೋಡ್ಡು' ಎಂದರೆ ಅವರಿಗೆ ತಿಳಿಯುವದಿಲ್ಲ.

ಆದ್ದರಿಂದ ಕಾಲ್ ಸೆಂಟರ್ನಲ್ಲಿ ಕೆಲಸ ಮಾಡುವವರು ದೂರದೇಶದ ಭಾಷಾ ಉಚ್ಚಾರಣೆಗಳನ್ನು ಕಲಿತುಕೊಳ್ಳಬೇಕಾಗುತ್ತದೆ. ಅಮೆರಿಕಾದವರಿಗೆ ಥ್ಯಾಂಕ್ಸ್ ಹೇಳಿದರೆ, ಬ್ರಿಟಿಷರಿಗೆ 'ಚಿಯರ್ಸ್' ಎಂದು ಹೇಳುವುದು ತಿಳಿದಿರಬೇಕಾಗುತ್ತದೆ. ಇಂತಹ ತಿಳುವಳಿಕೆಗಳನ್ನು ನೀಡಲು ಸಾಕಷ್ಟು ಖಾಸಗಿ ತರಬೇತಿ ಸಂಸ್ಥೆ ತಲೆ ಎತ್ತಿವೆ, ಒಂದೆರಡು ತಿಂಗಳ ಕೋರ್ಸಿನಲ್ಲಿ ನೀವು ಹತ್ತಾರು ವರ್ಷವಿದೇಶದಲ್ಲಿ ಬದುಕಿ ಬಾಳಿದವರಂತೆ ನಿಮ್ಮ ಭಾಷೆಯನ್ನು ತಿದ್ದುತ್ತವೆ. ವಿಷಾದದ ಸಂಗತಿಯೆಂದರೆ ಈ ಹೊಸ ಉಚ್ಚಾರಣೆಯನ್ನು ಅಭ್ಯಾಸ ಮಾಡಿಕೊಂಡ ಮೇಲೆ ಹಳೆಯ ಉಚ್ಚಾರಣೆ ಮರೆತು ಹೋಗುತ್ತದೆ ಅಥವಾ ಮರೆಯಲೇ ಬೇಕಾಗುತ್ತದೆ. ಆದ್ದರಿಂದ ನಮ್ಮ ಕಾಲ್‌ಸೆಂಟರ್ ಉದ್ಯೋಗಿಗಳು ಆಫೀಸಿನ ಹೊರಗೂ ಬೇರೆ ದೇಶದ ಇಂಗ್ಲೀಷ್ ಉಚ್ಚಾರಣೆಯನ್ನು ಬಳಸುತ್ತಾರೆ. ನಮ್ಮ ಇತರ ಜನರ ನಡುವೆ ವಿಭಿನ್ನವಾಗಿ ಕಾಣುತ್ತಾರೆ.

ಬರೀ ಭಾಷೆಯ ಉಚ್ಚಾರಣೆಯೊಂದರಿಂದಲೇ ಎಲ್ಲಾ ಸಮಸ್ಯೆಗಳು ಬಗೆಹರಿಯುವದಿಲ್ಲ. ಗ್ರಾಹಕರ ಬಳಿ ಮಾತನಾಡುವಾಗ ಅವನನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಅವನ ಸಂಸ್ಕೃತಿ, ಆಚಾರ–ವಿಚಾರಗಳು ತಿಳಿದಿರಬೇಕಾಗುತ್ತದೆ. ಅಮೆರಿಕಾದವನನ್ನು ಖುಷಿಪಡಿಸಲು ಹಿಂದಿನ ರಾತ್ರಿ ನಡೆದ ಬೇಸ್ ಬಾಲ್ ಆಟದ ಬಗ್ಗೆ ಹರಟೆ ಹೊಡೆದರೆ, ಬ್ರಿಟೀಷ್ ಪ್ರಜೆಯ ಜೊತೆ ಮ್ಯಾಂಚೆಸ್ಟರ್ ಯುನೈಟೆಡ್ ಈ ದಿನ ಹೇಗೆ ಫುಟ್ಬಾಲ್ ಪಂದ್ಯವನ್ನು ಆಡಬಹುದೆಂದು ಹರಟಬೇಕಾಗುತ್ತದೆ. ನಮ್ಮ ಖಾಸಗಿ ತರಬೇತಿ ಸಂಸ್ಥೆಗಳು ಈ ಸಂಸ್ಕೃತಿಯನ್ನು ಧಾರೆಯೆರೆಯುತ್ತಿವೆ. ಅವರು ಊಟ ಹೇಗೆ ಮಾಡುತ್ತಾರೆ, ಅವರ ಹಬ್ಬಹರಿದಿನಗಳೇನು, ಅವರ ಸಿಟ್ಟು ಸೆಡವುಗಳು ಹೇಗೆ, ಅವರ ಅಭ್ಯಾಸ ದುರಭ್ಯಾಸಗಳೇನು ಅವರ ಶಕ್ತಿ ದುರ್ಬಲತೆಗಳೇನು.... ಎಲ್ಲವನ್ನೂ ತಿಳಿಸಿಕೊಡುತ್ತಾರೆ.

ಹಾಗಂತ ಇದು ಬರೀ ತರಬೇತಿಯಿಂದ ಒಮ್ಮೆ ಕಲಿತುಕೊಂಡರೆ ಮುಗಿಯಿತೆನ್ನುವುದಲ್ಲ. ನೌಕರರು ದಿನನಿತ್ಯ ಬೇರೆ ದೇಶದವರಂತೆ ಬದುಕಬೇಕಾಗುತ್ತದೆ. ಅಲ್ಲಿಯ ಪ್ರಸಿದ್ಧ ಟಿ.ವಿ. ಕಾರ್ಯಕ್ರಮಗಳನ್ನು ವೀಕ್ಷಿಸಬೇಕಾಗುತ್ತದೆ, ಅಲ್ಲಿಯ ದಿನಪತ್ರಿಕೆ, ವಾರಪತ್ರಿಕೆಗಳನ್ನು ಓದಬೇಕಾಗುತ್ತದೆ, ಅಲ್ಲಿ ಬಿಡುಗಡೆಯಾದ ಸಿನಿಮಾಗಳನ್ನು ಇಲ್ಲಿ ಡಿ.ವಿ.ಡಿ. ಹಾಕಿಕೊಂಡು ನೋಡಬೇಕಾಗುತ್ತದೆ. ಒಂದೆರಡು ತಿಂಗಳು ಅದನ್ನೆಲ್ಲಾ ಬಿಟ್ಟು ನಿನ್ನ ಭಾರತೀಯರಂತೆ ಹಿಂದಿ – ಕನ್ನಡ ಸಿನಿಮಾ ನೋಡಿಕೊಂಡು, ಕನ್ನಡ ದಿನಪತ್ರಿಕೆಗಳನ್ನು ಓದಿಕೊಂಡು ದಿನಕಳೆದರೆ ನಿಮ್ಮ ಆಫೀಸಿನಲ್ಲಿ ಬೆಲೆ ಕಳೆದುಕೊಂಡು, ಕೆಲಸ ಕಳೆದುಕೊಳ್ಳುವ ಸ್ಥಿತಿಗೆ ಇಳಿದುಬಿಡುವ ಸಾಧ್ಯತೆಯಿದೆ.

ಗ್ರಾಹಕನಿಗೆ ತಾನು ಮಾತನಾಡುತ್ತಿರುವುದು ಯಾವುದೋ ದೂರ ದೇಶದ ವ್ಯಕ್ತಿಯೊಂದಿಗೆ ಎಂದು ಗೊತ್ತಾದರೆ ಅವನಿಗೆ ಆ ಕರೆಯಲ್ಲಿ ಆಸಕ್ತಿ ಉಳಿಯುವುದಿಲ್ಲ. ತನ್ನ ಕೆಟ್ಟು ಹೋದ ಟಿ.ವಿ. ದೂರನ್ನು ನೀಡುತ್ತಿರುವುದು ಸಾವಿರಾರು ಕಿಲೋಮೀಟರ್ ದೂರದಲ್ಲಿರುವ ಭಾರತದ ಮೂಲೆಯಲ್ಲೆಲ್ಲೋ ಕುಳಿತಿರುವ ವ್ಯಕ್ತಿಗೆ ಎಂದು ಗೊತ್ತಾದರೆ ಅವನ ಪಿತ್ತನೆತ್ತಿಗೇರುವುದಿಲ್ಲವೆ? ಆದ್ದರಿಂದ ಕಾಲ್‌ಸೆಂಟರ್‌ಗಳು ಪ್ರಪ್ರಥಮವಾಗಿ ಗ್ರಾಹಕನಿಗೆ ದೂರವಾಣಿ ಕರೆ ಇಲ್ಲೇ ಪಕ್ಕದ ಮನೆಯಿಂದಲೇ ಬರುತ್ತಿದೆ ಎನ್ನುವ ಭಾವನೆಯನ್ನು ಉಂಟುಮಾಡುವುದಕ್ಕೆ ಪ್ರಯತ್ನ ಪಡುತ್ತಾರೆ. ಅಂತಹ ಪ್ರಯತ್ನದಲ್ಲಿ ಮೊದಲನೆ ಬದಲಾವಣೆಯಾಗಿ ಎಲ್ಲಾ ಕಾಲ್‌ಸೆಂಟರ್ ನೌಕರರ ಹೆಸರನ್ನು ಬದಲಾಯಿಸುತ್ತಾರೆ.

ಗ್ರಾಹಕ ಕರೆ ಮಾಡಿದಾಗ ನೀವು ನಿಮ್ಮ ಹೆಸರನ್ನು ಹರಿಸರ್ವೋತ್ತಮ ಎಂದರೆ ಅವರು ಗಲಿಬಿಲಿಯಾಗುವುದಿಲ್ಲವೆ? ಅದಕ್ಕೆ ಬದಲು ನೀವು "ಐ ಆಮ್ ಹ್ಯಾರಿ, ಹೌ ಕಾನ್ ಐ ಹೆಲ್ಫ್ ಯು ಎನ್ನಬೇಕಾಗುತ್ತದೆ. ಪ್ರತಿಯೊಬ್ಬ ನೌಕರನೂ ತನ್ನ ಹೆಸರನ್ನು ಮೈಕಲ್, ವೆಂಡಿ, ಕ್ಯಾರಿ, ಜಾಕ್, ಜೇನ್ ಎಂದೆಲ್ಲಾ ಬದಲಿ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಎಂಟು ಗಂಟೆಗಳ ಕಾಲ ಈ ಹೆಸರಿನಿಂದ ಒಡನಾಡಿದ ನೌಕರನಿಗೆ ಮತ್ತೆ ಬೇರೆ ಹೆಸರಿಗೆ ಹೊಂದಿಕೊಳ್ಳುವುದು ಕಷ್ಟವಾಗುತ್ತದೆ. ಆದ್ದರಿಂದ ಕೆಲಸದ ಸಮಯ ಮುಗಿದ ನಂತರವೂ ಅವರು ಪ್ಯಾರಿ, ಮೈಕಲ್ ಎಂದೇ ತಮ್ಮನ್ನು ಕರೆದುಕೊಳ್ಳುತ್ತಿರುತ್ತಾರೆ. ತಮ್ಮ ಹಳೆಯ ಹೆಸರುಗಳನ್ನು ಕ್ರಮೇಣ ಮರೆಯುತ್ತಿದ್ದಾರೆ.

ಹಾಗಂತ ಈ ಸಮಸ್ಯೆಯನ್ನು ತೀರಾ ಭಾವೋದ್ರೇಕತನದಿಂದ ನೋಡುವುದು ತಪ್ಪೆನಿಸುತ್ತದೆ. "ಹೆಸರು ಬದಲಾದರೆ ಆದ ನಷ್ಟವೇನು – ಎಷ್ಟು ಜನರನ್ನು ಅವರ ಮನೆಯಲ್ಲಿ ಬೇರೆ ಯಾವುದೋ ಅರ್ಥವಿಲ್ಲದ ಪ್ರೀತಿಯ ಹೆಸರುಗಳಿಂದ ಕರೆಯುವುದಿಲ್ಲ ? ಉದ್ಯೋಗವಿಲ್ಲದೆ ಅಲೆದು ಕಂಗೆಡುವುದಕ್ಕಿಂತ ಹೆಸರು ಬದಲಿ ಮಾಡಿಕೊಳ್ಳುವುದು ಯಾವ ದೊಡ್ಡ ವಿಷಯ ಎನ್ನುವ ವಾದ ಮಾಡುವವರ ಮಾತೂ ಸತ್ಯವೆನಿಸುತ್ತದೆ.

ಈ ಕಾಲ್‌ಸೆಂಟರ್‌ಗಳ ಮತ್ತೊಂದು ವಿಚಿತ್ರ ಸಮಸ್ಯೆಯೆಂದರೆ ಕೆಲಸ ಮಾಡುವ ಅವಧಿಯದು. ಬೆಳಿಗ್ಗೆ ಒಂಬತ್ತಕ್ಕೆ ಹೋಗಿ ಸಂಜೆ ಆರಕ್ಕೆ ಬರುವ ಸುಂದರ ಕೆಲಸವಿದಲ್ಲ. ನಾವು ವಿದೇಶದವರ ಕೆಲಸದ ಸಮಯಕ್ಕೆ ಸರಿಯಾಗಿ ಕೆಲಸ ಮಾಡಬೇಕಾಗುತ್ತದೆ. ಅಂದರೆ ಅಮೆರಿಕಾ ಬೆಳಿಗ್ಗೆ ಒಂಬತ್ತಕ್ಕೆ ಕೆಲಸ ಪ್ರಾರಂಭಿಸಿ ಸಂಜೆ ಆರಕ್ಕೆ ಕೆಲಸ ಮುಗಿಸುತ್ತಾರೆಂದುಕೊಂಡರೆ ನಾವು ರಾತ್ರಿ ಸುಮಾರು ಹತ್ತರಿಂದ ಬೆಳಗ್ಗೆ ಆರರ ತನಕ ಕೆಲಸ ಮಾಡಬೇಕಾಗುತ್ತದೆ. ಸ್ವಲ್ಪ ಒರಟಾಗಿ ಹೇಳಬೇಕೆಂದರೆ ಕಾಮಾಟಿಪುರದ ವೇಶ್ಯಾವಾಟಿಕೆಯ ವ್ಯಾಪಾರದ ಸಮಯದಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಹಾಗಂತ ರಾತ್ರಿ ಪಾಳಿ ಭಾರತೀಯ ಕಾರ್ಮಿಕನಿಗೆ ಹೊಸದೇನೂ ಅಲ್ಲ. ಎಲ್ಲಾ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲೂ ನೌಕರರು ರಾತ್ರಿ ಪಾಳಿಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಆದರೆ ಅಲ್ಲಿ ಒಂದು ವ್ಯತ್ಯಾಸವಿದೆ. ಎಲ್ಲಾ ಕಾರ್ಖಾನೆಗಳಲ್ಲೂ ಒಂದು ವಾರ ರಾತ್ರಿ ಪಾಳಿಯಲ್ಲಿ ದುಡಿದರೆ ಮುಂದಿನ ವಾರ ಹಗಲಿನ ಪಾಳಿಯಲ್ಲಿ ಕೆಲಸ ಮಾಡುವ ಸೌಕರ್ಯವಿರುತ್ತದೆ. ಆದರೆ ಕಾಲ್‌ಸೆಂಟರ್ ಗಳಲ್ಲಿ ಅದು ಸಾಧ್ಯವಿಲ್ಲ. ಸೂರ್ಯ ಚಂದ್ರರಿಗೆ ಅಮೆರಿಕಾ ಮತ್ತು ಭಾರತ ಎಂಬ ವ್ಯತ್ಯಾಸವಿಲ್ಲ. ಎರಡೂ ಕಡೆ ತಮ್ಮ ಕೆಲಸದ ಪಾಳಿಯನ್ನು ಬದಲಾಯಿಸಲು ಅವರಿಬ್ಬರೂ ಸಿದ್ಧರಿಲ್ಲ.

ಸದ್ಯಕ್ಕೆ ಈ ಕಾಲ್ಸೆಂಟರ್ನಲ್ಲಿ ಕೆಲಸ ಮಾಡುತ್ತಿರುವವರೆಲ್ಲಾ ಎಳೆಯ ತರುಣ ತರುಣಿಯರು. ಹೆಚ್ಚಾಗಿ ಕಾಲೇಜಿನಿಂದ ಈಗಷ್ಟೇ ಹೊರಬಂದವರು. ಆದ್ದರಿಂದ ಅವರಿಗೆ ಅಂತಹ ಸಮಸ್ಯೆಯಾಗಲಿಕ್ಕಿಲ್ಲ. ಆದರೆ ನಾಳೆ ಬೆಳಿಗ್ಗೆ ಅವರು ಮದುವೆಯಾಗಬೇಕೆಂದರೆ ಸುಲಭವಾಗಿ ಹುಡುಗಿ (ಅಥವಾ ಹುಡುಗ) ಸಿಕ್ಕುವದಿಲ್ಲ. ಹೋಗಲಿ ಕಾಲ್ಸೆಂಟರ್ ಹುಡುಗಿಯನ್ನೇ (ಹುಡುಗನನ್ನೇ) ಮದುವೆಯಾಗುತ್ತಾರೆಂದಿಟ್ಟುಕೊಳ್ಳಿ. ಮುಂದೆ ಮಕ್ಕಳಾದರೆ ಅವರ ಗತಿ ?

ಹಾಗಂತ ಕಂಗಾಲಾಗುವುದು ಬೇಡವೆಂದು ವ್ಯಾಪಾರ ದಿಗ್ಗಜ್ಜರು ಹೇಳುತ್ತಾರೆ. ದಿನದಿಂದ ದಿನಕ್ಕೆ ಕಾಲ್ಸೆಂಟರ್ಗಳು ಬೆಳೆಯುತ್ತಿರುವ ವೇಗವನ್ನು ನೋಡಿದರೆ, ಕೆಲವೇ ವರ್ಷಗಳಲ್ಲಿ ಈ ನಿಶಾವಾಗ್ಮಿಗಳ ಒಂದು ದೊಡ್ಡ ಸಮುದಾಯವೇ ಸೃಷ್ಟಿಯಾಗಿರುತ್ತದೆ. ಆಗ ಅಂತಹವರ ಮಕ್ಕಳಿಗೆಂದೇ ರಾತ್ರಿ ಶಾಲೆಗಳು ಸೃಷ್ಟಿಯಾಗುತ್ತವೆ. ಮಕ್ಕಳೂ ಅಪ್ಪ–ಅಮ್ಮಂದಿರಂತೆ ರಾತ್ರಿ ಪಾಳಿಯಲ್ಲಿ ಶಾಲೆಗೆ ಹೋದರೆ ಈ ಸಮಸ್ಯೆಯಿರುವದಿಲ್ಲ ಎಂದು ಹೇಳುತ್ತಾರೆ. ಈ ತರ್ಕ ಎಷ್ಟರ ಮಟ್ಟಿಗೆ ಸತ್ಯವೆಂದು ಕಾಲವೇ ನಿರ್ಧರಿಸಬೇಕು.

ಈ ರಾತ್ರಿ ಪಾಳಿಯಿಂದ ಮತ್ತೊಂದು ವಿಭಿನ್ನ ಸಮಸ್ಯೆ ಎಲ್ಲಾ ಕಾಲ್ಸೆಂಟರ್ಗಳಲ್ಲಿ ತಲೆದೋರುತ್ತಿದೆ. ಇಲ್ಲಿ ಕೆಲಸ ಮಾಡುವವರೆಲ್ಲಾ ಹೆಚ್ಚಾಗಿ ಹಸಿಬಿಸಿ ವಯಸ್ಸಿನ ತರುಣ–ತರುಣಿಯರು, ರಾತ್ರಿಯ ಹೊತ್ತಿನಲ್ಲಿ ದೇಹದ ಬಯಕೆಗಳನ್ನು ಹತ್ತಿಡುವುದು ಸಾಧ್ಯವಿಲ್ಲದ ವಯಸ್ಸಿನವರು. ಎರ್‍ರಾಬಿರಿ ನಡತೆಗಳ ಮೇಲೆ ಹತೋಟಿಯಿಡಲು ಆ ಹೊತ್ತಿನಲ್ಲಿ ಹಿರಿಯರೂ ಇಲ್ಲದ ಕಾರಣ ತೀರಾ ಅಕ್ರಮ ವ್ಯವಹಾರಗಳು ನಡೆದು ಕಂಪನಿಯ ಮ್ಯಾನೇಜುಮೆಂಟ್‌ಗೆ ತಲೆನೋವಿನ ಪ್ರಸಂಗಗಳು ಮೂಡುತ್ತಿವೆ.

ಉಳಿದ ಚಿಕ್ಕಪುಟ್ಟ ಸಮಸ್ಯೆಗಳನ್ನು ಬದಿಗಿಡೋಣ. ಹೀಗೆ ಬರೀ ರಾತ್ರಿಯ ಪಾಳೆಯಲ್ಲಿ ಕೆಲಸ ಮಾಡುತ್ತಾ ಹೋದರೆ ಆರೋಗ್ಯದ ಗತಿಯೇನು ? ಸೂರ್ಯನ ಜೊತೆ ದುಡಿಯಬೇಕು. ಚಂದ್ರನ ಜೊತೆ ವಿರಮಿಸಬೇಕೆನ್ನುವುದು ಪ್ರಕೃತಿ ನಿಯಮ. ನಾವು ಅದಕ್ಕೆ ವಿರುದ್ಧವಾಗಿ ಎಷ್ಟು ದಿನ ದುಡಿಯಲು ಸಾಧ್ಯ ? ವಾರದ ಎಲ್ಲಾ ದಿನ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಿ, ಶನಿವಾರ ಭಾನುವಾರದಂತಹ ರಜೆಯ ದಿನಗಳಲ್ಲಿ ಕಾಲ್ಸೆಂಟರ್ ನೌಕರರು ಕಂಗಾಲಾಗುತ್ತಾರೆ. ಉಳಿದೆಲ್ಲ ಸ್ನೇಹಿತರು ಬೆಳಗಿನ ಹೊತ್ತು ಕುಣಿದು ಕುಪ್ಪಳಿಸಿ ಜೀವನವನ್ನು ಅನುಭವಿಸುತ್ತಿದ್ದರೆ ಇವರ ಕಣ್ಣುಗಳು ನಿದ್ರೆಯಿಂದ ಎಳೆಯಲಾರಂಭಿಸುತ್ತವೆ. ರಾತ್ರಿಯ ಹೊತ್ತು ಮನೆಯವರೆಲ್ಲರೂ ನೆಮ್ಮದಿಯಿಂದ ಮಲಗಿದ್ದರೆ ಇವರು ಟಿ.ವಿ. ಹಾಕಿಕೊಂಡು ನಿಚ್ಚಳ ಕಣ್ಣುಗಳಿಂದ ಕೆಟ್ಟ ಕೆಟ್ಟ ಕಾರ್ಯಕ್ರಮಗಳನ್ನು ಬೇಸರದಿಂದ ವೀಕ್ಷಿಸುತ್ತಾರೆ.

ಹೋಗಲಿ ವಾರದ ರಜೆಗಳನ್ನು ಹೇಗೋ ಕಳೆಯುತ್ತಾರೆಂದುಕೊಂಡರೂ ಭಾರತೀಯ ಹಬ್ಬದ ದಿನಗಳಲ್ಲಿ ಪರಿಸ್ಥಿತಿ ಹದಗೆಡುತ್ತದೆ. ನಮ್ಮ ಆಗಸ್ಟ್ ಹದಿನೈದಕ್ಕೆ ಕೆಲಸ ಮಾಡಿದರೆ, ಅಮೆರಿಕಾದ ಸ್ವಾತಂತ್ರ್ಯ ದಿನಾಚರಣೆಯ ದಿನ ರಜೆ

ತೆಗೆದುಕೊಳ್ಳಬೇಕಾಗುತ್ತದೆ. ಯುಗಾದಿಯ ದಿನ ಗ್ರಾಹಕನ ಕರೆಗಳಿಗೆ ಓಗೊಟ್ಟರೆ, ಈಸ್ಟರ್ ಹಬ್ಬದ ದಿನ ಮನೆಯಲ್ಲಿ ತೆಪ್ಪಗೆ ಕುಳಿತುಕೊಳ್ಳ ಬೇಕಾಗುತ್ತದೆ. ಗ್ರಾಹಕನ ಕರೆಗಳಿಗೆ ಅತ್ಯಂತ ಮಹತ್ವವನ್ನು ಕೊಡುವ ವ್ಯಾಪಾರೀ ಮನೋಭಾವದ ಅಮೆರಿಕನ್ನರಿಗೆ ನೀವು ರಾಮನವಮಿ, ಕೃಷ್ಣಾಷ್ಟಮಿ ನೆವ ಹೇಳಿ ಮನೆಯಲ್ಲಿ ಬೇಲದ ಹಣ್ಣಿನ ಪಾನಕ ಕೋಸಂಬರಿಗಳನ್ನು ಮೆಲ್ಲುತ್ತೇವೆಂದರೆ ಸಹಿಸುವುದು ಸಾಧ್ಯವಿಲ್ಲ. ಅದಕ್ಕೆ ಬದಲು ಕ್ರಿಸ್ ಮಸ್ ದಿನ ಕೇಕು ತಿಂದು, ವೈನ್ ಕುಡಿದು, ರಾಕ್ ಸಂಗೀತಕ್ಕೆ ಕುಣಿದು ಕುಪ್ಪಳಿಸುತ್ತೀರೆಂದರೆ ಅವರದೇನೂ ಅಡ್ಡಿಯಿಲ್ಲ.

ಹಾಗಂತ ಭಾರತೀಯರು ಮಾತ್ರ ಈ ಕಾಲ್ಸೆಂಟರ್ ವ್ಯವಹಾರದಲ್ಲಿ ತಲೆ ತೂರಿಸಿದ್ದಾರೆಂದು ತಪ್ಪರ್ಥ ಮಾಡಿಕೊಳ್ಳಬೇಡಿ, ಚೀನಾ, ಮಲೇಶಿಯಾ, ಹಾಂಕಾಂಗ್, ಆಫ್ರಿಕಾ ದೇಶವೆಲ್ಲಾ ಈ ಕಾಲ್‌ಸೆಂಟರ್ ವ್ಯವಹಾರಕ್ಕೆ ಪಾದಾರ್ಪಣೆ ಮಾಡಿಯಾಗಿವೆ. ಚೀನಿಯರಿಗೆ ಇಂಗ್ಲೀಷ್ ಬರುವುದಿಲ್ಲವೆಂಬ ಒಂದೇ ಕಾರಣದಿಂದ ನಾವು ಬಚಾವು, ಆದರೆ ತುಂಬಾ ದಿನ ಅದೇ ನೆಪವನ್ನು ಮುಂದಕ್ಕಿಟ್ಟು ಚೀನೀಯರನ್ನು ನಗಣ್ಯರೆಂದುಕೊಳ್ಳುವಂತಿಲ್ಲ. ಈಗಾಗಲೇ ಚೀನಾದಲ್ಲಿ ಪ್ರಾಥಮಿಕ ಮಟ್ಟದಿಂದಲೇ ಇಂಗ್ಲಿಷ್ ವಿದ್ಯಾಭ್ಯಾಸ ಪ್ರಾರಂಭವಾಗಿದೆ, ಚೀನೀಯರಿಗೆ ಇಂಗ್ಲಿಷ್ ಕಲಿಯುವದಕ್ಕೆ ಭಾರತೀಯರಿಗಿಲ್ಲದ ಒಂದು ವಿಶೇಷ ಅನುಕೂಲವಿದೆ. ಅದೇನೆಂದರೆ ಅವರಿಗೆ ಇಂಗ್ಲೀಷ್ ಬರುವದಿಲ್ಲ.

ಈಗಾಗಲೇ ತಿಳಿಸಿದಂತೆ ಅಮೆರಿಕನ್ನರ ಇಂಗ್ಲೀಷಿನ ಉಚ್ಚಾರಣೆಯನ್ನು ಕಲಿಯುವದು ಅತ್ಯಂತ ಮುಖ್ಯ. ಭಾರತೀಯರಿಗೆ ಈಗಾಗಲೇ ಇಂಗ್ಲಿಷ್ ಭಾಷೆ ಗೊತ್ತಿರುವದರಿಂದ, ಅವರ ಸಳೀಯ ಉಚ್ಚಾರಣೆಯನ್ನು ಹೋಗಲಾಡಿಸಿ ನಂತರ ಅಮೆರಿಕಾದ ಉಚ್ಚಾರಣೆ ಕಲಿಸಿಕೊಡ ಬೇಕಾಗುತ್ತದೆ. ಆದರೆ ಚೀನಿಯರಿಗೆ ಇಂಗ್ಲಿಷ್ ಭಾಷೆಯ ಗಂಧಗಾಳಿ ಇಲ್ಲದ್ದರಿಂದ ನೇರವಾಗಿ ಅಮೆರಿಕನ್ ಉಚ್ಚಾರಣೆಯನ್ನು ಕಲಿಸಿಕೊಡಬಹುದಾಗಿದೆ. ಇನ್ನು ಐದಾರು ವರ್ಷಗಳಲ್ಲಿ ಚೀನಾ ಭಾರತೀಯರಿಗೆ ತೀವ್ರ ಪ್ರತಿಸ್ಪರ್ಧೆಯನ್ನು ಒಡ್ಡುವದರಲ್ಲಿ ಯಾವ ಅನುಮಾನವೂ ಬೇಕಿಲ್ಲ.

ಕಾಲ್ಸೆಂಟರ್ಗಳ ಸಮಸ್ಯೆಗಳನ್ನೇ ವೈಭವೀಕರಿಸುತ್ತಾ ಹೋದರೆ ಸಿನಿಕತನವಾಗುತ್ತದೆ. ಹಾಗೆ ನೋಡಿದರೆ ಕಾಲ್ಸೆಂಟರ್ನಿಂದಾಗಿ ನಮ್ಮ ದೇಶದ ನಿರುದ್ಯೋಗ ಸಮಸ್ಯೆ ಕಡಿಮೆಯಾಗುವ ಸಾಧ್ಯತೆಯಿದೆ. ಮುಂದಿನ ವರ್ಷಕ್ಕೆ

ಸುಮಾರು ಎರಡು ಲಕ್ಷ ಕಾಲ್ಸೆಂಟರ್ಗಳಿರಬಹುದೆಂದು ಒಂದು ಅಂದಾಜು. ಈ ಉದ್ಯೋಗಕ್ಕೆ ಭಾಷೆಯ ಹಿಡಿತ, ಒಳ್ಳೆಯ ಮಾತನಾಡುವ ಕಲೆ, ಚಾಲಾಕಿತನವಿದ್ದರೆ ಸಾಕು. ಹೆಚ್ಚಿನ ಪದವಿಗಳ ಅವಶ್ಯಕತೆಯಿಲ್ಲ, ಸಾಫ್ಟ್‌ವೇರ್ ವ್ಯಾಪಾರ ಕೇವಲ ಉನ್ನತ ವಿದ್ಯಾಭ್ಯಾಸವನ್ನು ಮಾಡಿದವರಿಗೆ ಮಾತ್ರ ಉದ್ಯೋಗ ಅವಕಾಶವನ್ನು ಸೃಷ್ಟಿಸಿತು. ಆದರೆ ಕಾಲ್ ಸೆಂಟರ್ ಹಾಗಲ್ಲ, ಪಿ.ಯು.ಸಿ. ಫೇಲಾದವನೂ ನೌಕರಿ ಗಿಟ್ಟಿಸಿಕೊಳ್ಳಬಹುದಾಗಿದೆ. ನಿರರ್ಗಳ ಇಂಗ್ಲೀಷ್ ಭಾಷೆ ಮತ್ತು ನಯವಾದ ಮಾತುಗಾರಿಕೆ ಇದ್ದರಾಯ್ತು.

ಕಾಲ್‌ಸೆಂಟರ್ ಬೆಳೆದಂತೆ ಅದರ ಜೊತೆಯಲ್ಲಿ ಬೇರೆ ಉದ್ಯಮಗಳು ತನ್ನಿಂತಾನೇ ಬೆಳೆಯುತ್ತವೆ. ರಾತ್ರಿಯ ಹೊತ್ತಿನಲ್ಲಿ ಇವರು ಕೆಲಸ ಮಾಡುತ್ತಾರಾದ್ದರಿಂದ ಅವರನ್ನು ಕಛೇರಿಗೆ ಕರೆದೊಯ್ಯಲು ಮತ್ತು ಮನೆಗೆ ಬಂದು ಬಿಡಲು ವಾಹನ ಸೌಕರ್ಯ ಬೇಕೇಬೇಕು. ಈ ವಾಹನ ಬಾಡಿಗೆ ಕೊಡುವ ಉದ್ಯಮ ಅತ್ಯಂತ ವೇಗವಾಗಿ ಬೆಳೆಯುತ್ತದೆ. ಒಂದು ಅಂದಾಜಿನ ಪ್ರಕಾರ ಸುಮಾರು ನಾಲ್ಕು ಲಕ್ಷಕ್ಕೂ ಹೆಚ್ಚು ವಾಹನಗಳು ಮುಂದಿನ ಎರಡು ವರ್ಷಗಳಲ್ಲಿ ಬೇಕಾಗುತ್ತದಂತೆ! ಅದೇ ರೀತಿ ಆಹಾರ ಸರಬರಾಜು ಮಾಡುವ ಉದ್ದಿಮೆ, ಕಾಲ್ಸೆಂಟರ್ ತರಬೇತಿ ನೀಡುವ ಸಂಸ್ಥೆಗಳ ಉದ್ದಿಮೆ, ಕಟ್ಟಡಗಳನ್ನು ಕಟ್ಟಿ ಬಾಡಿಗೆ ನೀಡುವ ಉದ್ದಿಮೆ ಮೇಜು ಕುರ್ಚಿಗಳನ್ನು ಮಾಡುವ ಉದ್ದಿಮೆ, ಒಳಾಂಗಣ ಅಲಂಕಾರವನ್ನು ಮಾಡುವ ಉದ್ದಿಮೆ ಎಲ್ಲವೂ ಒಂದಕ್ಕೊಂದು ತಳುಕು ಹಾಕಿಕೊಂಡಿವೆ. ಒಂದು ಉದ್ದಿಮೆ ಅಭಿವೃದ್ಧಿ ಹೊಂದಿದರೆ ಸಾಕು – ಉಳಿದವು ತನ್ನಿಂತಾನೆ ಅಭಿವೃದ್ಧಿ ಹೊಂದುತ್ತವೆ.

ಕಾಲ್ ಸೆಂಟರ್ ಉದ್ಯೋಗಕ್ಕೆ ಅಂತಹ ಉತ್ತಮ ವಿದ್ಯಾಭ್ಯಾಸ ಬೇಕಿಲ್ಲವೆನ್ನುವುದು ನಮ್ಮ ಯುವಜನಾಂಗಕ್ಕೆ ಮಾರಕವಾಗಿಯೂ ಪರಿಣಮಿಸಬಹುದಾಗಿದೆ. ಪಿ.ಯು.ಸಿ. ಮುಗಿಸಿದ ಕೂಡಲೇ ಹತ್ತು ಸಾವಿರ ಪಗಾರದ ಉದ್ಯೋಗ ಸಿಗುವ ಅವಕಾಶ ಉಂಟಾದರೆ ಯುವಜನತೆ ಉನ್ನತ ವ್ಯಾಸಂಗಕ್ಕಾಗಿ ಹಾತೊರೆಯುವುದಿಲ್ಲ. ಈ ಸದ್ಯ ಕೈಗೆ ಸಿಗುವ ಕಾಸು, ಸವಲತ್ತು ಅವನಿಗೆ ಮುಂದಿನ ವಿದ್ಯಾಭ್ಯಾಸದಲ್ಲಿ ಆಸಕ್ತಿಯನ್ನು ಉಳಿಸುವುದಿಲ್ಲ. ಚಿಕ್ಕ ವಯಸ್ಸಿಗೇ ಕೈಗೆ ಸಿಗುವ ಕಾಸು ಅವನಲ್ಲಿ ದುರಭ್ಯಾಸಗಳನ್ನು ಸೃಷ್ಟಿಸುತ್ತವೆ. ಈಗಾಗಲೇ ಪಾಶ್ಚಿಮಾತ್ಯ ದೇಶಗಳಲ್ಲಿ ಹತ್ತನೇ ತರಗತಿಗೆ ವಿದ್ಯಾಭ್ಯಾಸಕ್ಕೆ ಮಂಗಳ

ಹಾಡಿ ಉದ್ಯೋಗಕ್ಕೆ ಸೇರಿ, ಮದುವೆ ಮಕ್ಕಳನ್ನೂ ಮಾಡಿಕೊಂಡು ಸಂಸಾರ ನಿಭಾಯಿಸಲಾಗದೆ ಒದ್ದಾಡುವ ಯುವಜನಾಂಗ ದೊಡ್ಡ ಸಮಸ್ಯೆಯಾಗಿದ್ದಾರೆ. ಭಾರತಕ್ಕೂ ಆ ಸಮಸ್ಯೆ ಬಾರದಿರಲಿ.

ಕಾಲ್ ಸೆಂಟರ್ ಉದ್ಯೋಗ ಅತ್ಯಂತ ಏಕತಾನೀಯವಾದುದಾಗಿದೆ. ದಿನದ ಎಂಟು ಗಂಟೆಗಳ ಕಾಲ ಎಡೆಬಿಡದೆ ಮಾತನಾಡುತ್ತಲೇ ಇರುವ ಕೆಲಸ ಯಾರಿಗೆ ತಾನೇ ಬೇಸರ ಮೂಡಿಸುವದಿಲ್ಲ ? ಬಹುಬೇಗನೆ ನೌಕರರು ನಿರುತ್ಸಾಹಕ್ಕೊಳಗಾಗುವ ಶಕ್ಯತೆಯಿದೆ. ಆದ್ದರಿಂದ ಮೇಲಿಂದ ಮೇಲೆ ಅಲ್ಲಿ ರಾಜೀನಾಮೆಗಳು ಕಂಡುಬರುತ್ತವೆ. 'ಆ ಕಾಲ್ ಸೆಂಟರ್ನಲ್ಲಿ ಕೆಲಸ ಕಡಿಮೆ, ಮಧ್ಯದಲ್ಲಿ ಸುಸ್ತಾದರೆ ಮಲಗಿಕೊಳ್ಳಬಹುದಂತೆ' ಎಂದೆಲ್ಲಾ ಮಾತನಾಡಿಕೊಂಡು ಕೆಲಸ ಬದಲಾಯಿಸುವುದು ಸರ್ವ ಸಾಮಾನ್ಯ. ಆದರೆ ಯಾವ ಕಂಪನಿಗೆ ಹೋದರೂ ನಿಮ್ಮನ್ನು ದುಡಿಸಿಕೊಳ್ಳುವ ಕಂಪನಿಗಳು ಸುಮ್ಮನೆ ಕೂತವರಿಗೆ ಕಾಸು ಕೊಡಲು ತಯಾರಿರುವುದಿಲ್ಲ ಎನ್ನುವುದು ಮೂಲಭೂತ ಸತ್ಯ. ದೂರದ ಬೆಟ್ಟನುಣ್ಣಗೆ ಕಾಣುತ್ತದಷ್ಟೇ !

ಈ ಎಡೆಬಿಡದ ಸುಸ್ತನ್ನು ನಿವಾರಿಸಿಕೊಳ್ಳಲು ಯೋಗಾಭ್ಯಾಸ, ಧ್ಯಾನ, ವ್ಯಾಯಾಮಗಳು ಅತ್ಯಂತ ಅವಶ್ಯಕವಾಗಿದೆ. ಅಮೆರಿಕಾದ ಮಧ್ಯಾಹ್ನದ ಊಟದ ಸಮಯದಲ್ಲಿ ನಮ್ಮವರೂ ಒಂದು ಗಂಟೆ ಬಿಡುವನ್ನು ತೆಗೆದುಕೊಳ್ಳಬಹುದು. ಆಗ ನಮಗಿಲ್ಲಿ ರಾತ್ರಿ ಒಂದೋ ಎರಡೋ ಗಂಟೆಯಾಗಿರುತ್ತದೆ. ಆ ತಂಪು ಹೊತ್ತಿನಲ್ಲಿ ಯಾವುದಾದರೊಂದು ಹೊರಾಂಗಣ ಆಟವನ್ನು ಆಡುವುದು ಒಳ್ಳೆಯದು. ಹಾಗೆ ನೋಡಿದರೆ ದಿನದ ಹನ್ನೆರಡು ತಾಸು ಗೇಟಿನ ಬಳಿ ಬಿಸಿಲಲ್ಲಿ ಕಾಯುತ್ತಲೇ ಕುಳಿತಿರುವ ನಮ್ಮ ಸೆಕ್ಯೂರಿಟಿ ಗಾರ್ಡಿನ ಉದ್ಯೋಗಕ್ಕೆ ಹೋಲಿಸಿದರೆ ಈ ಕೆಲಸ ಎಷ್ಟೋ ವಾಸಿ. ಎಷ್ಟೋ ಪದವೀಧರರು ಸೆಕ್ಯೂರಿಟಿ ಉದ್ಯೋಗವನ್ನು ಮಾಡುತ್ತಿದ್ದಾರೆಂಬುದನ್ನು ಇಲ್ಲಿ ಮರೆಯುವಂತಿಲ್ಲ.

ಕಾಲ್ ಸೆಂಟರ್ ಉದ್ಯೋಗಕ್ಕೆ ಇಂಗ್ಲಿಷ್ ಭಾಷೆಯ ಮೇಲಿನ ಹಿಡಿತವೇ ಬಂಡವಾಳವೆಂದ ಮೇಲೆ, ಇಲ್ಲಿಯೂ ನಮ್ಮ ಹಳ್ಳಿಗಾಡಿನ ಪದವೀಧರರು ಸೋಲುತ್ತಾರೇನೋ ಎಂಬ ಅನುಮಾನವಾಗುತ್ತದೆ. ಬರೀ ಕನ್ನಡದಲ್ಲಿಯೇ ಮಾತನಾಡಿ ಗೊತ್ತಿರುವ ನಮ್ಮ ಹಳ್ಳಿಯ ಹುಡುಗರು ಪರೀಕ್ಷೆಯಲ್ಲಿ ಉತ್ತರ ಬರೆಯುವಷ್ಟು ಮತ್ತೊಬ್ಬರು ಮಾತನಾಡಿದರೆ ಅರ್ಥ ಮಾಡಿಕೊಳ್ಳುವಷ್ಟು ಮಾತ್ರ

ಇಂಗ್ಲಿಷ್ ತಿಳಿದುಕೊಂಡಿರುತ್ತಾರೆ. ತಾವೇ ಮಾತನಾಡಲು ತಡವರಿಸುತ್ತಾರೆ. ಮುಂಬರುವ ದಿನಗಳಲ್ಲಿ ಕಾಲ್ಸೆಂಟರ್ ಉದ್ಯೋಗಾವಕಾಶಗಳು ಹೆಚ್ಚಾಗುತ್ತಾ ಹೋದರೆ ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲೀಷ್ ಭಾಷೆಗೇ ಹೆಚ್ಚಿನ ಪ್ರಾಮುಖ್ಯತೆ ಸಿಗಬಹುದು. ನಮ್ಮ ಹಳ್ಳಿಹಳ್ಳಿಗಳಲ್ಲಿ ಕಾನ್ವೆಂಟ್ಗಳು ನಾಯಿಕೊಡೆಯಂತೆ ತಲೆಯೆತ್ತಬಹುದು. ಆದರೆ ಈಗಾಗಲೇ ಮೂಲೆಗುಂಪಾಗುತ್ತಿರುವ ಕನ್ನಡ ಈ ಜಾಗತೀಕರಣದ ಭರಾಟೆಯಲ್ಲಿ ನಿರ್ನಾಮವಾಗುತ್ತದೇನೋ ಎಂಬ ಹೆದರಿಕೆಯಾಗುತ್ತದೆ.

ಪಶ್ಚಿಮದ ದೇಶಗಳು ಭಾರತೀಯ ಕಾಲ್ಸೆಂಟರ್ನಿಂದ ಆಗುವ ಉಳಿತಾಯಕ್ಕೆ ಬೆರಗಾಗಿದ್ದಾರೆ. ಅವರ ದೇಶದಲ್ಲಿ ಒಬ್ಬ ಕಾರ್ಮಿಕನಿಗೆ ಕೊಡುವ ಸಂಬಳವನ್ನು ಇಲ್ಲಿ ಹತ್ತು ಜನಕ್ಕೆ ಹಂಚಬಹುದಾಗಿದೆ. ಸಾಧ್ಯವಾದಷ್ಟು ಕಾಲ್ಸೆಂಟರ್ ಕೆಲಸವನ್ನು ಭಾರತಕ್ಕೆ ದೊಬ್ಬುತ್ತಿದ್ದಾರೆ. ಆದರೆ ಈಗಾಗಲೇ ಅಲ್ಲಿ ಕಾಲ್ಸೆಂಟರ್ಗಳಲ್ಲಿ ಕೆಲಸ ಮಾಡುತ್ತಿದ್ದ ನೌಕರರು ತಮ್ಮ ಕೆಲಸಗಳನ್ನು ಕಳೆದುಕೊಳ್ಳುತ್ತಿದ್ದಾರೆ. ತಮ್ಮ ಉದ್ಯೋಗಚ್ಯುತಿಗೆ ಕಾರಣವಾದ ಭಾರತವನ್ನು ದ್ವೇಷಿಸುತ್ತಿದ್ದಾರೆ. ಮೊನ್ನೆ ಬ್ರಿಟಿಷ್ ಟೆಲಿಕಾಂ ತನ್ನ ಒಂದು ಬೃಹತ್ ಕಾಲ್ಸೆಂಟರ್ ಒಂದನ್ನು ಭಾರತಕ್ಕೆ ವರ್ಗಾಯಿಸಲು ಪ್ರಯತ್ನಿಸಿದಾಗ ಇಡೀ ಇಂಗ್ಲೆಂಡ್ ವಿರೋಧವನ್ನು ವ್ಯಕ್ತಪಡಿಸಿ, ಅಂತಹ ದೊಡ್ಡ ಕಂಪನಿಯನ್ನು ಮಣಿಸಿತು. ಸರಕಾರಕ್ಕೂ ಇಂತಹ ವ್ಯಾಪಾರದ ಗುತ್ತಿಗೆಯನ್ನು ಭಾರತಕ್ಕೆ ನೀಡುವದನ್ನು ನಿಯಂತ್ರಿಸಬೇಕೆಂದು ಬೆದರಿಕೆ ಒಡ್ಡಿತು.

ಆದರೆ ನಾವೀಗ ಬದುಕುತ್ತಿರುವದು ಸ್ಪರ್ಧಾತ್ಮಕ ಯುಗದಲ್ಲಿ ಜಗತ್ತಿನ ಮೂಲೆಮೂಲೆಯನ್ನು ಒಂದು ದೂರವಾಣಿಯ ಕರೆಯ ಮೂಲಕ ಸಂಪರ್ಕಿಸಬಹುದಾದ ಇಂದಿನ ದಿನಗಳಲ್ಲಿ ಉದ್ಯೋಗಪತಿ ಜನರ ಭಾವನೆಗಳಿಗೆಲ್ಲಾ ಬೆಲೆ ಕೊಡುತ್ತಾ ಕುಳಿತುಕೊಳ್ಳುವುದು ಸಾಧ್ಯವಿಲ್ಲ. ಎಲ್ಲಿ ಕಡಿಮೆ ಖರ್ಚಿನಲ್ಲಿ ಕೆಲಸ ಮಾಡಬಹುದೋ ಅಲ್ಲಿಗೆ ಧಾವಿಸುತ್ತಾನೆ. ಅವನನ್ನು ಕತಡೆಯಲು ಯಾರಿಂದಲೂ ಸಾಧ್ಯವಿಲ್ಲ. ವ್ಯಾಪಾರವೆಂಬುದು ಬರೀ ಮೂಲೆಯಲ್ಲಿ ಕುಳಿತು ಮಾಡುವ ಸಂಧ್ಯಾವಂದನೆಯಂತಲ್ಲ. ಯಾವುದೋ ದೇಶದ, ಯಾವುದೋ ಕುಗ್ರಾಮದ ಬದುಕುಳಿಯಲು ವ್ಯಕ್ತಿಯೂ ನಿಮ್ಮ ಗ್ರಾಹಕನೆಂದು ಭಾವಿಸಿದಾಗಲೇ ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸಾಧ್ಯ.

ಪ್ರಪಂಚದ ಪರಿಚಯ ಮಾಡಿಕೊಂಡಿರುವ ಭಾರತೀಯ ಬರೀ ಕಾಲ್ಸೆಂಟರ್ಗೆ ವ್ಯಾಪಾರವನ್ನು ನಿಲ್ಲಿಸುವದಿಲ್ಲ. ಹೊಸ ಹೊಸ ವ್ಯಾಪಾರಗಳ ಸಾಧ್ಯತೆಯನ್ನು ಹುಡುಕುತ್ತಲೇ ಇದ್ದಾನೆ. ಅಲ್ಲಿಯ ಎಲ್ಲಾ ಅಕೌಂಟ್ಸ್ ಕೆಲಸಗಳನ್ನು ಇಲ್ಲಿಯ ನಮ್ಮ ಅಕೌಂಟೆಂಟ್ಗಳಿಂದ ಮಾಡಿಸಿದರೆ ಹೇಗೆ, ಅವರ ವಿದ್ಯುತ್ ಮತ್ತು ನೀರಿನ ಬಿಲ್ಲುಗಳನ್ನು ಇಲ್ಲಿಂದಲೇ ಇಂಟರ್ನೆಟ್ ಮೂಲಕ ಕಟ್ಟಬಹುದಲ್ಲಾ ಅವರ ಬಟ್ಟೆಗಳನ್ನು ಇಲ್ಲಿಯೇ ಇಸ್ತ್ರಿ ಮಾಡಿ ಅಲ್ಲಿಗೆ ಕಳುಹಿಸಿದರೆ ಹೇಗೆ, ಫ್ರೆಂಚ್, ಜರ್ಮನ್ನಂತಹ ಇತರ ಮುಂದುವರೆದ ದೇಶಗಳ ಭಾಷೆಗಳನ್ನು ಕಲಿತುಕೊಂಡು ಅಲ್ಲಿಗೂ ಕಾಲ್ ಸೆಂಟರ್ ಸೌಲಭ್ಯ ಒದಗಿಸಬಹುದಲ್ಲವೆ... ಅವನ ವಿಚಾರ ಧಾಟಿಗಳು ಮುಂದುವರೆಯುತ್ತಲೇ ಇವೆ. ಜಗತ್ತಿನ ಎಲ್ಲಾ ದೇಶಗಳ ಸೇವಾ ಸೌಲಭ್ಯಗಳ ಜವಾಬ್ದಾರಿಯನ್ನು ಭಾರತೀಯರು ವಹಿಸಿಕೊಂಡು ಹಣ ಮಾಡಬೇಕೆನ್ನುವುದು ಅವನ ಯೋಚನೆ.

ಜಗತ್ತಿನ ಸ್ಪರ್ಧೆಯಲ್ಲಿ ಸಶಕ್ತವಾಗಿ ಮುನ್ನುಗ್ಗುತ್ತಿರುವ ನಮ್ಮ ಭಾರತಕ್ಕೆ ನಮ್ಮೆಲ್ಲರ ಶುಭಹಾರೈಕೆಗಳನ್ನು ತಿಳಿಸೋಣ. ನಮ್ಮ ಒಣ ವೈಚಾರಿಕತೆಗಳನ್ನು ಬದಿಗಿಟ್ಟು ವಾಸ್ತವಕ್ಕೆ ನೆರವಾಗೋಣ.

* * *

**ಓದು ಪತ್ಯ**

# ಹಕ್ಕಿಗಳನ್ನು ಕುರಿತು

**– ರಾಮಚಂದ್ರದೇವ**

ಎಂಥೆಂಥಾ ಸುಂದರ ಹಕ್ಕಿಗಳಿವೆ– ಪಂಚವರ್ಣದ ಗಿಣಿ, ಸಾದಾಗಿಣಿ, ಸೀಳಿದ ಬಾಲದ ಹಕ್ಕಿ–ಸೌಂದರ್ಯದಲ್ಲಿ ಒಂದನ್ನೊಂದು ಮೀರಿಸುತ್ತವೆ. ಬಹು ಅತ್ಯಂತ ಸುಂದರವಾದ ಹಕ್ಕಿಯೆಂದರೆ ನವಿಲು, ಅದು ರೆಕ್ಕೆ ಬಿಡಿಸಿ ಕುಣಿಯುವಾಗ ಇಡೀ ಪ್ರಕೃತಿಯೇ ತನ್ನ ಸಕಲ ವೈಭವದೊಂದೊಗೆ ಕಟ್ಟಿ ಕುಣಿಯಲು ನಿಂತಹಾಗಿರುತ್ತದೆ.

ನಾನು ನವಿಲು ರೆಕ್ಕೆ ಬಿಚ್ಚಿದ್ದನ್ನು ನೋಡಿದ್ದು ದೆಹಲಿಯಲ್ಲಿ, ಪೇಟೆಯ ಮಧ್ಯದಲ್ಲೆಂಬಂತೆ ಬೆಳೆಸಿದ ಬುದ್ಧ ಜಯಂತಿ ಪಾರ್ಕಿನಲ್ಲಿ ಆಗತಾನೆ ಮಳೆ ಬಂದು ಬಿಟ್ಟಿತ್ತು. ತೊಳೆದ ಹಾಗಿದ್ದ ಗಿಡ, ಮರ, ರಸ್ತೆ, ನಾನು ಆಫೀಸಿನಿಂದ ಸ್ಕೂಟರಿನಲ್ಲಿ ಮನೆಗೆ ಬರುತ್ತಿದ್ದವ ಸುಮಾರು ಐದು ಗಂಟೆ ಆಗಿರಬಹುದು. ರಸ್ತೆಯಿಂದ ಸ್ವಲ್ಪ ದೂರದಲ್ಲಿ ಪಾರ್ಕಿನೊಳಗೆ ಗಿಡಗಳ ಮಧ್ಯೆ ಒಂದು ನವಿಲು ಗರಿಗಳನ್ನು ಅರೆಬಿಚ್ಚಿ ನಿಂತಿದ್ದು ಕಾಣಿಸಿತು. ಸ್ಕೂಟರ್‌ನಿಲ್ಲಿಸಿ ಫುಟ್‌ಪಾತ್ ಹತ್ತಿಕಾದೆ. ಪೂರಾ ಗರಿಬಿಚ್ಚುತ್ತದೆಯೇ? ಕಣಿಯುತ್ತದೆಯೇ? ನಾವು ಹಾಗೆ ಒರಗಿಕೊಂಡು ನಿಂತದ್ದು ಇಷ್ಟವಾಗಲಿಲ್ಲ ಎಂಬಂತೆ ಅರೆಬಿಚ್ಚಿದ ಗರಿಗಳನ್ನು ಮುಚ್ಚಿತು. ಸ್ವಲ್ಪ ಹೊತ್ತು ಹಾಗೆ ನಿಂತು ಎರಡು ಹೆಜ್ಜೆಮುಂದೆ ಬಂತು. ಆಮೇಲೆ, "ಕೃಪೆ ಮಾಡಿದ್ದೇನೆ, ನೋಡಿಕೋ" ಎಂಬಂತೆ ಧಿಗ್ಗನೆ ಗರಿಗಳ ಪ್ರಭಾವಳಿ ಬಿಚ್ಚಿ ನಿಂತು, ಎರಡು ಹೆಜ್ಜೆ ನಡೆದು, ಇವನದ್ದೇನು ಬಿಸಾಕು ಎಂಬಂತೆ ಬೆನ್ನು ತಿರುಗಿಸಿ ಹಾರಿ ಹೊರಟು ಹೋಯಿತು.

ಪೇಟೆಯ ಮಧ್ಯೆ ನಡೆದದ್ದು ಇದು. ಅದಕ್ಕಿಂತ ಕೆಲವೇ ದಿನಗಳ ಹಿಂದೆ ಅದೇ ಬುದ್ಧ ಜಯಂತಿ ಪಾರ್ಕ್‌ಲ್ಲಿ ಬಿಲ್ಲ ಮತ್ತು ರಂಗ ಎಂಬುವರು ಗೀತಾ ಮತ್ತು ಸಂಜಯ್ ಚೋಪ್ರಾ ಎಂಬ ಇಬ್ಬರು ಅಕ್ಕ–ತಮ್ಮನನ್ನು ಕೊಲೆ ಮಾಡಿದ್ದರು. ಅವರಿಬ್ಬರೂ ಸುಮಾರು ಹದಿನೈದು ಹದಿನಾರು ವರ್ಷದ ಕಾಲೇಜು ವಿದ್ಯಾರ್ಥಿಗಳು. ಆಕಾಶವಾಣಿಯಲ್ಲಿ ಕಾರ್ಯಕ್ರಮದ ರೆಕಾರ್ಡಿಂಗಿಗೆಂದು ಹೊರಟಿದ್ದವರು! ಮುಸ್ಸಂಜೆ ಒಂದು ಕಾರು ಬಂತೆಂದು ಲಿಫ್ಟ್ ಕೇಳಿದರು.

ಲಿಫ್ಟ್ ಕೊಟ್ಟ ಭಿಲ್ಲ ಮತ್ತು ರಂಗ ಆಕಾಶವಾಣಿಗೆ ಬದಲು ಬುದ್ಧ ಜಯಂತಿ ಪಾರ್ಕಿಗೆ ಕರೆದೊಯ್ದು ಕೊಲೆ ಮಾಡಿದರು. ವಿನಾಕಾರಣ ಕೊಲೆ ಮಾಡುವ ಮಜಕ್ಕಾಗಿ ಮಾಡಿದ ಕೊಲೆ ಅದು.

ಶೇಕ್ಸ್‌ಪಿಯರ್‌ನ "ಒಥೆಲೋ" ನಾಟಕದಲ್ಲಿ ಮೂರ್ತಿವೆತ್ತಂತಿರುವ ಇಯಾಗೋ ಎಂಬ ಪಾತ್ರವಿದೆ. ಬುದ್ಧ ಅಥವಾ ಗಾಂಧೀಜಿಗೆ ಒಳ್ಳೆಯವರಾಗಿರುವುದೇ ಜೀವನೋದ್ದೇಶವಾಗಿರುವಂತೆ, ತದ್ವಿರುದ್ಧವಾಗಿ, ಯಾವುದೇ ಕಾರಣವಿಲ್ಲದೆ ಕೇಡಿಗನಾಗಿರುವುದೇ ಜೀವನೋದ್ದೇಶವಾದವನು ಇಯಾಗೋ, ಭಿಲ್ಲ ಮತ್ತು ರಂಗ ಕೂಡಾ ಕೇಡಿಗರಾಗಿರುವುದರಲ್ಲೇ ಖುಷಿ ಪಟ್ಟು ಬದುಕಿದವರು! ಶುದ್ಧ ಈವಿಲ್‌ನ ಉದಾಹರಣೆ ಇವರು.

ಒಂದು ಕಡೆ ಮಳೆ ಬಳಿಕ ರೆಕ್ಕೆ ಬಿಚ್ಚಿ ನಿಂತ, ತನ್ನ ಸಂಗಾತಿ ಕರೆದು ಸೃಷ್ಟಿಯಲ್ಲಿ ನಿರತವಾಗುವ ಸೌಂದರ್ಯವೂ, ಜೀವನೋತ್ಸಾಹವೂ ಮೈವೆತ್ತಂತ್ತದ್ದ ನವಿಲು, ಅದೇ ಪಾರ್ಕಿನ ಇನ್ನೊಂದು ಕಡೆ ಕೇಡಿಗನೊಬ್ಬನಿಂದ ಕೊಲೆಯಾದ ಇಬ್ಬರು ಜೀವನೋತ್ಸಾಹದ ಎಳೆಯರ ನೆನಪು–ಇವು, ಸಾವು ಮತ್ತು ಬದುಕು, ಕೇಡು ಮತ್ತು ಒಳಿತು ಒಟ್ಟೊಟ್ಟಿಗೇ ಬದುಕುವುದರ ಸಂಕೇತ ಎನ್ನೋಣವೆ? ಸಂಕೇತಗಳಲ್ಲೇ ಯೋಚಿಸಿ ಅಭ್ಯಾಸವಾಗಿದ್ದರೆ ಹಾಗೇ ಹೇಳಬಹುದು. ಆದರೆ ಕೇಡಿಗನಾದ ಮನುಷ್ಯನೊಬ್ಬನ ಬಳಿ ನವಿಲು ಕುಣಿದರೆ ಆತ ನವಿಲನ್ನೇ ಕೊಂದು ತಿಂದಾನು, ಕೇಡಿಗನನ್ನು ನವಿಲಿನ ಸಾಂಕೇತಿಕಾರ್ಥದಿಂದ ಎದುರಿಸಿ ಪ್ರಯೋಜನವಿಲ್ಲ. ಅವನನ್ನು ಎದುರಿಸಲು ಒಳ್ಳೆಯವನೇ ಬೇಕು.

ಆದರೆ ಆ ಪೇಟೆಯ ಮಧ್ಯೆ, ಅಷ್ಟೊಂದು ವಾಹನ, ಕಾರಖಾನೆ, ರಾಜಕಾರಣಿ ಮಧ್ಯೆ ಇವೆಲ್ಲ ಇಲ್ಲವೇ ಇಲ್ಲ. ನಾನು ಈ ಮಳೆ ಮತ್ತು ಈ ಮುಖ್ಯ ಹಾರುವುದು ಕಲಿಯುತ್ತಿದ್ದ ಒಂದು ಮರಿ ಹಾರಿಕೊಂಡು ಬಂದು ಫ್ಯಾನಿಗೆ ಬಡಿದು ಕೆಳಗೆಬಿದ್ದು ಒದ್ದಾಡಿ ಸತ್ತುಹೋಯಿತು. ಆಮೇಲೆ ನಾಲ್ಕು ದಿನ ಫ್ಯಾನು ಹಾಕಲಿಲ್ಲ. ಪಾರಿವಾಳಗಳ ಶಬ್ದವೂ ಇರಲಿಲ್ಲ. ಇನ್ನನು ಅಡ್ಡಿಯಿಲ್ಲ ಅನ್ನಿಸಿ ಫ್ಯಾನು ಹಾಕಿದೆ. ಇನ್ನೊಂದು ಮರಿ ಅಷ್ಟು ದಿನ ಬಾರದೆ ಇದ್ದದ್ದು ಹೊರಗಿನಿಂದ ಹಾರಿಕೊಂಡು ಬಂದು ಫ್ಯಾನಿಗೆ ಬಡಿದು ಬಿದ್ದು ಅದೂ ಸತ್ತು ಹೋಯಿತು.

ನನಗೆ ಈ ಘಟನೆ ಯಂತ್ರ ಮತ್ತು ಪ್ರಕೃತಿ ತಾನೇ ತಾನಾಗಿರುವ ಕಡೆ ಗೂಡು ಕಟ್ಟಿ ಸಂತಾನ ಬೆಳೆಸಿದ್ದರೆ ಆ ಮರಿಗಳು ಉಳಿಯುತ್ತಿದ್ದವು. ಆದರೆ ನಮ್ಮ ನಾಗರಿಕತೆಯಲ್ಲಿ ಯಂತ್ರ ಜಗತ್ತು ಎಷ್ಟೊಂದು ವ್ಯಾಪಕವೆಂದರೆ, ಹಕ್ಕಿಗಳಿಗೂ, ಇಂಥಲ್ಲಿ ಗೂಡು ಕಟ್ಟದೆ ಬೇರೆ ಮಾರ್ಗವಿಲ್ಲ. ಇಲ್ಲಿಯೂ ಬದುಕುಳಿಯಬೇಕಾದರೆ ರೆಕ್ಕೆ ಬಲಿತಿರಬೇಕು.

ಬೆಂಗಳೂರಿನ ನನ್ನ ಮನೆ ಎದುರು ಕೂಗುವ ಕೋಗಿಲೆಯೂ ಯಂತ್ರ ಜಗತ್ತನ್ನು ಎದುರು ಹಾಕಿಕೊಂಡ ಪಕ್ಷಿಯೇ. ಎದುರು ಮನೆಯ ಕಂಪೌಡಿನಲ್ಲಿರುವ ಸಂಪಿಗೆ ಮರದ ಮೇಲಿದೆ ಅದರ ಮನೆ, ನನ್ನ ಮತ್ತು ಅದರ ಮನೆ ಮಧ್ಯೆ ಸಿಟಿಬಸ್ ಓಡಾಡುವ ರಸ್ತೆಯಿದೆ. ಮೊನ್ನೆ ಮಳೆ ಬಂದಾಗಿನಿಂದ ಬಸ್ಸಿನ ಶಬ್ದವನ್ನೂ ಮೀರಿ ಹಾಡುತ್ತಲೇ ಇದೆ. ಯಂತ್ರದ ಶಬ್ದವನ್ನು ತನ್ನ ಹಾಡಿನ ಶಬ್ದದಿಂದ ಮುಳುಗಿಸಿ ಬಿಡುವ ಪಣ ತೊಟ್ಟವರಂತೆ.

ಹಕ್ಕಿಗಳ ಬಗೆಗಿನ ನನ್ನ ಈ ಮಾತು ನನ್ನ ಸ್ನೇಹಿತನೊಬ್ಬನಿಗೆ ಮಾತ್ರ ವ್ಯರ್ಥ ಆಲಾಪದಂತೆ ಕೇಳುತ್ತದೆ. ಅವನ ದೃಷ್ಟಿಯಲ್ಲಿ ಹಕ್ಕಿಯೆಂದರೆ ಕೋಳಿಮರಿ ಮತ್ತು ಯಾವುದೇ ಕೋಳಿಮರಿ ಅವತಾರವೆತ್ತುವುದು ಅವನ ಹೊಟ್ಟೆ ತುಂಬಿಸುವುದಕ್ಕೆ ನಾನು ಸಸ್ಯಹಾರಿ ಎಂದರೆ ಅವನು ಕೇಳುವವನಲ್ಲ. ಎಲ್ಲ ನಾಗರೀಕ ಮನುಷ್ಯರೂ ಮಾಂಸಾಹಾರಿಗಳಾಗಿರಬೇಕೆಂದು ಅವನ ಸಿದ್ಧಾಂತ, ಮಾಂಸ ತಿನ್ನದ ನನ್ನನ್ನು ಅವನು “ಪುಳಿಚ್ಚಾರು ದಡ್ಡ' ಎಂದು ತಮಾಷೆ ಮಾಡುತ್ತಾನೆ.

ನಾಗರೀಕತೆ ಕಟ್ಟಬೇಕಾದರೆ ಕಾಡು ಕಡಿಯಬೇಕು. ಪ್ರವೇಶಿಸಲಗದಷ್ಟು ದುರ್ಗಮ ಪ್ರದೇಶವಾಗಿದ್ದಲ್ಲಿ ಬೆಂಕಿ ಕೊಟ್ಟು ಬಯಲಾಗಿಸಬೇಕು. ಆನೆ, ಕುದುರೆ ಮೊದಲಾದ ಪ್ರಾಣಿಗಳನ್ನು ಪಳಗಿಸಿ, ಹಾವಿನಂತ ಉರಗಗಳನ್ನು ನಾಶಪಡಿಸಿ, ನೆಲ ಅಗೆದು, ನೀರು ಚಿಮ್ಮಿಸಿ, ಕಟ್ಟಡ ಕಟ್ಟಿ, ಕವಿಗಳನ್ನು, ನರ್ತಕರನ್ನು, ವರ್ತಕರನ್ನು ಕರೆಸಿ ನಾಗರಿಕತೆ ಕಟ್ಟಬೇಕು. ಆದರೆ ಈ ನಾಗರಿಕತೆ ಕಟ್ಟಲು ಹಕ್ಕಿಗಳನ್ನು ಮಾತ್ರ ಸಾಯಿಸಬೇಕಾದಿಲ್ಲ. ಪಳಗಿಸಬೇಕಾದ್ದು ಇಲ್ಲ. ಅವು ಹೇಗಿವೆಯೋ ಹಾಗೆಯೇ ಇದ್ದು ನಾಗರೀಕತೆ ತನ್ನ ಉಚ್ಛ್ರಾಯ ತಲುಪಲು ಸಾಧ್ಯ. ಕಾಡಿನಲ್ಲಿ ಹೇಗೋ ನಾಡಿನಲ್ಲಿಯೂ ಅವು ಒಂದೇ ರೀತಿ ಇರುತ್ತದೆ. ಪ್ರಾಣಿಗಳ ಬಗ್ಗೆಯೂ ಉರಗಗಳ ಬಗ್ಗೆಯೂ ಹಾಗೆ ಹೇಳಲು ಸಾಧ್ಯವಿಲ್ಲ. ಕಾಡಿನಲ್ಲಿ ರೀತಿ ಅವು

ನಾಡಿನಲ್ಲಿದ್ದರೆ ನಾಡೇ ಕಾಡಾಗುತ್ತದೆ. ಪಳಗಿಸಿದ ಮೇಲೆ ಮಾತ್ರ ಅವುಗಳನ್ನು ನಾಡೊಳಗೆ ಬಿಟ್ಟುಬಿಡಬಹುದು.

ಆದ್ದರಿಂದಲೇ ಖಾಂಡವವನಕ್ಕೂ ಬೆಂಕಿಕೊಟ್ಟಾಗ ತಮ್ಮನ್ನು ಉಳಿಸುವಂತೆ ಹಕ್ಕಿಗಳು ಕೇಳಿಕೊಂಡ ಹಾಗೆ ಯುಧಿಷ್ಠಿರನಿಗೆ ಕನಸಾಗುತ್ತದೆ. ನಾಗರಿಕತೆ ಕಟ್ಟುವುದಕ್ಕಾಗಿ ಖಾಂಡವವನಕ್ಕೆ ಬೆಂಕಿ ಕೊಡುವುದು ಅನಿವಾರವಾಗಿತ್ತು. ಕಾಡನ್ನು ಉಳಿದ ಪ್ರಾಣಿಗಳನ್ನು ಪಳಗಿಸುವುದೂ ಅನಿವಾರವಾಗಿತ್ತು. ಆದರೆ ಹಕ್ಕಿಗಳನ್ನು ಕೊಲ್ಲುವುದು ಅನಿವಾರವಾಗಿರಲಿಲ್ಲ. ಹೀಗಾಗಿಯೇ ಅವು ಯುಧಿಷ್ಠಿರನ ಅಂತರಂಗಕ್ಕೆ ಪ್ರವೇಶಿಸಿ ತಮ್ಮನ್ನೇಕೆ ಕೊಲ್ಲುತ್ತೀ' ಎಂದು ಪ್ರಶ್ನಿಸುತ್ತವೆ. ಉಳಿಸುವಂತೆ ಕೇಳುತ್ತವೆ.

ಹೇಮಾಪಕ್ಷಿಯ ಕತೆ ಹೇಳಿ ಹಕ್ಕಿಗಳ ಕುರಿತ ಈ ಟಿಪ್ಪಣಿ ಮುಗಿಸುತ್ತೇನೆ. ವೇದದಲ್ಲಿ ಬರುವ ಈ ಕತೆಯನ್ನನು ರಾಮಕೃಷ್ಣ ಪರಮಹಂಸರು ತಮ್ಮ ಶಿಷ್ಯರಿಗೆ ಹೇಳಿದ್ದರು. ಕತೆ ತನ್ನಷ್ಟಕ್ಕೇ ಚೆನ್ನಾಗಿದೆ. "ಶ್ರೀ ರಾಮಕೃಷ್ಣ ವಚನವೇದ"ದಲ್ಲಿ ಇದನ್ನು ಈ ಕೆಳಗಿನ ಮಾತುಗಳಲ್ಲಿ ನಿರೂಪಿಸಿದ್ದಾರೆ. "ಹೇಮಾಪಕ್ಷಿ ಎತ್ತರದ ಆಕಾಶದಲ್ಲಿ ವಾಸಿಸುತ್ತದೆ. ಅಲ್ಲೇ ಮೊಟ್ಟೆಯಿಡುತ್ತದೆ. ಬಳಿಕ ಮೊಟ್ಟೆ ಕೆಳಗೆ ಬೀಳಲಾರಂಭಿಸುತ್ತದೆ ಅಷ್ಟೊಂದು ಎತ್ತರದಲ್ಲಿದೆ. ಅನೇಕ ದಿನಗಳವರೆಗೆ ಮೊಟ್ಟೆ ಬೀಳುತ್ತಲೇ ಇರುತ್ತವೆ. ಬೀಳುತ್ತ ಬೀಳುತ್ತ ಮೊಟ್ಟೆ ಬಿರಿದು ಮರಿಯಾಗುತ್ತದೆ. ಬಳಿಕ ಮರಿ ಬೀಳುತ್ತಲೇ ಇರುತ್ತದೆ. ಬೀಳುತ್ತ ಬೀಳುತ್ತ ಕಣ್ಣು ಬಿಡುತ್ತದೆ, ರಕ್ಕೆ ಬೆಳೆಯುತ್ತದೆ. ಕಣ್ಣು ಬಿಟ್ಟೊಡನೆ ಅದಕ್ಕೆ ಗೊತ್ತಾಗುತ್ತದೆ. ತಾನು ಕೆಳಕ್ಕೆ ಬೀಳುತ್ತಿರುವುದಾಗಿ, ನೆಲಕ್ಕೆ ಬಿದ್ದುದೇ ಆದರೆ ಒಮ್ಮೆಗೇ ಚೂರುಚೂರಾಗಿ ಹೋಗುವುದಾಗಿ ಒಡನೆಯ ಅವು ಸೋಯ್ ಅಂತ ಎತ್ತರದಲ್ಲಿರುವ ತನ್ನ ತಾಯಿ ಕಡೆಗೆ ಹಾದಿ ಹೋಗಿಬಿಡುತ್ತದೆ. ಮತ್ತೆ ಆ ಮರಿ ಮೊಟ್ಟೆ ಇಡುತ್ತದೆ, ಅದು ಕೆಳಗೆ ಬೀಳುತ್ತದೆ. ನೆಲಕ ಬೀಳುವ ಮೊದಲೇ ಎಚ್ಚೆತ್ತು ಹಾರಿ ಹೋಗುತ್ತದೆ, ಈ ಚಕ್ರ ನಿರಂತರವಾಗಿ ತಿರುಗುತ್ತಿರುತ್ತದೆ.

ಈ ಕತೆ ಸೂಚಿಸುವುದು ಏನನ್ನು? ನೆಲ ಮುಗಿಲುಗಳ ಸೆಳೆತವನ್ನೇ? ನಿರಂತರವಾಗಿ ಮೊಟ್ಟೆ ಇಡುತ್ತಾ ಸೃಷ್ಟಿಸುವ ಈ ಹಕ್ಕಿಗೆ ಕೆಳಗೆ ಬಿದ್ದು ಸತ್ತು ಹೋಗುವ ಅಪಾಯ ಸದಾ ಇದೆ. ಆ ಅಪಾಯ ಸನ್ನಿಹಿತವಾಗುತ್ತಿದ್ದಂತೆ

ಆಕಾಶಕ್ಕೆ ನೆಗೆದು ಜೀವ ಉಳಿಸಿಕೊಂಡು ಮತ್ತೊಂದು ಹಕ್ಕಿಗೆ ಜನ್ಮ ಕೊಡುತ್ತದೆ. ಆಕಾಶದಲ್ಲಿರುವ ಈ ಹಕ್ಕಿಗೆ ನೆಲದ ಸೆಳೆತವೇ ಸಾವು.

ಪ್ರತಿ ಹಕ್ಕಿಗೂ ಸಾವು ಹೀಗೆ ಫ್ಯಾನಿನ ರೂಪದಲ್ಲಿ ಬೇಟೆಗಾರನ ರೂಪದಲ್ಲಿ, ಖಾಂಡವವನದ ಬೆಂಕಿಯ ರೂಪದಲ್ಲಿ ಅಥವಾ ಚಿಕನ್ ಪ್ರೇಮಿಯಾದ ನನ್ನ ಸ್ನೇಹಿತನ ರೂಪದಲ್ಲಿ ಪ್ರತ್ಯಕ್ಷವಾಗುತ್ತದೆ, ಪ್ರತಿ ಹಕ್ಕಿಯೂ ಹೋಮಾಪಕ್ಷಿಯ ಹಾಗೆ ಸಾವಿನಿಂದ ತಪ್ಪಿಸಿಕೊಂಡು ಸಂತಾನ ವೃದ್ಧಿಸಬೇಕು. ಹಕ್ಕಿಗಳಿಲ್ಲದ ನಾಗರಿಕತೆಯನ್ನು, ಅವು ಹಾರದ ಆಕಾಶವನ್ನು ಕೂತು ಹಾಡದ ಮರವನ್ನು ನಾನಂತೂ ಕಲ್ಪಿಸಿಕೊಳ್ಳಲಾರೆ.

* * *

**ಸಾಧನೆ : ಆಶಯ**

# ರಾಗಿ ಋಷಿಗೆ ಜನಮನ್ನಣೆ

– **ಪ್ರೊ. ಎಂ. ನಾರಾಯಣಸ್ವಾಮಿ ತ್ಯಾವನಹಳ್ಳಿ**

ಮೈಸೂರು ತಾಲ್ಲೂಕಿನ ಹಾರೋಹಳ್ಳಿಯಲ್ಲಿ ಮೇ 15, 1921ರಲ್ಲಿ ಜನಿಸಿದ ಲಕ್ಷ್ಮಣಯ್ಯನವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ 1941ರಲ್ಲಿ ರಸಾಯನಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಷಯಗಳೊಂದಿಗೆ ಬಿಎಸ್ಸಿ ಪದವಿಯನ್ನು ಪಡೆದರು. ರೈಲ್ವೆಯಲ್ಲಿ ಗುಮಾಸ್ತರಾಗಿ ಕೆಲಕಾಲಸೇವೆ. ಅಲ್ಲಿಯ ಕೆಲಸಕ್ಕೆ ರಾಜೀನಾಮೆ. ಬುದ್ಧ, ಅಂಬೇಡ್ಕರ್, ಟಾಲ್‌ಸ್ಟಾಯ್ ಮತ್ತು ಐನ್‌ಸ್ಟೀನ್ ಚಿಂತನೆಗಳು ಇವರಿಗೆ ಮಾರ್ಗದರ್ಶನ. ಬೀರೂರಿನಲ್ಲಿ ಕೃಷಿ ಇಲಾಖೆಯಲ್ಲಿ ಸೇವೆ, ತದನಂತರ 1949 ರಲ್ಲಿ ಮಂಡ್ಯದ ವಿಸಿ ಫಾರಂನಲ್ಲಿ 'ಕಿರಿಯಸಹಾಯಕ ಸಸ್ಯಶಾಸ್ತ್ರಜ್ಞರಾಗಿ ಸೇರಿಕೊಂಡರು. ರಾಗಿ ಸ್ವಕೀಯ ಪರಾಗ ಸ್ಪರ್ಶ ಬೆಳೆ. ಅದರಲ್ಲಿ ತಳಿ ಸಂಕರಣ ಸಾಧ್ಯವಿಲ್ಲ ಎಂದು ಜಗತ್ತಿನ ಎಲ್ಲ ವಿಜ್ಞಾನಿಗಳೂ ಕೈಚೆಲ್ಲಿದ್ದ ಕಾಲವದು. ಆದರೆ ಲಕ್ಷ್ಮಣಯ್ಯನವರ ಪ್ರಬುದ್ಧ ಆಲೋಚನೆಗಳು ಫಲಕೊಟ್ಟವು. ಬಡವರ ಆಹಾರ ರಾಗಿ. ಬಡವರಿಗೆ ರಾಗಿಮುದ್ದೆ, ರಾಗಿರೊಟ್ಟಿಯೇ ನಿತ್ಯದ ಆಹಾರ. ಕಾಯಿಲೆ ಕಸಾಲೆಗೆ ರಾಗಿಯ ಅಂಬಲಿಯೇ ಬಡವರಿಗೆ ಗತಿ. ಆ ದಿನಗಳಲ್ಲಿ ಅನ್ನ ಕಾಣುವುದು ಹಬ್ಬಹರಿದಿನಗಳಿಗೆ ಮಾತ್ರ ಎಂಬತ್ತಿತ್ತು.

ರಾಗಿ ತಳಿಗಳ ಸಂಕರಣದ ವಿಧಾನ ಕುರಿತು ಲಕ್ಷ್ಮಣಯ್ಯನವರು ಬುದ್ಧನಂತೆ ಧ್ಯಾನ ಮಾಡಿದರು. ತಾವೇ ಆವಿಷ್ಕರಿಸಿದ 'ವಿಶೇಷ ಸಂಪರ್ಕಪದ್ಧತಿ'ಯ ಮೂಲಕ ರಾಗಿಯಲ್ಲಿ ಸಂಕರಣ ತಳಿಗಳನ್ನು ಕಂಡುಹಿಡಿದ ಜಗತ್ತಿನ ಮೊಟ್ಟಮೊದಲ ವಿಜ್ಞಾನಿಯಾದರು. 1913 ರಲ್ಲಿ ಮೈಸೂರು ವ್ಯವಸಾಯ ಇಲಾಖೆಯ ಮೊದಲ ನಿರ್ದೇಶಕರಾದ ವಿದೇಶಿ ಅಧಿಕಾರಿ ಲೆಸ್ಲಿ ಕೋಲ್ಮನ್ ಅವರು ರಾಗಿಯನ್ನು ಸಂಕರಣಗೊಳಿಸಲು ಪ್ರಯತ್ನಿಸಿ ಸೋತವರು. ಲೆಸ್ಲಿ ಸೇರಿದಂತೆ ಬೇರಾರೂ ಸಾಧಿಸಲಾಗದ್ದನ್ನು ಲಕ್ಷ್ಮಣಯ್ಯನವರು ಸಾಧಿಸಿದರು. ಸರ್ಕಾರದ ದಾಖಲೆಗಳಲ್ಲಿ ಸಿ. ಎಚ್. ಲಕ್ಷ್ಮಣಯ್ಯನವರು ರಾಗಿ ಬ್ರೀಡರ್ ಆದರೆ ಜನಮಾನಸದಲ್ಲಿ ಅವರು ರಾಗಿಬ್ರಹ್ಮ.

ದೇಸಿರಾಗಿ ತಳಿಗಳ ಹೆಸರುಗಳೆಂದರೆ, ಕರಿ ಕಡ್ಡಿರಾಗಿ, ಬಿಳಿ ಕಡ್ಡಿರಾಗಿ, ಗಿಡ್ಡರಾಗಿ, ಹಸಿರು ಕೊಂಬು ರಾಗಿ, ಮಾದಯ್ಯನಗಿರಿ –1, ಮಾದಯ್ಯನಗಿರಿ–2, ದೊಡ್ಡರಾಗಿ, ಗೌಬಿಲ್ಲೆರಾಗಿ, ಮಜ್ಜಿಗೆರಾಗಿ, ಜೇನುಮುದ್ದೆರಾಗಿ, ಬೆಣ್ಣೆಮುದ್ದೆರಾಗಿ, ರುದ್ರ ಜಡೆರಾಗಿ, ಜಡೆ ಸಂಗರಾಗಿ ಇತ್ಯಾದಿ. ಇವೆಲ್ಲವೂ ಎಕರೆಗೆ ಸರಾಸರಿ 5 ರಿಂದ 10 ಕ್ವಿಂಟಾಲವರೆಗೆ ಇಳುವರಿ ಕೊಡುತ್ತವೆಯೆಂದು 1920 ರ ಹೊತ್ತಿಗೇ ಲೆಸ್ಲೀ ಅವರು ಪುಸ್ತಕವೊಂದರಲ್ಲಿ ದಾಖಲಿಸಿದ್ದಾರೆ.

ಲಕ್ಷ್ಮಣಯ್ಯನವರು 1951 ರಿಂದ 1964 ರವರೆಗೆ ಸ್ಥಳೀಯ ರಾಗಿತಳಿಗಳೊಂದಿಗೆ ಕೊಯಮತ್ತೂರಿನ ರಾಗಿತಳಿಗಳನ್ನು ಸಂಕರಣಗೊಳಿಸಿ ಅನ್ನಪೂರ್ಣ, ಉದಯ, ಪೂರ್ಣ, ಅರುಣ, ಶಕ್ತಿ, ಸಂಪೂರ್ಣ, ಕಾವೇರಿರಾಗಿತಳಿಗಳನ್ನು ಬಿಡುಗಡೆ ಮಾಡಿದರು. ಇದರಿಂದ ಶೇ. 50 ರಷ್ಟು ಅಧಿಕ ಇಳುವರಿ ಸಾಧ್ಯವಾಯಿತು. ಇವರ ಸಾಧನೆಯನ್ನು ಮೊಟ್ಟಮೊದಲಿಗೆ ಖೋಡೆ ಕಂಪನಿ ಗುರುತಿಸಿತು. 1968ರಲ್ಲಿ 'ಕಾವೇರಿ' ರಾಗಿತಳಿಯಿಂದ ಅಧಿಕ ಇಳುವರಿ ಪಡೆದ ಹರಿಖೋಡೆಯವರು ನಗದು ಬಹುಮಾನದೊಡನೆ ಲಕ್ಷ್ಮಣಯ್ಯನವರನ್ನು ಸನ್ಮಾನಿಸಿದರು. ಮಂಜಪ್ಪನೆಂಬ ಕೃಷಿಕ ಖೋಡೆಯವರ ಜಮೀನಿನಲ್ಲಿ 'ಕಾವೇರಿ' ತಳಿಯಿಂದ ಉತ್ತಮ ಫಸಲು ಪಡೆದಿದ್ದರು. ತದನಂತರ, ಕರ್ನಾಟಕ ಸರ್ಕಾರದಿಂದ 1968 ಮತ್ತು 1982 ರಲ್ಲಿ ಎರಡು ಬಾರಿ ಲಕ್ಷ್ಮಣಯ್ಯನವರಿಗೆ ರಾಜ್ಯ ಪ್ರಶಸ್ತಿದಕ್ಕಿತು. ಕರ್ನಾಟಕ ಕೃಷಿಕ ಸಮಾಜದವತಿಯಿಂದ 1975ರಲ್ಲಿ ಏರ್ಪಡಿಸಲಾದ ಕಾರ್ಯಕ್ರಮದಲ್ಲಿ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರಿಂದ ಸನ್ಮಾನವಾಯಿತು.

1964 ರಿಂದ 1984 ರವರೆಗೆ ದೇಸಿರಾಗಿ ತಳಿಗಳನ್ನು ಆಫ್ರಿಕಾದ ರಾಗಿತಳಿಗಳೊಂದಿಗೆ ಸಂಕರಣಮಾಡಿ ಇಂಡಾಫ್ 1 ರಿಂದ ಇಂಡಾಫ್ 15 (ಇಂಡಿಯಾ + ಆಫ್ರಿಕಾ = ಇಂಡಾಫ್) ರವರೆಗಿನ ತಳಿಗಳನ್ನು ಬಿಡುಗಡೆ ಮಾಡಿದರು. ಇದರಿಂದ ಎಕರೆಗೆ ಐದಾರು ಕ್ವಿಂಟಾಲ್ ಬದಲಿಗೆ 15 ರಿಂದ 20 ಕ್ವಿಂಟಾಲ ರಾಗಿಯ ಇಳುವರಿ ಬಂತು. ಇದುಕನಿಷ್ಟ ಶೇ. 250 ರಷ್ಟು ಅಧಿಕ ಉತ್ಪಾದನೆ. ಪರಿಣಾಮವಾಗಿ ಕೋಟ್ಯಾಂತರ ಜನರ ಹಸಿವು ನೀಗಿತು. ಇದನ್ನು "ಕರ್ನಾಟಕದ ಹಸಿರು ಕ್ರಾಂತಿ"ಯೆನ್ನಬಹುದು. ಅವರ ರಾಗಿತಳಿಗಳು ರಾಗಿಧಾನ್ಯದ ಜತೆಗೆ ಅಧಿಕರಾಗಿ ಹುಲ್ಲನ್ನೂ ಒದಗಿಸಿದವು. ಇದರಿಂದ ಜಾನುವಾರುಗಳಿಗೆ

ಮೇವುಸಿಕ್ಕಿತು. ಬರಗಾಲದಲ್ಲಿ ತತ್ತರಿಸಿ ಹೋಗಿದ್ದ ಜಾನುವಾರುಗಳು ಬದುಕಿ ಉಳಿಯುವಂತಾಯಿತು. ಜನ ಮನ್ನಣೆ, ಎರಡು ವರ್ಷಗಳ ಸೇವಾವಧಿ ವಿಸ್ತರಣೆ ಹಾಗೂ ಹಲವು ಪ್ರಶಸ್ತಿ ಪುರಸ್ಕಾರಗಳ ನಂತರ ಲಕ್ಷ್ಮಣಯ್ಯನವರು 1984ರಲ್ಲಿ ಬೆಂಗಳೂರು ಕೃಷಿವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿಯಾದರು. 'ನಾನು ಆಳವಾಗಿ ಯೋಚಿಸಿದ್ದರ ಒಟ್ಟುಮೊತ್ತವೇ ನನಗೊದಗಿದ ಉನ್ನತಿಗೆ ಕಾರಣ' ಎಂದರು ಲಕ್ಷ್ಮಣಯ್ಯನವರು. ಇದನ್ನೇ ಗೌತಮ ಬುದ್ಧ ಎರಡು ಸಾವಿರ ವರ್ಷಗಳ ಹಿಂದೆಹೇಳಿದ್ದಾರೆ– 'ನಾವು ಏನು ಯೋಚಿಸುತ್ತೇವೋ ಅದಾಗುತ್ತೇವೆ. ನಮ್ಮ ಯೋಚನೆಗಳಿಂದಲೇ ಜಗತ್ತನ್ನು ಕಟ್ಟುತ್ತೇವೆ'.

**ರಾಗಿ ಋಷಿಗೆ ಜನಮನ್ನಣೆ**

ಕರ್ನಾಟಕ ಸರ್ಕಾರದ ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ. ಎಂ. ಪಿ. ಪ್ರಕಾಶ ಅವರ ಆಸ್ತೆಯಿಂದ 1985ರಲ್ಲಿ ರಾಗಿ ಲಕ್ಷ್ಮಣಯ್ಯನವರ ಹೆಸರು ಪದ್ಮಪ್ರಶಸ್ತಿಗೆ ಶಿಫಾರಸ್ಸಾಯಿತು. ಅವರ ಹೆಸರಿನ ಜತೆಗೆ ಡಾ. ಎಚ್. ನರಸಿಂಹಯ್ಯನವರ ಹೆಸರೂ ಇತ್ತು. ಅವರಿಗೆ ಆ ಪ್ರಶಸ್ತಿ ಸಂದಿತು. ಲಕ್ಷ್ಮಣಯ್ಯನವರಿಗೆ ಸಿಗಲಿಲ್ಲ. ಈ ಮಧ್ಯೆ ರೈತಸಂಘದವತಿಯಿಂದ ಪ್ರೊ. ಎಂ. ಡಿ. ನಂಜುಂಡಸ್ವಾಮಿಯವರು ಲಕ್ಷ್ಮಣಯ್ಯನವರನ್ನು ಸನ್ಮಾನಿಸಿದರು. ಎಚ್. ಎಲ್. ಕೇಶವಮೂರ್ತಿ ಮತ್ತು ಕೆ. ಪುಟ್ಟಸ್ವಾಮಿ ಬರೆದ ಲೇಖನಗಳು ಕ್ರಮವಾಗಿ ಲಂಕೇಶ ಪತ್ರಿಕೆಯ ದೀಪಾವಳಿ ವಿಶೇಷಾಂಕ (1982) ಮತ್ತು 'ಸುದ್ದಿಸಂಗಾತಿ' (1987) ಯಲ್ಲಿ ಪ್ರಕಟವಾದವು. 1988ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಅಂಬೇಡ್ಕರ್ ಸಂಘದ ವಿದ್ಯಾರ್ಥಿಗಳು ಪಿ. ಲಂಕೇಶ್‌ರಿಂದ ಲಕ್ಷ್ಮಣಯ್ಯನವರನ್ನು ಸನ್ಮಾನಿಸಿದರು. ಅದೇ ಸಂದರ್ಭಕ್ಕೆ ಅವರಿಗೆ ಗೌರವ ಡಾಕ್ಟೊರೇಟ್ ಕೊಡಬೇಕೆಂಬ ಒತ್ತಾಯಗಳು ಕೇಳಿಬಂದವು. 1989ರಲ್ಲಿ ಬೆಂಗಳೂರು ಕೃಷಿವಿವಿಯಿಂದ ಆಗಿನ ಕುಲಪತಿಗಳಾದಡಾ. ಕೆ. ಕೃಷ್ಣಮೂರ್ತಿ ಮತ್ತು ಕುಲಸಚಿವರಾದ ಡಾ. ಎಸ್. ಬಿಸಲಯ್ಯನವರ ಸ್ಪಂದನೆಯಿಂದ ಗೌರವ ಡಾಕ್ಟರೇಟ್ ಪದವಿಯನ್ನು ನಿವೃತ್ತಿಯನಂತರ 1990 ರಿಂದ 1992 ರವರೆಗೆ ಎರಡು ವರ್ಷಗಳಕಾಲ ಬೆಂಗಳೂರು ಕೃಷಿವಿವಿಯಲ್ಲಿ ವಿಸಿಟಿಂಗ್ ಪ್ರೊಫೆಸರ್ ಆಗಿ ಸೇವೆಸಲ್ಲಿಸಿ ಮತ್ತೊಂದು ಅಧಿಕ ಇಳುವರಿಯಎಲ್–5 ರಾಗಿತಳಿಯನ್ನು ಕೊಟ್ಟರು. 1993 ರಲ್ಲಿ ಅಪಾರ ಸಾಮಾಜಿಕ ಕಾಳಜಿಯ ಕೃಷಿವಿಜ್ಞಾನಿಡಾ. ಸಿ. ಎಚ್. ಲಕ್ಷ್ಮಣಯ್ಯ

ಇಹಲೋಕ ತ್ಯಜಿಸಿದರು. ಮಂಡ್ಯದ ಕೃಷಿಕಾಲೇಜಿನ 'ರಾಗಿಲಕ್ಷ್ಮಣಯ್ಯ ಸ್ಮಾರಕ ಸಮಿತಿ' ಪ್ರತಿ ವರ್ಷ ಅವರ ಹುಟ್ಟುಹಬ್ಬವಾದ ಮೇ 15 ರಂದು ಕೃಷಿ ವಿಷಯಕ್ಕೆ ಸಂಬಂಧಿಸಿದ ಒಂದು ಉಪನ್ಯಾಸದ ಆಯೋಜನೆಮಾಡುತ್ತಿದೆ. ಮೈಸೂರಿನ ಬಳಿಯ ನಾಗೇನಹಳ್ಳಿ ಕೃಷಿಸಂಶೋಧನಾ ಕೇಂದ್ರದಲ್ಲಿನ ಸಭಾಂಗಣಕ್ಕೆ 'ಡಾ. ಸಿ. ಎಚ್. ಲಕ್ಷ್ಮಣಯ್ಯಸಭಾಂಗಣ ಎಂದುನಾಮಕರಣವಾಡಲಾಗಿದೆ. ಮಂಡ್ಯನಗರದಿಂದವಿ.ಸಿ. ಫಾರಂನಕೃಷಿ ಸಂಶೋಧನಾ ಕೇಂದ್ರಕ್ಕೆ ಹೋಗುವ ರಸ್ತೆಗೆ 'ರಾಗಿಲಕ್ಷ್ಮಣಯ್ಯ ರಸ್ತೆ' ಎಂದು ಹೆಸರಿಡಲಾಗಿದೆ.

ಅಂದಿನ ಕೃಷಿಸಚಿವರಾದ ಶ್ರೀ ಕೆ. ಶ್ರೀನಿವಾಸಗೌಡರ ಪ್ರಯತ್ನದಿಂದಾಗಿ ಭಾರತರತ್ನ ಪ್ರಶಸ್ತಿಗೆ ಲಕ್ಷ್ಮಣಯ್ಯನವರ ಹೆಸರನ್ನು 2005–06ರಲ್ಲಿ ಸೂಚಿಸಲಾಗಿತ್ತಂತೆ. ಆದರೆ, ರಾಗಿಯು ಕೆಲವೇಕೆಲವು ರಾಜ್ಯಗಳ ಬೆಳೆಎಂಬ ತಪ್ಪುಕಲ್ಪನೆಯಿಂದಾಗಿ ಅವರಿಗೆ ಪ್ರಶಸ್ತಿಸಿಗಲಿಲ್ಲ. ಅಮೇರಿಕಾದ ಬೇಸಾಯಶಾಸ್ತ್ರದ ವಿಜ್ಞಾನಿಯಾದ ಡಾ. ನಾರ್ಮನ್ ಅವರು ಅಧಿಕ ಇಳುವರಿಯ ಗೋದಿ ತಳಿಗಳನ್ನು ಕಂಡು ಹಿಡಿದಿದ್ದಕ್ಕಾಗಿ 1970ರಲ್ಲಿ ನೋಬಲ್ ಶಾಂತಿಪ್ರಶಸ್ತಿ ಮತ್ತು 2006 ರಲ್ಲಿ ಭಾರತಸರ್ಕಾರದ ಪದ್ಮವಿಭೂಷಣಪ್ರಶಸ್ತಿ ಪಡೆದುಕೊಂಡರು. ಈ ನೆಲದ ವಿಜ್ಞಾನಿ ರಾಗಿ ಲಕ್ಷ್ಮಣಯ್ಯನವರಿಗೆ ಅಂತಹ ಯಾವಭಾಗ್ಯವೂ ಒಲಿದುಬರಲೇ ಇಲ್ಲ.

ಕೃಷಿಸಚಿವರಾಗಿದ್ದ ಶ್ರೀನಿವಾಸ ಗೌಡರ ಒತ್ತಾಯದಿಂದ ಬೆಂಗಳೂರು ಕೃಷಿವಿಶ್ವವಿದ್ಯಾನಿಲಯದ ಗಾಂಧಿ ಕೃಷಿ ವಿಜ್ಞಾನಕೇಂದ್ರದಲ್ಲಿ 2005ರಲ್ಲಿ ಅವರ ಪ್ರತಿಮೆಯು ಅನಾವರಣವಾಗಿದೆ. 'ಅವರಪ್ರತಿಮೆ ಸ್ಥಾಪಿಸದಿದ್ದರೆಸಹ ಕುಲಾಧಿಪತಿಯಾಗಿ ತಾವು ವಿಶ್ವವಿದ್ಯಾಲಯದ ಘಟಿಕೋತ್ಸವಕ್ಕೆ ಬರುವುದಿಲ್ಲ' ಎಂಬ ತಾಕೀತನ್ನುಮಾಡಿದ ಶ್ರೀನಿವಾಸಗೌಡರು ಲಕ್ಷ್ಮಣಯ್ಯನವರ ಪ್ರತಿಮೆ ಸ್ಥಾಪಿಸುವಂತೆ ನೋಡಿಕೊಂಡಿದ್ದಾರೆ. 'ನಮ್ಮ ಕಣದ ತುಂಬ ರಾಶಿರಾಶಿರಾಗಿ, ಅಷ್ಟೊಂದು ರಾಗಿಯನ್ನು ಶೇಖರಿಸಿಟ್ಟು ಕೊಳ್ಳುವುದು ನಮಗೆ ಕಷ್ಟದ ಕೆಲಸವಾಯಿತು, ಇದಕ್ಕೆ ಕಾರಣರಾದ ಲಕ್ಷ್ಮಣಯ್ಯನವರನ್ನು ನಾವು ಮರೆಯೋದುಂಟೆ? ಅವರು ಬದುಕಿದ್ದಾಗ ನಾನು ಮೈಸೂರಿಗೆ ಹೋಗಿ ಅವರನ್ನು ಆಗಾಗ ಮಾತನಾಡಿಸಿಕೊಂಡು ಬರುತ್ತಿದ್ದೆ' ಎನ್ನುತ್ತಾರೆ, ಕೋಲಾರದ ಶ್ರೀನಿವಾಸಗೌಡರು, ತುಂಬು ಅಭಿಮಾನದಿಂದ. ಕರ್ನಾಟಕರಾಜ್ಯ ಮುಕ್ತವಿಶ್ವವಿದ್ಯಾಲಯದಿಂದ 2010 ರಲ್ಲಿ ದೇವನೂರಮಹಾದೇವರಿಗೆ

ಕೊಡಬೇಕೆಂದಿದ್ದ ಗೌರವಡಾಕ್ಟರೇಟ ಪದವಿಯನ್ನು ದೇವನೂರರ ಕೋರಿಕೆಯಂತೆ ರಾಗಿಲಕ್ಷ್ಮಣಯ್ಯನವರಿಗೆ ಮರಣೋತ್ತರವಾಗಿ ನೀಡಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿದ್ಯಾರ್ಥಿಗಳು 'ಕೃಷಿಪತ್ರಿಕೋದ್ಯಮ' ಎಂಬ ಕೋರ್ಸಿನಲ್ಲಿ ರಾಗಿಲಕ್ಷ್ಮಣಯ್ಯನವರಕುರಿತು ತಿಳಿಯಬೇಕಿದೆ. ಅದು ಸಿಲಬಸ್ನಲ್ಲಿದೆ. ದೇಶದಲ್ಲಿ ರಾಗಿ ಬೆಳೆಯುವ ಪ್ರದೇಶಗಳು

ಭಾರತದಲ್ಲಿ ಕರ್ನಾಟಕ, ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳು ಹೆಚ್ಚುರಾಗಿ ಬೆಳೆಯುವಪ್ರದೇಶಗಳು. ಕರ್ನಾಟಕದಲ್ಲಿ ಬೆಂಗಳೂರು, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಹಾಸನ, ಮೈಸೂರು, ಚಾಮರಾಜನಗರ ಮತ್ತು ಮಂಡ್ಯಜಿಲ್ಲೆಗಳಲ್ಲಿ ರಾಗಿ ಬೆಳೆ ಅಧಿಕ. ಆಂಧ್ರಪ್ರದೇಶದ ಚಿತ್ತೂರು, ಅನಂತಪುರ, ನೆಲ್ಲೂರು, ಕರ್ನೂಲು, ಕಡಪ ಮತ್ತು ವಿಶಾಖಪಟ್ಟಣಂ ಜಿಲ್ಲೆಗಳಲ್ಲಿ ರಾಗಿಬೆಳೆಯುತ್ತಾರೆ. ತಮಿಳುನಾಡಿನಲ್ಲಿ ಸೇಲಂ, ಕೊಯಮತ್ತೂರು, ಉತ್ತರ ಆರ್ಕಾಟ್, ದಕ್ಷಿಣಆರ್ಕಾಟ್, ಚಂಗಲ್ಪೇಟೆ ಮತ್ತು ರಾಮನಾಥಪುರಂ ಜಿಲ್ಲೆಗಳು ರಾಗಿ ಬೆಳೆಗೆ ಹೆಸರುವಾಸಿ. ಹಿಮಾಲಯದ ತಪ್ಪಲು, ಗುಜರಾತ್, ಮಹಾರಾಷ್ಟ್ರ, ಪಶ್ಚಿಮಬಂಗಾಳ, ಬಿಹಾರ, ಉತ್ತರಪ್ರದೇಶ, ಅಸ್ಸಾಂ, ಹಿಮಾಚಲಪ್ರದೇಶ ಮತ್ತು ಕಾಶ್ಮೀರದಲ್ಲೂ ರಾಗಿಯನ್ನು ಅತ್ಯಲ್ಪ ಪ್ರಮಾಣದಲ್ಲಾದರೂ ಬೆಳೆಯುತ್ತಾರೆ.

ಭಾರತ ಮತ್ತು ಪೂರ್ವ ಆಫ್ರಿಕಾದೇಶಗಳಲ್ಲಿ ರಾಗಿಯನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ. ಜತೆಗೆ ಚೀನಾ, ಜಪಾನ್, ನೇಪಾಳ, ಬರ್ಮಾ, ಶ್ರೀಲಂಕಾ, ಥೈಲ್ಯಾಂಡ್, ಮಲೇಶಿಯಾ ದೇಶಗಳಲ್ಲಿ ಕೊಂಚ ಮಟ್ಟಿಗೆ ರಾಗಿಯನ್ನು ಬೆಳೆಯಲಾಗುತ್ತಿದೆ. ಅಮೇರಿಕಾದ ಮಾರುಕಟ್ಟೆಯಲ್ಲಿ ರಾಗಿಯ ಹಸಿ ಹಿಟ್ಟುಲಭ್ಯವಿದೆ. ಲಕ್ಷ್ಮಣಯ್ಯನ ಇಂಡಾ ಫ್ರಾಗಿ ತಳಿಗಳ ಹಿಟ್ಟು ಅಲ್ಲಿರಲೇ ಬೇಕಲ್ಲ? ಪಂಚತಾರಾ ಹೋಟೆಲ್ಲುಗಳಲ್ಲೂ ರಾಗಿ ತಿನಿಸುಗಳಿಗೆ ಬೇಡಿಕೆಯಿದೆ. ರಾಗಿ ಜಗದ ಆಹಾರವಾಗುತ್ತಿದೆ.

ಲಕ್ಷ್ಮಣಯ್ಯನವರು ಕಂಡು ಹಿಡಿದ ಅಧಿಕ ಇಳುವರಿಯ ರಾಗಿತಳಿಗಳು ದೇಶದ ಇತರೆ ರಾಜ್ಯಗಳಿಗೂ ಹಾಗೂ ವಿದೇಶಗಳಿಗೂ ಹೋಗಿವೆ, ಅರ್ಥಾತ್ ಖಂಡಾಂತರಗೊಂಡಿವೆ. ಇದರಿಂದ ಮಾನವ ಕುಲಕ್ಕೆ ಬಹುದುಪಕಾರವಾಗಿದೆ. ಅವರು ಎಲೆಮರೆಯ ಕಾಯಿಯ ರೀತಿಯಲ್ಲಿ ತೆನೆಮರೆಯಲ್ಲೇ ಸಂಶೋಧನೆ ಕೈಗೊಂಡವರು.

## ರಾಗಿಯದಾನ ಬಳ್ಳಬಳ್ಳ

ಸ್ಫೋಟಗೊಂಡ ಜನಸಂಖ್ಯೆಯ ತುತ್ತಿನಚೀಲ ತುಂಬಿಸುವಲ್ಲಿ ಲಕ್ಷ್ಮಣಯ್ಯನವರ ಕೊಡುಗೆ ಅಪಾರ. 'ಇಂಡಾಫ ತಳಿಗಳು ಬರಲಿಲ್ಲ ಎಂದರೆ ಹೊಟ್ಟೆಗೆ ಹಿಟ್ಟುಸಿಕ್ತಿರಲಿಲ್ಲ' ಅಂತ ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ, ನಗರ ಜಿಲ್ಲೆಗಳ ಬಹುತೇಕ ರೈತರು ಇಂದಿಗೂ ಹೇಳುತ್ತಾರೆ. ಈಗಲೂ ಅವರು ಹೆಚ್ಚಾಗಿ ಬಿತ್ತುವುದು ಇಂಡಾಫಾ ರಾಗಿ ತಳಿಗಳನ್ನೇ. ಇಂಡಾಫ ತಳಿಗಳಿಂದ ರಾಗಿ ಇಳುವರಿ ಜಾಸ್ತಿಯಾದ್ದರಿಂದ ಕಣದಲ್ಲಿನ ರಾಗಿಯ ದೊಡ್ಡದೊಡ್ಡರಾಶಿಗಳಿಂದ ಪಡಿ, ಅಚ್ಚೇರು, ಸೇರು ರಾಗಿದಾನ ಮಾಡುವ ಬದಲು ದೊಡ್ಡರೈತರು ಬಳ್ಳಬಳ್ಳಮೊಗೆದು ಕೃಷಿಕಾರ್ಮಿಕರಿಗೆ, ಕೂಲಿಯಾಳುಗಳಿಗೆ ಕೊಟ್ಟರು.

ಲಕ್ಷ್ಮಣಯ್ಯನವರ ಇಂಡಾಫ ತಳಿಗಳನ್ನೇ ರೈತರು ಇಂದಿಗೂ ಬೆಳೆಯುತ್ತಿದ್ದಾರೆ. ಎಲ್ಲ ಋತುಮಾನಗಳಲ್ಲೂ ಬೆಳೆಯಬಹುದಾದ, ಜತೆಗೆ ಮಳೆಯಾಶ್ರಯ ಹಾಗೂ ನೀರಾವರಿಗೂ ಒಗ್ಗುವ ಇಂಡಾಫ ತಳಿಗಳಿವೆ. ಕೃಷಿವಿವಿಯು ಬಿಡುಗಡೆಮಾಡಿರುವ ಜಿಪಿಯು ಎಂಬ ಸಂಕರಣ ಸರಮಾಲೆಯ ಹೊಸರಾಗಿತಳಿಗಳಿಗೆ ಲಕ್ಷ್ಮಣಯ್ಯನವರ ಇಂಡಾಫ ತಳಿಗಳೇ ಮೂಲಾಧಾರ. ಇಂತಹ ಕೊಡುಗೆಗೆ ಕಾರಣವಾದ ಅಪ್ರತಿಮ ವಿಜ್ಞಾನಿಯನ್ನು ನಾವು ಕೊಂಡಾಡಿದ್ದೇವೆಯೇ? ಅವರಿಗೆ ಸಲ್ಲಬೇಕಿದ್ದ ಗೌರವ, ಪ್ರಶಸ್ತಿಗಳನ್ನು ಕೊಡಲಾಗಿದೆಯೇ?

## ನೆನಪಿನ ಕಾರ್ಯಕ್ರಮಗಳು ಬೇಕು

ರಾಗಿಯನ್ನು 'ತೃಣಧಾನ್ಯ' ಎಂದು ಕರೆಯಲಾಗಿದೆ. ಅದರ ಸಂಶೋಧನೆಯ ವಿಜ್ಞಾನಿಗಳನ್ನು 'ತೃಣ'ವಾಗಿ ಕಾಣಲಾಗುತ್ತಿದೆಯೇ? ಲಕ್ಷ್ಮಣಯ್ಯನವರಿಗೆ ಬಡ್ತಿ ನೀಡಿ 'ಮೆಣಸು ಅಭಿವೃದ್ಧಿ ಅಧಿಕಾರಿ'ಯಾಗಿ ನೇಮಿಸಿದಾಗ, ಅವರುಬಡ್ತಿ ತಿರಸ್ಕರಿಸಿ ರಾಗಿ ಬೆಳೆಯ ಸಂಶೋಧನೆಗೆ ಅಂಟಿ ಕೊಂಡಿದ್ದರ ಹಿಂದೆ ಅಪಾರ ಸಾಮಾಜಿಕ ಕಳಕಳಿಯಿದೆ. ಅವರು ಜನಪರ ವಿಜ್ಞಾನಿ. 'ಹೊಟ್ಟೆ ತುಂಬ ಮುದ್ದೆತಿಂದು, ಬಾಯಿ ತುಂಬ ಅನ್ನಉಣ್ಣಬೇಕು' ಎನ್ನುವುದು ಅವರು ಹೇಳುತ್ತಿದ್ದ ಮಾತು. 'ಸಂಕ್ರಾಂತಿಯ ದಿನದನಗಳ ಕೊಂಬಿಗೆ ಬಣ್ಣಬಳಿದು, ಬೆಂಕಿಯ ಮೇಲೆ ಹಾರಿಸುತ್ತಾರೆ. ದನಗಳಿಗೆ ಬೇಕಿರುವುದು ಹೊಟ್ಟೆ ತುಂಬಾಮೇವು, ಹಿಂಡಿ, ಬೂಸಾ' ಎಂದಿರುವ ಲಕ್ಷ್ಮಣಯ್ಯನವರು ತಾವು ಕಂಡು ಹಿಡಿದರಾಗಿ ತಳಿಗಳಿಂದ

ದನಗಳಿಗೆ ಹೆಚ್ಚಿನ ಪ್ರಮಾಣದ ಮೇವೂಸಿಗುವಂತೆ ಮಾಡಿದ್ದಾರೆ. ಕನಕದಾಸರ 'ರಾಮಧಾನ್ಯಚರಿತೆ'ಯಲ್ಲಿ ಅಕ್ಕಿ ಮತ್ತು ರಾಗಿಗೆ ನಡೆದ ಸಂವಾದದಲ್ಲಿ ರಾಗಿಗೇ ಗೆಲುವು.

'ನನ್ನಮದುವೆ ರಾಗಿಯೊಂದಿಗೆ ನಡೆದುಹೋಗಿದೆ'

ಎಂದು ತಮ್ಮಸೇವಾವಧಿ ಮತ್ತು ತದನಂತರವೂ ಸುಮಾರು ನಾಲ್ಕುದಶಕಕ್ಕೂ ಹೆಚ್ಚುಕಾಲ ಹಗಲಿರುಳೆನ್ನದೆ ರಾಗಿ ಹೊಲದಲ್ಲೇ ಕಾಲವ್ಯಯಿಸಿ, ತಮ್ಮ ಕುಟುಂಬ ಸದಸ್ಯರಶ್ರಮದಾನವನ್ನು ಸಂಜೆಮುಂಜಾವೆನ್ನದೆ ಸಂಶೋಧನೆಗೆ ಬಳಸಿಕೊಂಡ, ಬಡ ಬೋರೇಗೌಡನ ಹೊಟ್ಟೆ ತುಂಬಲು ಮಹತ್ತರ ಸಂಶೋಧನೆ ನಡೆಸಿದ ಲಕ್ಷ್ಮಣಯ್ಯನವರನ್ನು ಕನ್ನಡಿಗರು ಮರೆಯಕೂಡದು. 'ನನಗೆ ಎಂತಹ ದೊಡ್ಡ ಹುದ್ದೆ ಕೊಟ್ಟರೂ, ರಾಗಿ ಸಂಶೋಧನೆಯಲ್ಲೇ ನನಗೆ ಅತ್ಯಂತ ಖುಷಿ' ಎನ್ನುತ್ತಿದ್ದರವರು. ತಮ್ಮ ಅಂತ್ಯಸಂಸ್ಕಾರದ ವೇಳೆ 'ತನ್ನದೇಹದ ಮೇಲೆ ಕೇವಲ ಹಿಡಿರಾಗಿಹಾಕಿ, ಅಷ್ಟೇಸಾಕು' ಎಂದು ಮರಣಕ್ಕೂ ಮೊದಲು ತಮ್ಮ ಶ್ರೀಮತಿಯವರಲ್ಲಿ ನಿವೇದಿಸಿ ಕೊಂಡರು. ರಾಗಿ ವಿಜ್ಞಾನಿಗಳು ಅವರ ತನ್ಮಯತೆ ಹಾಗೂ ಬದ್ಧತೆಯನ್ನು ಮೈಗೂಡಿಸಿಕೊಳ್ಳಬೇಕು. ಅವರ ಅಸಾಧಾರಣ ಸಾಧನೆಗೆ ಸರ್ಕಾರ ಈಗಲಾದರೂ ಮನ್ನಣೆ ನೀಡಬೇಕು. ರಾಗಿ ವಿಜ್ಞಾನಿಯೊಬ್ಬರಿಗೆ ಪ್ರತಿವರ್ಷ 'ರಾಗಿ ಲಕ್ಷ್ಮಣಯ್ಯ ಪ್ರಶಸ್ತಿ' ನೀಡಬೇಕು. ರಾಗಿಲಕ್ಷ್ಮಣಯ್ಯನವರ ಹೆಸರಿನಲ್ಲಿ ಬೆಂಗಳೂರಿನ ಕೃಷಿವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಕೇಂದ್ರವೊಂದನ್ನು ತೆರೆಯುಲಾಗುವುದು ಎಂಬುದು ಮಂತ್ರಿಗಳ ಭಾಷಣದ ಮಾತು ಭರವಸೆಯಾಗಿಯೇ ಉಳಿದಿದೆ. ಅದನ್ನು ಸಾಕಾರಗೊಳಿಸಬೇಕು. ದೇಶದ ಯಾವುದಾದರೊಂದು ಅತ್ಯುನ್ನತ ನಾಗರೀಕಪ್ರಶಸ್ತಿಯನ್ನು ಲಕ್ಷ್ಮಣಯ್ಯನವರಿಗೆ ಮರಣೋತ್ತರವಾಗಿ ನೀಡಬೇಕು. ಇವರು ಕರ್ನಾಟಕದ ಹೆಮ್ಮೆಯ ಪುತ್ರರಷ್ಟೇಅಲ್ಲ, ಭಾರತಮಾತೆಯ ಹೆಮ್ಮೆಯಪುತ್ರ ಎಂಬ ಗೌರವಕ್ಕೆ ಭಾಜನರಾಗಿದ್ದಾರೆ.

* * *

# ಪುರುಷ ಸೂಕ್ತ

– ಜಿ.ಎಸ್.ಎಸ್.

ಇವನಿಗೆ ಕಣ್ ಸಾವಿರ, ಕೈ ಸಾವಿರ, ಕಾಲ್ ಸಾವಿರ,
ತಲೆ ಸಾವಿರ, ನವ ಭಾರತ ಪುರುಷ!
ಎದ್ದು ನಿಂತಿದ್ದಾನೆ ಇಗೋ ಇವನು
ನೆಲದಿಂದ ಆ ಮುಗಿಲತನಕ!

ಕಾಲಡಿಯಲ್ಲಿ ತೊದಲುವ ಕಡಲು; ತಲೆಯಲ್ಲಿ
ಹಿಮ ಶಿಖರಗಳ ಧೀರ ಮೌನ.
ದೇಹಾದ್ಯಂತ ವಿವಿಧ ಜನಪದ, ನರನಾಡಿಯಲಿ
ಮಿಡಿವ ನೆತ್ತರಿನಲ್ಲಿ ಒಂದ ಹೃದಯ.

ಇವನ ಕೈ ಅಲ್ಲಿ ಒತ್ತುವುದು ಶಿಖರಗಳ
ಧುಮ್ಮಿಕ್ಕುವಳು ಗಂಗೆ ನೆಲದುದ್ದ ಹರಿದು!
ಇವನುಸಿರು ಪರಿಮಳ ತಾಗಿ ಮೊಳೆವುದು ಮಣ್ಣು,
ಕೆಚ್ಚಲುಗಳಲಿ ತುಂಬುವುದು ಹಾಲು!

ಇವನು ಕಣ್ ತೆರೆದು ಸಾವಿರ ದೀಪ ಮನೆ ಮನೆಗೆ
ಸ್ನೇಹ–ವಿಶ್ವಾಸ–ಕರುಣೆ–ಪ್ರೀತಿ
ಚಿಕ್ಕಯಕ್ಷರಗಳಲ್ಲಿ ಇವನ ಮಂತ್ರದ ವಾಣಿ,
ಕೆಳಗೆ ಎಡವಿದರೂನು ಇಲ್ಲ ಭೀತಿ.

ಇವನ ಚಂದ್ರನ ಕಿರಣ ಸೋಂಕಲು
ದನಿ ಚಿಗುರಿ ವೀಣೆ ತಂಬೂರಿ, ಕವಿಗೆ ಸ್ಫೂರ್ತಿ
ಇವನ ಭ್ರೂಭಂಗದಿಂದ ರಾಜ್ಯ ಕ್ರಾಂತಿ
ಪತ್ರಿಕೆಯ ಪುಟಗಳಲ್ಲಿ ಅದರ ಕೀರ್ತಿ!

ಇವನ ಕೊರಳಚ್ಚರಿಸುತ್ತಿದ ಬೆಟ್ಟಗಳ ಘಟ್ಟಗಳ,
ಏವಡಯುತಿದ ಶತಮಾನಗಳ ಲೋಹನಿದ್ರೆ!
ಭೂಗರದ ಹೊಳೆಗಳನ್ನು ಅಣೆಕಟ್ಟುಗಳ ಬೆರಳಿನ
ನಿಲ್ಲಿಸಿದ ಇವನ ಕಣ್ ಸನ್ನ!

ಜಲಪಾತಗಳಲ್ಲಿ ಧುಮ್ಮಿಕ್ಕುವುದು ಇವನ ನಗೆ,
ಮಿಂಚುದೀಪದ ತುಟಿಯ ಮಂದಹಾಸ!
ನೂರು ಭೇಡಿಯೊಗಳಲಿ ಇವನ ರಾಗದ ಮೋಡಿ,
ನೂರು ಹೆಜ್ಜೆಗಳಲ್ಲಿ ಇವನ ಗದ್ದೆ!

ಯಂತ್ರಾಟ್ಟಹಾಸಗಳಲ್ಲಿ ಇವನ ಪೌರುಷ ಮೊಳಗು
ಎಲ್ಲ ಕಟ್ಟಡಗಳಲಿ ಇವನ ಹೆಸರು!
ಸಂಶೋಧನಾಲಯದ ಮೌನ ಸಾಧನೆಗಳಲ್ಲಿ
ಲಾಳಿಯಾಡುವುದಿವನ ಸ್ಫೂರ್ತಿಯುಸಿರು!

ಗಡಿಯಾರ ತಿರುಗುವುದು ಇವನಿಂದ ನೌಕ
ಎದೆಯುಬ್ಬಿ ತೇಲುವುದು ಇವನಿಂದ
ಗಡಿಕಾಯ್ಕು, ಕಣ್ಣಿಗೆಚ್ಚರಿಕೆ ಇವನಿಂದ,
ವಿಮಾನದ ರೆಕ್ಕೆ ಹಾರುವುದೆ ಇವನಿಂದ.

ಇವನಿಗೆ ಕಣ್ ಸಾವಿರ, ಕೈ ಸಾವಿರ, ಕಾಲ್ ಸಾವಿರ,
ತಲೆ ಸಾವಿರ, ನವಭಾರತ ಪುರುಷ.
ಒಬ್ಬೊಬ್ಬನದೆಯಲ್ಲು ಎದ್ದು ನಿಂತಿದ್ದಾನೆ ಇವನು
ನೆಲದಿಂದ ಆ ಮುಗಿಲ ತನಕ!

* * *

# ತಾಯಿ ತೆರೇಸಾ

– ಸೌ. ಶಾಂತಾದೇವಿ ಮಾಳವಾಡ

ಈ ಜಗತ್ತಿನಲ್ಲಿ ಜೀವಿಸುವ ಪ್ರತಿಯೊಬ್ಬರಿಗೆ ಅನ್ನ, ಬಟ್ಟೆ, ವಸತಿ ಅತ್ಯಾವಶ್ಯಕ. ಆದರೆ ಭಾರತ ದೇಶದಲ್ಲಿ ಈ ಮೂರರ ಅಭಾವದಿಂದ ಹಾದಿ, ಬೀದಿಗಳಲ್ಲಿ ಲಕ್ಷಾಂತರ ಜನ ಜೀವಿಸುತ್ತಿದ್ದಾರೆ. ಕಲ್ಕತ್ತಾ, ಮುಂಬೈ, ಮದ್ರಾಸ್, ಬೆಂಗಳೂರಂಥ ಜನದಟ್ಟಣೆಯ ಪಟ್ಟಣಗಳಲ್ಲಿ ವಾಸಕ್ಕೆ ಮನೆಯಿಲ್ಲದೆ, ಹೊಟ್ಟೆತುಂಬ ಅನ್ನವಿಲ್ಲದೆ, ಮೈತುಂಬ ಬಟ್ಟೆಯಿಲ್ಲದೆ ರೋಗಾದಿಗಳಿಂದ ಬಳಲುತ್ತ ಕಾಲುದಾರಿಯ ಮೇಲೆ ಬಾಳನ್ನು ಸಾಗಿಸುತ್ತಿರುವ ಸಹಸ್ರಾರು ಜನರನ್ನು ಕಾಣಬಹುದಾಗಿದೆ. ಸಿರಿವಂತರ ನಾಯಿಗಳು ಬ್ರೆಡ್, ಬಿಸ್ಕೀಟ, ಹಾಲು ಸೇವಿಸಿ ಕಾರಿನಲ್ಲಿ ಕುಳಿತು ತಿರುಗಾಡುವದನ್ನೂ, ನಿರ್ಗತಿಕ ರೋಗಿಷ್ಠರು ಕುಡಿಯುವ ನೀರಿಗೂ ಗತಿಯಿಲ್ಲದೆ ಒದ್ದಾಡುತ್ತ ಪ್ರಾಣಬಿಡುವುದನ್ನೂ ಕಾಣಬಹುದಾಗಿದೆ. ಕಲಕತ್ತಾ ನಗರದಲ್ಲಿ ಇಂಥ ದೃಶ್ಯಗಳನ್ನು ಹಲವಾರು ಸಲ ಕಂಡು ಕನಿಕರಗೊಂಡ ತಾಯಿ ತೆರೇಸಾ ದೀನ–ದುರ್ಬಲರ ಸೇವೆಗೆ ಕಂಕಣ ಬದ್ಧರಾದರು. ನಿರ್ಗತಿಕರಿಗೆ, ಮೃತ್ಯು ಮುಖದಲ್ಲಿರುವವರಿಗೆ ತಾಯ ವಾತ್ಸಲ್ಯದ ಅಮೃತ ಸಿಂಚನಗೈಯ್ಯುವ ತೆರೇಸಾ ಕರುಣಾನಿಧಿಯಾಗಿದ್ದಾರೆ. ಚೈತನ್ಯದ ಚಿಲುಮೆಯಾಗಿದ್ದಾರೆ. ಸೇವೆಯ ಸಾಕಾರ ಮೂರ್ತಿಯಾಗಿದ್ದಾರೆ.

ಭಾರತ ದೇಶಕ್ಕೆ ಸ್ವಾತಂತ್ರ್ಯದೊರೆತ ಸಂದರ್ಭದಲ್ಲಿ ದೇಶ ಇಬ್ಭಾಗವಾಯಿತು. ಜಾತೀಯ ಗಲಭೆಗಳು ನಡೆದವು. ಸಾವಿರಾರು ಜನ ಮಹಿಳೆಯರು ಅತ್ಯಾಚಾರಕ್ಕೊಳಪಟ್ಟರು. ದೈಹಿಕ, ಮಾನಸಿಕ ಯಾತನೆಗೊಳಪಟ್ಟ ಮಹಿಳೆಯರ ಆರ್ತನಾದ ಪಂಜಾಬ, ಬಂಗಾಲಗಳನ್ನು ನಡುಗಿಸಿತು. ಅನಾಥ ಮಕ್ಕಳ ರೋದನ ಗಗನಕ್ಕೇರಿತು, ಮಾನವೀಯತೆ ನಾಶವಾಗಿ, ರಾಕ್ಷಸೀಗುಣದ ತಾಂಡವನೃತ್ಯ ನಡೆದುದನ್ನು ಕಂಡವರು, ಕೇಳಿದವರು ನಡುಗಿದರು. ಅಂತಹ ಸಮಯದಲ್ಲಿ ನೊಂದವರ ಕಣ್ಣೀರನೊರೆಸಲು, ಆಶ್ರಯ ನೀಡಲು, ಸೇವಾದೀಕ್ಷೆ ಪಡೆದು ಕ್ರಿಸ್ತನ ಕರುಣೆಯೇ ಮೈವೆತ್ತಿ ಬಂದಂತೆ ಬಂದರು ತಾಯಿ ತೆರೇಸಾ.

ಯುಗೋಸ್ಲೋವಿಯಾ ದೇಶದ ಸ್ಕೊಪ್ಪೆ ಎಂಬ ಹಳ್ಳಿಯಲ್ಲಿ, ಕ್ಯಾಥೊಲಿಕ್ ಕ್ರೈಸ್ತ ಕುಟುಂಬದ ನಿಕೋಲಸ್ ಹಾಗೂ ರೋಜ಼್ ದಂಪತಿಗಳಿಗೆ 1910 ಆಗಸ್ಟ್ 27ರಂದು ಹೆಣ್ಣು ಮಗು ಜನಿಸಿತು. ಪ್ರೀತಿಯ ಜ್ಯೋತಿಯಂಥ ಕೊಳೆವ ಕಣ್ಣು,

ಸದೃಢ ಶರೀರದ ಮಗುವಿಗೆ ಆಗ್ನೇಸ ಎಂದು ಹೆಸರಿಟ್ಟರು. ತಂದೆ–ತಾಯಿಯರ ಅಕ್ಕರೆಯ ಆರೈಕೆಯಲ್ಲಿ ಮಗು ಅರಳುವ ಹೂವಿನಂತೆ ಮಗಳು ದೊಡ್ಡವಳಾದಂತೆ, ತಂದೆ, ತಾಯಿಯರ ಜೊತೆ ಚರ್ಚಿಗೆ ಹೋಗಹತ್ತಿದಳು. ಮನೆಯ ಧಾರ್ಮಿಕ ವಾತಾವರಣದಲ್ಲಿ ಬೆಳೆಯಹತ್ತಿದಳು. ಶಾಲೆಗೆ ಹೋಗಲು ಪ್ರಾರಂಭಿಸಿದಳು, ಶಾಲೆಯಲ್ಲಿ ಅಕ್ಷರಾಭ್ಯಾಸದ ಜೊತೆಗೆ ಧಾರ್ಮಿಕ ಶಿಕ್ಷಣವೂ ದೊರೆಯಿತು. "ಬಡತನ, ರೋಗ, ಅಜ್ಞಾನ ಮೊದಲಾದ ಕಷ್ಟಗಳಲ್ಲಿ ಬಳಲುವ ಮಾನವಕೋಟಿಯ ಸೇವೆಯೇ ಭಗವಂತನ ಆರಾಧನೆ" ಎಂಬ ಬೈಬಲ್ಲಿನ ವಾಕ್ಯ ಮಗುವಿನ ಮನದಾಳದಲ್ಲಿ ನೆಲೆಗೊಂಡಿತು. ನರ ನರದಲ್ಲಿ ಮಿಡಿಯಿತು. ಉಂಡುಟ್ಟು ಸುಖವಾಗಿದ್ದ ರೈತ ಕುಟುಂಬದಲ್ಲಿ ಬೆಳೆಯುತ್ತಲಿದ್ದರೂ ಆಗ್ನೇಸಳ ಮನ ದೀನ– ದುರ್ಬಲರ ಸೇವೆಗೆ ಹಾತೊರೆಯುತ್ತಿತ್ತು. ಹನ್ನೆರಡು ವರುಷದಳಾದೊಡನೆ ತನ್ನ ಜೀವನವನ್ನು ಬಡವರ ಸೇವೆಗೆ ಮೀಸಲಾಗಿಡಬೇಕು ಎಂಬ ಸಂಕಲ್ಪ ಮಾಡಿದಳು, ಮತಬೋಧಕಳಾಗಬೇಕು, ಕ್ರಿಸ್ತನ ಸಂದೇಶವನ್ನು ಎಲ್ಲೆಡೆ ಬೀರಬೇಕು ಎಂಬ ಆಗ್ನೇಸಳ ಆಸೆ ದಿನ ದಿನಕ್ಕೆ ಬೆಳೆಯಹತ್ತಿತು. ಶಾಲೆಯಲ್ಲಿ ಕ್ಯಾಥೊಲಿಕ್ ಧಾರ್ಮಿಕ ಸಂಸ್ಥೆಯ ಸದಸ್ಯಳಾಗಿದ್ದಳು. ಆ ಭಾಗದಿಂದ ಧರ್ಮ ಪ್ರಚಾರಕ್ಕಾಗಿ ಉತ್ತರಭಾರತಕ್ಕೆ ಹೋದವರು ಶಾಲೆಗೆ ಪತ್ರ ಬರೆಯುತ್ತಿದ್ದರು. ಶಿಕ್ಷಕರು ಆ ಪತ್ರಗಳನ್ನು ಶಾಲೆಯಲ್ಲಿ ಓದಿ ಹೇಳುತ್ತಿದ್ದರು. ಕಲಕತ್ತೆಯ ಬಡತನ ಹಾಗೂ ದೀನದಲಿತರ ವ್ಯಥೆಯ ಕತೆಯನ್ನು ಕೇಳಿದ ಆಗ್ನೇಸಳ ಹೃದಯ ಮರುಕಗೊಂಡಿತು. ಆಕೆಯ ಸಮವಯಸ್ಕರು ದಾಂಪತ್ಯ ಜೀವನದ ಹೊಂಗನಸನ್ನು ಕಾಣುತ್ತಿರುವಾಗ ಆಗ್ನೇಸ ಸೇವಾದೀಕ್ಷೆ ಪಡೆದಳು. ಸನ್ಯಾಸಿನಿಯಾದಳು. ಹೊರದೇಶಗಳಿಗೆ ಹೋಗಿ ಕ್ರಿಸ್ತನ ಸಂದೇಶ ಸಾರುವ ಸಲುವಾಗಿ ಇಂಗ್ಲೀಷ ಭಾಷೆಯನ್ನು ಕಲಿತಳು. ಸಕಲರಿಗೆ ಸುಖ–ಶಾಂತಿಯನ್ನು ಬಯಸುವ ಕ್ರಿಸ್ತನಿಗೆ ಸಂಪೂರ್ಣವಾಗಿ ತನ್ನನ್ನು ಸಮರ್ಪಿಸಿಕೊಂಡಳು. ಕ್ರಿಸ್ತನ ಸಂದೇಶವನ್ನು ಸಾರುವ ಸಂಭ್ರಮದಲ್ಲಿ ಒಲವಿನ ತಂದೆ–ತಾಯಿಗಳನ್ನು, ಬಂಧು–ಬಾಂಧವರನ್ನು, ತಾಯ್ನಾಡನ್ನು ತೊರೆದು 1928ರಲ್ಲಿ ಐರಲ್ಯಾಂಡಿಗೆ ಹೊದಳು. ಆತ್ಮೀಯ ಬಂಧನಗಳನ್ನು ಕಿತ್ತೊಗೆದು, ಮನದಲ್ಲಿ ಸೇವೆಯ ಹಂಬಲವನ್ನು ತುಂಬಿಕೊಂಡಳು. ಡಬ್ಲಿನ್‌ನಲ್ಲಿರುವ ಲಾರೆಟೊ ಸನ್ಯಾಸಿನಿಯರ ಶಿಕ್ಷಣ ಕೇಂದ್ರದಲ್ಲಿ ಐದುವಾರ ಶಿಕ್ಷಣ ಪಡೆದಳು.

1929ರಲ್ಲಿ ಆಗ್ನೇಸ ಭಾರತಕ್ಕೆ ಬಂದು ಕೆಲಕಾಲ ಹಿಮಾಲಯದ ಮಡಿಲಲ್ಲಿರುವ ಕ್ರೈಸ್ತ ಧಾರ್ಮಿಕ ಶಿಕ್ಷಣ ಕೇಂದ್ರದಲ್ಲಿ ಶಿಕ್ಷಣ ಪಡೆದಳು, ನಂತರ

ಕಲಕತ್ತಾದ ಇಂಟಾಲಿಯ ಚರ್ಚ್‌ನ ಸನಿಹದಲ್ಲಿದ್ದ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾದಳು. ಚರ್ಚ್ ಹಾಗೂ ಶಾಲೆಯ ವಾತಾವರಣ ಶಾಂತವಾಗಿತ್ತು. ಸುತ್ತಲೂ ಸುಂದರವಾದ ಹೂವಿನ ಗಿಡ ಬಳ್ಳಿಗಳಿದ್ದವು. ಆದರೆ ಆ ಕಟ್ಟಡಗಳ ಸುತ್ತಲೂ ಕೊಳಚೆ ಪ್ರದೇಶವಿತ್ತು. ಅದು ಒಡತನ, ರೋಗ ರುಜಿನಗಳ ತವರೂರಾಗಿತ್ತು. ಅಲ್ಲಿಯ ಜೀವನವನ್ನು ಕಂಡಾಗಲೆಲ್ಲ ಆಗ್ನೇಸಳ ಮನ ತಲ್ಲಣಿಸುತ್ತಿತ್ತು. ಆ ಹತ್ತುವರುಷ ಶಿಕ್ಷಕ ಕೆಲಸ ಮಾಡುತ್ತಾ, ಧಾರ್ಮಿಕ ಜೀವನದಲ್ಲಿ ಮಗ್ನಳಾಗಿದ್ದಳು. ಡಾರ್ಜಲಿಂಗ್ ಶಿಕ್ಷಣ ಕೇಂದ್ರದಲ್ಲಿ ಮೊದಲ ಧಾರ್ಮಿಕ ಪ್ರತಿಜ್ಞೆ ಸ್ವೀಕರಿಸಿದಾಗ ಆಕೆಗೆ **ತೆರೇಸಾ** ಎಂದು ನಾಮಕರಣವಾಯಿತು. 1932 ರಲ್ಲಿ ಕೊನೆಯ ದೀಕ್ಷೆ ಪಡೆದು ಹಿರಿಯ ಸೋದರಿ (ನನ್) ಆದರು. ಅನಂತರ ವರ್ಷಗಳಲ್ಲಿ ಎಲ್ಲರೂ ತಾಯಿ ತೆರೇಸಾ ಎಂದು ಕರೆಯಹತ್ತಿದರು. ಆಗ ಕಲಕತ್ತಾದ ಇಂಟಾಲಿಯದಲ್ಲಿ ಸಂನ್ಯಾಸಿನಿಯರ ಸಂಘವೊಂದು ಆಸ್ಪತ್ರೆಗಳಲ್ಲಿ ಬಳಲುತ್ತಿರುವ ಬಡರೋಗಿಗಳಿಗೆ ಸೇವೆ ಸಲ್ಲಿಸುವ ಕಾರ್ಯಕೈಗೊಂಡಿದ್ದರು. ತಾಯಿ ತೆರೇಸಾ ಈ ಸಂಘದ ಸದಸ್ಯರಾಗಿದ್ದರು. ಶಾಲೆಯ ಕೆಲಸದಲ್ಲಿ ಬಿಡುವು ಮಾಡಿಕೊಂಡು ಆಸ್ಪತ್ರೆಗಳಿಗೆ ಹೋಗಿ ರೋಗಿಗಳ ಸೇವೆ ಮಾಡುತ್ತಿದ್ದರು.

ತೆರೇಸಾ ತಾಯಿಯ ಅಂತಃಕರಣದಿಂದ ರೋಗಿಗಳನ್ನು ಮಾತಾಡಿಸಿ, ಉಪಚರಿಸಿದಾಗ ಆ ನೊಂದಜೀವಿಗಳ ಮುಖದಲ್ಲಿ ಕಾಣುವ ಸಂತೃಪ್ತಿಯ ಮುಗುಳ್ನಗೆಯಿಂದ ಅವರಿಗೆ ಆನಂದವೆನಿಸುತ್ತಿತ್ತು. ಪ್ರತಿ ಶನಿವಾರ ಮಧ್ಯಾಹ್ನ ತೆರೇಸಾ ಕೊಳಚೆ ಪ್ರದೇಶಗಳಿಗೆ, ಆಸ್ಪತ್ರೆಗಳಿಗೆ ಹೋಗಿ ಸಹಾಯ ಸಲ್ಲಿಸುವುದನ್ನು ಕಂಡು ನೆರೆಹೊರೆಯ ಹೆಂಗೆಳೆಯರೂ ಸಹಾಯ ಮಾಡುತ್ತಿದ್ದರು. ನಿರ್ಗತಿಕರ ಹಾಗೂ ರೋಗಿಗಳ ಸೇವೆಯನ್ನು ಮಾಡಬೇಕೆಂಬ ಅಪೇಕ್ಷೆಯಿಂದ ಕಾನ್ವೆಂಟನ್ನು ಬಿಟ್ಟು ಹೊರಗೆ ಬಂದಾಗ ತೆರೇಸಾ ಅವರಿಗೆ ಅನಿಸಿತು "ನಾವು ಮೊದಲು ವೈದ್ಯಕೀಯ ಜ್ಞಾನವನ್ನು ಪಡೆಯಬೇಕು." ಎಂದು ಅದಕ್ಕಾಗಿ ತೆರೇಸಾ ಪಾಟ್ನಾಕ್ಕೆ ಹೋದರು. ಅಲ್ಲಿ ಮೆಡಿಕಲ್ ಮಿಷನರಿ ಸಿಸ್ಟರ್ಸ್ ಸಂಸ್ಥೆಯಲ್ಲಿ ನರ್ಸಿಂಗ್ ಶಿಕ್ಷಣ ಪಡೆದರು. ವೈದ್ಯಕೀಯ ಸಾಮಾನ್ಯ ಜ್ಞಾನವನ್ನು ಪಡೆದುಕೊಂಡು ಕಲ್ಕತ್ತೆಗೆ ಬಂದರು.

ಕಲ್ಕತ್ತಾದ ಮೋತಿಜಿಲ್ ಕೊಳಚೆ ಪ್ರದೇಶದಲ್ಲಿ 5 ರೂ ಬಾಡಿಗೆಗೆ ಒಂದು ಕೋಣೆಯನ್ನು ಹಿಡಿದರು. ಕೊಳಚೆ ಪ್ರದೇಶದ ಮಕ್ಕಳಿಗೆ ಶಿಕ್ಷಣ ಕೊಡುವ ಮೂಲಕ ಕಾರ್ಯ ಪ್ರಾರಂಭಿಸಲು ಆಶಿಸಿದರು. ಶಾಲೆಗೆ ಕಟ್ಟಡವಿಲ್ಲ. ಖರ್ಚಿ

ಮೇಜುಗಳಿಲ್ಲ. ಒಂದು ಗಿಡದ ಕೆಳಗೆ ಐದು ಮಕ್ಕಳನ್ನು ಕೂಡಿಸಿ ಅಕ್ಷರಾಭ್ಯಾಸ ಪ್ರಾರಂಭಿಸಿದರು. ಬರೆಯಲು ಪಾಟಿ–ಪೆನ್ಸಿಲ್ ಇಲ್ಲ. ಕೋಣೆಯ ಮುಂಭಾಗದ ಅಂಗಳದಲ್ಲಿರುವ ಉಸುಕಿನ ಮೇಲೆ ಬೆರಳಿನಿಂದ ಬೆಂಗಾಲಿ ಅಕ್ಷರ ಬರೆಯಲು ಕಲಿಸಹತ್ತಿದು ಈ ದೃಶ್ಯವನ್ನು ಕಂಡ ಉದಾರ ಹೃದಯದವರೊಬ್ಬರು ಮರುದಿನವೇ ಒಂದು ಟೇಬಲ್, ಖುರ್ಚಿ, ಕಪಾಟುಗಳನ್ನು ಶಾಲೆಗೆ ದೇಣಿಗೆಯಾಗಿ ಕೊಟ್ಟರು. ತೆರೇಸಾ ಕೊಳಚೆ ಪ್ರದೇಶದ ಮಕ್ಕಳ ತಲೆ ಬಾಚುತ್ತಿದ್ದರು. ಸ್ನಾನ ಮಾಡಿ ಶಾಲೆಗೆ ಬರಲು ಹೇಳುತ್ತಿದ್ದರು. ಸ್ನಾನ ಮಾಡಿ ಬರುವ ಮಕ್ಕಳಿಗೆ ಚಿಕ್ಕ ಸಾಬೂನನ್ನು ಬಹುಮಾನವಾಗಿ ಕೂಡುತ್ತಿದ್ದರು. ಶಾಲೆಗೆ ಬರುವ ಮಕ್ಕಳಿಗೆ ಒಂದು ಲೋಟಾ ಹಾಲು 1 ಕೊಡಲು ಪ್ರಾರಂಭಿಸಿದರು. ಹಳಸಿದ ಅನ್ನಕ್ಕೂ ಗತಿಯಿಲ್ಲದ ಮಕ್ಕಳು ಹಾಲಿನ ಆಸೆಗಾಗಿ ಒಬ್ಬೊಬ್ಬರೇ ಬರಹತ್ತಿದರು. ಕೆಲದಿನಗಳಲ್ಲಿಯೇ ಮಕ್ಕಳ ಸಂಖ್ಯೆ 35ಕ್ಕೆ ಏರಿತು. ತಾಯಿ ತೆರೇಸಾರ ನೈತಿಕ ಧೈರ್ಯ, ಸಾದಾ ಸರಳ ಜೀವನ ವಿಶಾಲ ಹೃದಯ ಕಲಕಿಯನ್ನು ಹೊರಸೂಸುವ ಕಣ್ಣುಗಳನ್ನು ಕಂಡೊಡನೆ ಪ್ರತಿಯೊಬ್ಬರ ಹೃದಯದಲ್ಲಿ ಭಕ್ತಿ–ಗೌರವಗಳು ಮೂಡಿ ಬರುತ್ತವೆ. ತಾಯಿ ತೆರೇಸಾ ಅವರ ಆತ್ಮಶಕ್ತಿ, ದೈವಭಕ್ತಿ, ಸೇವಾ ವ್ಯಕ್ತಿಯನ್ನು ಕಂಡು ಸಾವಿರಾರು ಜನರು ಜಗತ್ತಿನಾದ್ಯಂತ ಸೇವೆ ಸಲ್ಲಿಸುತ್ತಲಿದ್ದಾರೆ. ತೆರೇಸಾ ಅವರ ಕಾರ್ಯದ ಉದ್ದೇಶ ಕ್ರಿಸ್ತನ ಕರುಣೆಯ ಸಂದೇಶವನ್ನು ಕಾರ್ಯರೂಪದಲ್ಲಿ ತರುವರು, ದೀನ–ದುರ್ಬಲರ ಸೇವೆಯಲ್ಲಿ ಕ್ರಿಸ್ತನನ್ನು ಕಾಣುವುದಾಗಿದೆ.

ಕಲಕತ್ತಾದ ಓರ್ವ ಪ್ರಸಿದ್ಧ ಡಾಕ್ಟರರ ಬಳಿ ಶ್ರೀಮಂತರೊಬ್ಬರು ತಮ್ಮ ಮಗಳೊಂದಿಗೆ ಬಂದರು ಗರ್ಭಿಣಿಯಾಗಿರುವ ಆ ಅವಿವಾಹಿತೆಯ ಬಾಣಂತನ ವಾಗಬೇಕು. ಆ ಮಗು ಮಾತ್ರ ತನಗೆ ಬೇಡ, ಆ ಮಗುವಿನ ರಕ್ಷಣೆಯ ಖರ್ಚು ಕೊಡುತ್ತೇವೆ ವ್ಯವಸ್ಥೆ ಮಾಡಿರಿ ಎಂದರು. ಆಗ ಆ ಡಾಕ್ಷರರಿಗೆ ಕರುಣಾಮಯಿ ತಾಯಿ ತೆರೇಸಾರ ನೆನಪಾಯಿತು. ಅವರ ನಿವಾಸಕ್ಕೆ ಹೋದರು. ಆಗ ತೆರೇಸಾ ಊರಲ್ಲಿರಲಿಲ್ಲ. ಅವರ ಸಹಾಯಕರು ನಾವು ಮಗುವನ್ನು ಸಾಕುತ್ತೇವೆ ಎಂದರು ಆ ತಾಯಿ. ಮಗುವಿನ ಜನನವಾದ ಮೇಲೆ ಡಾಕ್ಟರ್ ಆ ಮಗುವನ್ನು ಶಿಶುಭವನಕ್ಕೆ ಒಪ್ಪಿಸಿದರು. ಈ ಸೇವಾಭಾವನೆಗೆ ಮಾರುಹೋದ ಡಾಕ್ಟರರು ತೆರೇಸಾ ಅವರ ಸಂಸ್ಥೆಗೆ ಹಲವಾರು ವಿಧದ ಸಹಾಯ ಸಲ್ಲಿಸುತಿದ್ದಾರೆ. ತೆರೇಸಾರವರ ಕಾರ್ಯವ್ಯಾಪ್ತಿ ಬೆಳೆದಂತೆ ರಾಜ್ಯ ಸರಕಾರ, ಕೇಂದ್ರ ಸರಕಾರ, ಧಾರ್ಮಿಕ ಸಂಘ–ಸಂಸ್ಥೆಗಳು, ಸಾರ್ವಜನಿಕರು ಸಹಾಯ ಸಹಕಾರವನ್ನು ಒದಗಿಸುತ್ತಿದ್ದಾರೆ.

ಕಲಕತ್ತೆಯಿಂದ 20 ಕಿಲೊಮಿಟರ್ ದೂರದಲ್ಲಿರುವ 'ಟಿಟಾಘರ'ದಲ್ಲಿ ತಾಯಿ ತೆರೇಸಾ ಕುಷ್ಠರೋಗಿಗಳಿಗಾಗಿ "ಗಾಂಧೀಜಿ ಪ್ರೇಮನಿವಾಸ" ಸ್ಥಾಪಿಸಿದ್ದಾರೆ. ಭಾರತದಲ್ಲಿ ಸುಮಾರು 35 ಲಕ್ಷ ಕುಷ್ಠರೋಗಿಗಳಿರುವಂತೆ, ವಾತಾವರಣದಲ್ಲಿಯ ಅಶುದ್ಧ ಹವೆ, ಅಸ್ವಚ್ಛತೆ ಅಭಾವದಿಂದ ಈ ರೋಗ ದಿನದಿನಕ್ಕೆ ಬೆಳೆಯುತ್ತಿದೆ. ಇಂದಿನ ವಿಜ್ಞಾನಯುಗದಲ್ಲಿಯೂ ಕುಷ್ಠರೋಗಕ್ಕೆ ಸಂಪೂರ್ಣ ನಿವಾರಣೋಪಾಯ ಇದುವರೆಗೆ ದೊರೆತಿರಲಿಲ್ಲ. ಈ ರೋಗದಿಂದ ಅಂಗವಿಕಲರಾಗಿ, ವಿಕಾರವಾಗಿ ಕಾಣುವ ಮಾನವರನ್ನು ಮಾನವರೇ ತಿರಸ್ಕರಿಸುವಂಥ ಪರಿಸ್ಥಿತಿ ಬಂದಿದೆ. ಅಂಥ ತಿರಸ್ಕೃತರು ಸಹ ತೆರೇಸಾರ ಅಂತಃಕರಣದ ರಕ್ಷಣೆಯಿಂದ ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದಾರೆ. ಈ ಕೇಂದ್ರಗಳಲ್ಲಿ ಕುಷ್ಠರೋಗಿ ಗಳಿಗಾಗಿ ಕೈಗಾರಿಕಾ ಕೇಂದ್ರವನ್ನು ತೆರೆದಿದ್ದಾರೆ. ಅಲ್ಲಿ ನೇಯ್ದೆ ಕೆಲಸ, ಕಟ್ಟಿಗೆ ಕೆಲಸ, ನಾರು ಹಾಗೂ ಚಿತ್ರದ ಕೆಲಸವನ್ನು ಮಾಡುತ್ತಾರೆ, ಕುಷ್ಠ ರೋಗಿಗಳ ಸಂಖ್ಯೆ ಅತಿ ಹೆಚ್ಚಾದುದನ್ನು ಕಂಡ ತೆರೇಸಾ, ಅವರಿಗಾಗಿ ಸಹಾಯ ಸಲ್ಲಿಸುವ ಸಲುವಾಗಿ ಹಣ ಸಂಗ್ರಹಿಸಲು ನಿರ್ಧರಿಸಿದರು. ತಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಸೋದರಿಯರೊಂದಿಗೆ ನಾದಯಾತ್ರೆ ಕೈಕೊಂಡರು, ಆಗ ಹಣದ ಹೊಳೆಯೇ ಹರಿದು ಬಂದಿತು.

ಕಾಲಿಂಪಾಂಗದಲ್ಲಿ ತೆರೇಸಾ ಒಂದು ಶಾಖೆಯನ್ನು ಪ್ರಾರಂಭಿಸಿದರು. ಆಗ ತೆರೇಸಾ ಕೆಲವು ಸೋದರಿಯರನ್ನು ಅಲ್ಲಿಗೆ ಕಳುಹಿಸಿದರು. ಅವರು ಹೋಗುವಾಗ ಬಡವರಿಗಾಗಿ ಹಂಚಲು ಜನರಿಂದ ಕಾಣಿಕೆಯಾಗಿ ಬಂದ ಹಾಸಿಗೆ–ಹೊದಿಕೆ ಉಣ್ಣೆಯ ಸ್ವೆಟರ್ ಮೊದಲಾದವುಗಳ ದೊಡ್ಡ ಗಂಟು ಮೂಟೆಗಳಿದ್ದವು. ಅವುಗಳನ್ನು ಸೋದರಿಯರೇ ಹೊತ್ತೊಯ್ದರು. ಆಗ ಬಳಿ ಇದ್ದವರಿಗೆ ತೆರೇಸಾ ನಗುತ್ತ ಹೇಳಿದರು: ನಮ್ಮ ಸಾಮಾನು ಎಷ್ಟೇ ಭಾರವಾಗಿದ್ದರೂ ನಾವು ಎಂದೂ ಕೂಲಿಗಳನ್ನು ಕರೆಯುವುದಿಲ್ಲ. ನಾವೇ ಹೊತ್ತೊಯ್ಯುವವು. ಜನ ನಮಗೆ ಕೂಲಿ ಸಿಸ್ಟರ್ ಎನ್ನುವರು ಎಂದರು.

1979ರಲ್ಲಿ ತಾಯಿ ತೆರೇಸಾರಿಗೆ ನೋಬೆಲ್ ಶಾಂತಿ ಬಹುಮಾನ ದೊರೆಯಿತು. ಭಾರತದ ನಾಗರಿಕತೆಯನ್ನು ಪಡೆದ ಭಾರತದ ಮಾನಸಪುತ್ರಿ ತೆರೇಸಾ ಅವರಿಗೆ ನೋಬೆಲ್ ಬಹುಮಾನ ದೊರೆತ ಸಮಾಚಾರದಿಂದ ಭಾರತೀಯರೆಲ್ಲ ಸಂತಸಪಟ್ಟರು. ಪತ್ರಕರ್ತರ, ಛಾಯಾಗ್ರಾಹಕರ ದೊಡ್ಡ ಗುಂಪು ಅವರ ಬಳಿ ಬಂದಿತು. ಆಗಲೂ ಅವರು ರೋಗಿಗಳ ಸೇವೆಯಲ್ಲಿ ನಿರತರಾಗಿದ್ದರು. ಛಾಯಾಚಿತ್ರಕಾರರು ಅವರ ಭಾವ ಚಿತ್ರಗಳನ್ನು ತೆಗೆಯಲು ಬಂದಾಗ ತೆರೇಸಾ

ಹೇಳಿದರು–ಮೊದಲು ಇಲ್ಲಿ ಕೆಲಸ ಮಾಡುವ ಸೋದರಿಯರ ಭಾವಚಿತ್ರ ತೆಗೆಯಿರಿ. ಈ ಶ್ರೇಯಸ್ಸಿಗೆ ಅವರ ಸೇವೆಯ ಕಾರಣ ಎಂದರು. ನೋಬೆಲ್ ಶಾಂತಿ ಪಾರಿತೋಷಕ ಪಡೆಯಲು ತೆರೇಸಾ ಅವರು ನಾರ್ವೆದೇಶಕ್ಕೆ ಹೋಗಬೇಕಾಯಿತು. ಅಲ್ಲಿ ಪಾರಿತೋಷಕ ಪಡೆಯುವವರ ಜೊತೆಗೆ 100 ಜನ ಪ್ರತಿಷ್ಠಿತರನ್ನು ಊಟಕ್ಕೆ ಆಮಂತ್ರಿಸುವ ಪರಿಪಾಠವಿದೆ. ಆ ಊಟಕ್ಕೆ 30,000ರೂ ಖರ್ಚು ಮಾಡುತ್ತಿದ್ದರು. ಅದನ್ನರಿತ ತೆರೇಸಾ ಸಮಿತಿಯವರಿಗೆ ಪತ್ರ ಬರೆದರು, "ನೋಬೆಲ್ ಔತಣ ಕೂಟ ನನಗೆ ಬೇಡ. ಅನ್ನವಿಲ್ಲದೆ ಸಂಕಟಪಡುತ್ತಿರುವವರಿಗಾಗಿ ಆ ಹಣವನ್ನು ಖರ್ಚು ಮಾಡುತ್ತೇನೆ" ಎಂದು. ಆ ಸಮಿತಿಯವರು ಹಾಗೇ ಮಾಡಿದರು. ಐದು ರೂಪಾಯಿಗಳಿಂದ ಕೊಳಚೆ ಪ್ರದೇಶದಲ್ಲಿ ಸೇವಾಕಾರ್ಯ ಪ್ರಾರಂಭಿಸಿದ ತೆರೇಸಾ ಕರುಣೆ ಪ್ರೀತಿ ವಾತ್ಸಲ್ಯಗಳ ಸಾಕಾರಮೂರ್ತಿ ಮಕ್ಕಳ ಮಮತೆಯ ಮಾತೆ ರೋಗಿಗಳಿಗೆ ಕರುಣೆಯ ಮೂರ್ತಿ ಕಾರ್ಯಕರ್ತರಿಗೆ ಸ್ಫೂರ್ತಿಯಾಗಿದ್ದಾರೆ ಸರ್ವರಿಗೂ ದಾರಿದೀಪವಾಗಿದ್ದಾರೆ.

* * *

# ಕಳೆದುಹೋದ ಒಂಟೆ ಮತ್ತು ಆತ್ಮತೃಪ್ತಿ

**– ಡಾ. ಜೆ. ಬಾಲಕೃಷ್ಣ**

ಬಾಲ್ಕನ ಸುಲ್ತಾನ ಇಬ್ರಾಹಿಂ ಆದಮ್ ಒಂದು ದಿನ ತನ್ನ ಸುಖಾಸನದಲ್ಲಿ ಕುಳಿತು ವಿರಮಿಸುತ್ತಾ ಅಲ್ಲಾಹ್‌ನ ಜಿಕ್ರ್(ಧ್ಯಾನ) ಮಾಡುತ್ತಾ ಸತ್ಯಾನ್ವೇಷಣೆಯ ಪ್ರಯತ್ನ ನಡೆಸುತ್ತಾ ಕೂತಿದ್ದ. ಆಗ ಅರಮನೆಯ ತಾರಸಿಯ ಮೇಲೇನೋ ಸದ್ದಾದಂತಾಯಿತು. ಕೂಡಲೆ ಅರಮನೆಯ ಭಟರು ಮೇಲೆ ಹೋಗಿ ಒಬ್ಬಾತನನ್ನು ಹಿಡಿದು ತಂದರು.

'ನನ್ನ ಅರಮನೆಯ ತಾರಸಿಯ ಮೇಲೆ ಏನು ಮಾಡುತ್ತಿದ್ದೀಯ?' ಸುಲ್ತಾನ ಕೇಳಿದ.

'ಕಳೆದು ಹೋಗಿರುವ ನನ್ನ ಒಂಟೆಯನ್ನು ಹುಡುಕುತ್ತಿದ್ದೆ' ಆತ ಉತ್ತರಿಸಿದ.

'ಏ ಅರಮನೆಯಲ್ಲಿ ನಿನ್ನ ಒಂಟೆಯೆ? ನಿನಗೆ ತಲೆ ಕೆಟ್ಟಿದೆಯೆ?' ಗದರಿಸಿದ ಸುಲ್ತಾನ.

'ನಿನ್ನ ಅರಮನೆಯ ಸುಖಭೋಗದಲ್ಲಿ, ನಿನ್ನ ಜಪಮಾಲೆಯಲ್ಲಿ ನೀನು ಅಲ್ಲಾಹ್‌ನನ್ನು ಹುಡುಕುತ್ತಿರುವಾಗ, ನಾನು ಒಂಟೆಯನ್ನು ಏಕೆ ಹುಡುಕಬಾರದು ಇಬ್ರಾಹಿಂ? ನೀನು ಸತ್ಯ ಅರಿಯಬೇಕಾದಲ್ಲಿ ಹೋಗು, ಅರಿತವರ ಸಂಗ ಮಾಡು ಹಾಗು ನಿನ್ನಲ್ಲೇ, ನಿನ್ನ ಹೃದಯದಲ್ಲೇ ಸತ್ಯವನ್ನು ಅರಸು' ಎಂದ ಅಪರಿಚಿತ.

ಆ ಅಪರಿಚಿತ ಪ್ರಖ್ಯಾತ ಸೂಫಿ ಅಬ್ದಲ್‌ನೆಂದು ಸುಲ್ತಾನ ಇಬ್ರಾಹಿಂ ಅದಮ್‌ನಿಗೆ ಕೂಡಲೇ ತಿಳಿಯಿತು. ಆತನ ಮಾತಿನ ಪ್ರಭಾವಕ್ಕೊಳಗಾದ ಇಬ್ರಾಹಿಂ ತನ್ನ ರಾಜ್ಯಭಾರವನ್ನು ತನ್ನ ಮಗನಿಗೊಪ್ಪಿಸಿ ಅರಮನೆ ಬಿಟ್ಟು ಹೊರಟ. ಊರೂರು ಅಲೆಯುತ್ತಾ ಹೊಸ ಹೊಸ ಸ್ಥಳಗಳನ್ನು ನೋಡುತ್ತಾ ಅರಿತವರಿಂದ ಕಲಿಯುತ್ತಾ ಆತ ಅಲೆದಾಡಿದ.

ಹಲವಾರು ವರ್ಷಗಳ ನಂತರ ತನ್ನ ಹರಿದ ಅಂಗಿಯನ್ನು ಕೆರೆಯೊಂದರ ಪಕ್ಕದಲ್ಲಿ ಕೂತು ಹೊಲೆಯುತ್ತಿದ್ದಾಗ ಈಗ ದೊಡ್ಡವನಾಗಿದ್ದ ಆತನ ಮಗ ಆತನನ್ನು ಹುಡುಕುತ್ತಾ ಅಲ್ಲಿಗೆ ಬಂದ. ತನ್ನ ತಂದೆಯನ್ನು ಕಂಡು ಆತನಿಗೆ ಸಂತೋಷವಾಯಿತು ಹಾಗು ಆತ ಕೃಶನಾಗಿ ಬಳಲಿದ್ದುದ್ದನ್ನು ಕಂಡು ಬೇಸರವೂ ಆಯಿತು.

'ಅಪ್ಪಾ, ಬಾ ಹೋಗೋಣ. ನಿನ್ನ ರಾಜ್ಯದ ರಾಜ್ಯಭಾರ ನೀನೇ ವಹಿಸಿಕೊ. ನೀನೆಂತಹ ಅಪ್ರತಿಮ ಸುಲ್ತಾನನಾಗಿದ್ದೆ. ಈಗ ನೋಡು ಹೇಗಾಗಿದ್ದೀಯ' ಆತಂಕದಿಂದ ಮಗ ತಂದೆಯಿರುವ ಪರಿಸ್ಥಿ ಕಂಡು ಅಳತೊಡಗಿದ. 'ಇಂತಹ ಪರಿಸ್ಥಿತಿಯಲ್ಲಿ ನಿನ್ನನ್ನು ನೋಡಲು ಸಾಧ್ಯವಿಲ್ಲ. ಹಲವಾರು ತಿಂಗಳುಗಳಿಂದ ನಿನ್ನನ್ನು ದೇಶವೆಲ್ಲಾ ಹುಡುಕಿದ್ದೇನೆ, ನಡೆ ಮನೆಗೆ ಹೋಗೋಣ' ಎಂದ.

ಇಬ್ರಾಹಿಂನಿಗೂ ತನ್ನ ಮಗನನ್ನು ಕಂಡು ಸಂತೋಷವಾಯಿತು. ಆತನನ್ನು ತಬ್ಬಿಕೊಂಡ. ಆಗ ಆತನ ಕೈಯಲ್ಲಿದ್ದ ಹರಿದ ಅಂಗಿ ಹೊಲೆಯುತ್ತಿದ್ದ ಸೂಜಿ ಜಾರಿ ಕೆರೆಯ ನೀರಿಗೆ ಬಿದ್ದು ಕಳೆದುಹೋಯಿತು. ಇಬ್ರಾಹಿಂ ಕೆರೆಯ ಕಡೆಗೆ ತಿರುಗಿ ಚಪ್ಪಾಳೆ ತಟ್ಟಿದ. ಇದ್ದಕ್ಕಿದ್ದಂತೆ ನೀರು ಅಲುಗಾಡತೊಡಗಿತು. ನೂರಾರು ಮೀನುಗಳು ತಮ್ಮ ಬಾಯಲ್ಲಿ ಚಿನ್ನದ ಸೂಜಿ ಹಿಡಿದು ಬಂದವು. ಆತ ನಗುತ್ತಾ ಅಲ್ಲವೆಂಬಂತೆ ತಲೆಯಲ್ಲಾಡಿಸಿದ. ಎಲ್ಲಾ ಮೀನುಗಳು ವಾಪಸ್ಸು ಹೋದವು. ಕೊನೆಗೊಂದು ಮೀನು ಆತನದೇ ಸೂಜಿ ಹಿಡಿದು ಬಂದಿತು. ಇಬ್ರಾಹಿಂ ಅದನ್ನು ಸ್ವೀಕರಿಸಿದ. ನಂತರ ತನ್ನ ಮಗನ ಕಡೆ ತಿರುಗಿ, 'ಅಲ್ಲಾಹ್ ತನ್ನ ಸೃಷ್ಟಿಯ ಎಲ್ಲಾ ಜೀವಿಗಳನ್ನೂ ನನ್ನ ನಿಷ್ಠುರನನ್ನಾಗಿ ಮಾಡಿರುವಾಗ ಹಾಗೂ ಸತ್ಯದ ಅಂತರಾಳ ಅರಿತಿರುವ ನನಗೆ ಬಾಲ್ಕ್ ರಾಜ್ಯ ಅರ್ಥಹೀನ. ಆತ್ಮತೃಪ್ತಿಯೇ ನಿಜವಾದ ಆಸ್ತಿ. ಆತ್ಮತೃಪ್ತಿ ಇರುವವನಿಗೆ ಮತ್ತಾವುದರ ಅವಶ್ಯಕತೆಯೂ ಇಲ್ಲ. ನೀನು ಹಿಂದಿರುಗು' ಎಂದ.

* * *

**ಓದು ಪಠ್ಯ**

# ಡಾಕ್ಟರ್ ವಿಶ್ವೇಶ್ವರಯ್ಯ ವ್ಯಕ್ತಿ ಮತ್ತು ಐತಿಹ್ಯ

**– ಎ.ಎನ್. ಮೂರ್ತಿರಾವ್**

ಕೆಲವು ವರ್ಷಗಳ ಹಿಂದೆ ಬೆಂಗಳೂರನಿಂದ ಮೈಸೂರಿಗೆ ಪ್ರಯಾಣ ಮಾಡುತ್ತಿದ್ದೆ. ಬಸ್ಸು ಮಂಡ್ಯ ಜಿಲ್ಲೆಯಲ್ಲಿ ಹೋಗುತ್ತಿದ್ದಾಗ ಆ ಜಿಲ್ಲೆ ಹಿಂದೆ ಇದ್ದ ಸ್ಥಿತಿಯ ನೆನಪಾಯಿತು, ಆಗ ಅದು ಮಳೆ ಸಾಲದೆ, ನೀರಿನ ಸೌಕರ್ಯವಿಲ್ಲದೆ, ಹೆಚ್ಚು ಕಡಿಮೆ ಬರಡು ಭೂಮಿಯಾಗಿತ್ತು. ಈಗ ರಸ್ತೆಯ ಇಕ್ಕೆಲದಲ್ಲೂ ಕಣ್ಣಿಗೆ ಕಾಣುವಷ್ಟು ದೂರವೂ ಹಸುರು ಕಂಗೊಳಿಸುತ್ತದೆ. ಎಲ್ಲಿ ನೋಡಿದರೂ ಭತ್ತದ ಬೆಳೆ: ಕಬ್ಬಿನ ಬೆಳೆ; ಎಲ್ಲ ಕಡೆಗಳಿಂದಲೂ ನೀರಿನ ಕಲರವ ಕಿವಿಯನ್ನು ಮುತ್ತುತ್ತದೆ. ನಾನು ಈ ಮಾರ್ಪಾಟನ್ನು ಸವಿಯುವುದರಲ್ಲಿ ಮಗ್ನನಾಗಿದ್ದಾಗ ನನ್ನ ಪಕ್ಕದಲ್ಲಿ ಕುಳಿತಿದ್ದ ಪ್ರಯಾಣಿಕ ಸುತ್ತಣ ಹಸುರಿನ ಕಡೆಗೆ ಕೈಬೀಸಿ ಇಂಗ್ಲಿಷಿನಲ್ಲಿ 'All this is Visvesvarayya (ಇವೆಲ್ಲಾ ವಿಶ್ವೇಶ್ವರಯ್ಯ)' ಎಂದ. ನನ್ನ ಮನಸ್ಸಿನಲ್ಲಿದ್ದ ಯೋಚನೆಯೇ ಆತನ ಬಾಯಿಂದ ಹೊರಟಿತು. ಸಾಧಾರಣವಾಗಿ ನಾವು 'ಇದೆಲ್ಲಾ ವಿಶ್ವೇಶ್ವರಯ್ಯನವರು ಮಾಡಿದ ಕೆಲಸ' ಎಂದು ಹೇಳುವ ಪದ್ಧತಿ, ಆದರೆ ಈ ಸಂದರ್ಭದಲ್ಲಿ ಆತ ಹೇಳಿದ್ದೇ ಸರಿ ಎನ್ನಿಸಿತ್ತು. ಈಗ ವಿಶ್ವೇಶ್ವರಯ್ಯನವರ ಭೌತದೇಹ ನಮ್ಮೊಡನೆ ಇಲ್ಲ. ಆದರೆ ಮಂಡ್ಯ ಜಿಲ್ಲೆಯ ಸೌಂದರ್ಯದಲ್ಲಿ, ಅಲ್ಲಿಯ ಜನರ ಅಭ್ಯುದಯದಲ್ಲಿ, ಅವರು ಜೀವಂತರಾಗಿದ್ದಾರೆ. ಅಂಥ ಸಂಪತ್ತನ್ನು ಸೃಷ್ಟಿಸಿ, ಜನ ಜೀವನದ ಸೌಖ್ಯವನ್ನು ಹೆಚ್ಚಿಸುವುದೇ ಅವರ ಜೀವದ ಜೀವ, ಆ ಜಿಲ್ಲೆಗೆ ನೀರನ್ನು ಒದಗಿಸುವ ಕೃಷ್ಣರಾಜಸಾಗರವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡವರು, ಅವರು ಯೋಜನೆಯನ್ನು ತಯಾರಿಸಿದವರು, ಅದನ್ನು ಕಟ್ಟಿಸಿದವರು, ವಿಶ್ವೇಶ್ವರಯ್ಯ, ಅದರ ಪ್ರಯೋಜನವನ್ನು ಪಡೆಯುತ್ತಿರುವವರು ಮಂಡ್ಯದ ರೈತರು, ಮತ್ತು ಅವರ ಮೂಲಕ ಮೈಸೂರು ರಾಜ್ಯ, ಅದಕ್ಕಾಗಿಯೇ ನಾವು ಈ ಎಂಜಿನಿಯರ್ ರಾಜತಂತ್ರಜ್ಞರು ಮಾಡಿದ ಲೆಕ್ಕವಿಲ್ಲದಷ್ಟು ಉಪಕಾರಗಳಲ್ಲಿ ಮೊದಲು ಕೃಷ್ಣರಾಜಸಾಗರವನ್ನು ನೆನೆಯುತ್ತೇವೆ, ನನ್ನ ಆ ಸಹಪ್ರಯಾಣಿಕನು ವಿಶ್ವೇಶ್ವರಯ್ಯನವರ ಇತರ ಮಹಾಕಾರ್ಯಗಳನ್ನು ಭದ್ರಾವತಿಯ "ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಮೈಸೂರು ಬ್ಯಾಂಕು, ಮೈಸೂರು ವಿಶ್ವವಿದ್ಯಾನಿಲಯ, –

ಮೈಸೂರಿನ ಚೇಂಬರ್ ಆಫ್ ಕಾಮರ್ಸ್ ಇವುಗಳನ್ನೂ ಸ್ಮರಿಸಿಕೊಂಡ, ಆದರೆ ಕೃಷ್ಣರಾಜ ಸಾಗರದ ಹೆಸರು ಹೇಳಿದ ಮೇಲೆ ಗಾಂಧೀಜಿ ಒಂದು ಸಾರಿ ಹೇಳಿದರು. ಭಗವಂತ ಮಾನವರಿಗೆ ಕಾಣಿಸಿಕೊಂಡರೆ, ಮೊದಲು ಅನ್ನದ ರೂಪದಲ್ಲಿ ಕಾಣಿಸಿಕೊಳ್ಳಬೇಕು, ಎಂದು ವಿಶ್ವೇಶ್ವರಯ್ಯನವರು ತಮ್ಮನ್ನು ನಿಮಿತ್ತವಾಗಿ ಮಾಡಿಕೊಂಡು ಮಂಡ್ಯ ಜಿಲ್ಲೆಯಲ್ಲಿ ಅನ್ನಬ್ರಹ್ಮನ ಅವತಾರ ಮಾಡಿಸಿದರು.

ಡಾ. ವಿಶ್ವೇಶ್ವರಯ್ಯನವರು 1919ರಲ್ಲಿ ಸ್ವಂತ ಇಚ್ಛೆಯಿಂದ ದಿವಾನಗಿರಿಯನ್ನು ಬಿಟ್ಟುಕೊಟ್ಟು, ಅಧಿಕಾರದಿಂದ ನಿವೃತ್ತರಾದರು. ಆದರೆ ದೇಶಸೇವೆಯಿಂದ ನಿವೃತ್ತರಾಗಲಿಲ್ಲ. ವರ್ಷಗಟ್ಟಲೆ, ಅವರು ಕೃಷ್ಣರಾಜಸಾಗರದ ಅಭಿವೃದ್ಧಿ ಸಮಿತಿಯ ಮತ್ತು ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಅಧ್ಯಕ್ಷರಾಗಿ ಕೆಲಸ ಮಾಡಿದರು. ಅವರ ಜೀವನದ ಕೊನೆ ಕೊನೆಯವರೆಗೂ ಕೈಗಾರಿಕೆ ಅಥವಾ ಎಂಜಿನಿಯರಿಂಗಿಗೆ ಸಂಬಂಧಪಟ್ಟ ತೊಡಕಾದ ಸಮಸ್ಯೆಯೇನು ಬಂದರೂ ಮೈಸೂರು ರಾಜ್ಯದ ಅವರ ಸಲಹೆಯನ್ನು ಬೇಡುತ್ತಿತ್ತು, ಪಡೆಯುತ್ತಿತ್ತು. ಅವರ ನಂತರ ಬಂದ ದಿವಾನರು ಮತ್ತು ಮಂತ್ರಿಗಳಲ್ಲಿ ಹೆಚ್ಚು ಕಡಿಮೆ ಎಲ್ಲರೂ ಅವರಲ್ಲಿ ಭಕ್ತಿಯಿಂದ ನಡೆದುಕೊಂಡು ಸಲಹೆ ಪಡೆದಿದ್ದಾರೆ. ನಮ್ಮ ರಾಜ್ಯದ ಜನಜೀವನದಲ್ಲಿ ಅದೆಷ್ಟು ಕಡೆ ಅವರ ಕೈವಾಡ ಕಾಣುತ್ತದೆಯೋ! ಅದಕ್ಕೆ ನಮ್ಮ ಜನ ದೊಡ್ಡದಾಗಿ ಕೈಬೀಸಿ ಹೇಳುತ್ತಾರೆ: 'ಇದೆಲ್ಲಾ ವಿಶ್ವೇಶ್ವರಯ್ಯನವರ ಕೆಲಸ' ಎಂದಲ್ಲ, ಇದೆಲ್ಲಾ ವಿಶ್ವೇಶ್ವರಯ್ಯ' ಎಂದು.

ವಿಶ್ವೇಶ್ವರಯ್ಯನವರು ಸಾಧಿಸಿದ ಕೆಲಸಗಳಷ್ಟೇ ಬಹುಶಃ ಅವಕ್ಕಿಂತ ಹೆಚ್ಚಾಗಿ ಅವರ ವ್ಯಕ್ತಿತ್ವ ಜನರ ಮನಸ್ಸನ್ನು ಸೆಳೆದಿದೆ. ಅವರು ಅತ್ಯಂತ ದಕ್ಷರಾದ ಎಂಜಿನಿಯರ್, ಮುಂದಾಲೋಚನೆಯುಳ್ಳ ರಾಜತಂತ್ರಜ್ಞರು, ರಾಜ್ಯದ ಅಭಿವೃದ್ಧಿಯ ವಿಷಯದಲ್ಲಿ ಘನವಾದ ಆದರ್ಶಗಳನ್ನು ಕಲ್ಪಿಸಿಕೊಂಡು ಅವನ್ನು ಸಾಧಿಸಲು ಶ್ರಮಿಸಿದವರು ಇದನ್ನೆಲ್ಲಾ ಒತ್ತಿ ಹೇಳಬೇಕಾದ ಅವಶ್ಯಕತೆಯಿಲ್ಲ. ಇಲ್ಲಿ ಅವರ ವ್ಯಕ್ತಿತ್ವಕ್ಕೇ ಹೆಚ್ಚು ಗಮನ ಕೊಡಲಾಗಿದೆ. ಅವರ ವಿಷಯದಲ್ಲಿ ನಾನು ಕೇಳಿರುವ ಕಥೆಗಳೆಲ್ಲವೂ ನಿಜವಾಗಿ ನಡೆದುವೆಂದು ಹೇಳಲು ಸಾಕಾದಷ್ಟು ಆಧಾರವಿಲ್ಲ. ಆದರೆ ಆ ಕಥೆಗಳೆಲ್ಲವೂ ಅವರ ಸ್ವಭಾವಕ್ಕೆ ಹೊಂದುವಂಥವೇ, ಅವರನ್ನು ದಿವಾನರನ್ನಾಗಿ ನೇಮಿಸಿದ ಸರ್ಕಾರಿ ಆಜ್ಞೆ ಕೈಗೆ ಬಂದಾಗ ಅವರು ಅದನ್ನು ತಾಯಿಯ ಪಾದಗಳ ಬಳಿ ಇಟ್ಟು 'ನಮ್ಮ ಬಂಧುಗಳಲ್ಲಿ

ಯಾರೊಬ್ಬರಿಗಾಗಲಿ ನೌಕರಿ ಕೊಡಬೇಕೆಂದು ನೀನು ಶಿಫಾರಸು ಮಾಡಬಾರದು; ಮಾಡುವುದಿಲ್ಲವೆಂದು ಭರವಸೆ ಕೊಟ್ಟರೆ ದಿವಾನಗಿರಿಯನ್ನು ಒಪ್ಪಿಕೊಳ್ಳುತ್ತೇನೆ' ಎಂದರಂತೆ, ಈ ಮಾತನ್ನು ಹೇಳಿದ್ದು ಅವರ ತಾಯಿಗಲ್ಲ, ಸೋದರ ಮಾವನಿಗೆ ಎಂದೂ ಕೇಳಿದ್ದೇನೆ – ಯಾವುದು ನಿಜವೋ ತಿಳಿಯದು. ಆದರೆ ಅವರು ತಮ್ಮ ಬಂಧುಗಳಲ್ಲಿ ಯಾರೊಬ್ಬರಿಗೂ ನೌಕರಿ ಕೊಡಲಿಲ್ಲವೆಂಬುದೇನೋ ಸತ್ಯ.

ಕ್ರಮ, ಶಿಸ್ತು, ತರ್ಕಬದ್ಧವಾದ ಆಲೋಚನೆ, ನಿಷ್ಕೃಷ್ಟತೆ–ಇವು ವಿಶ್ವೇಶ್ವರಯ್ಯನವರ ಹುಟ್ಟುಗುಣಗಳು. ಇವುಗಳಿಗೆ ಲೋಪ ಬಂದೀತೆಂಬ ಶಂಕೆಯಿಂದ ಅವರು ಯಾವ ಕೆಲಸಕ್ಕಾಗಲಿ ಪೂರ್ವಸಿದ್ಧತೆಯಿಲ್ಲದೆ ಕೈಹಾಕುತ್ತಿರಲಿಲ್ಲ. ಇದಕ್ಕೆ ಉದಾಹರಣೆಯಾಗಿ ಅವರ ಜೀವನದಲ್ಲಿ ನಡೆದ ಒಂದು ಸಂಗತಿಯನ್ನು ಹೇಳಬಹುದು. ಒಂದು ಬಾರಿ ಅವರು ತಮ್ಮ ತವರೂರಾದ ಮುದ್ದೇನಹಳ್ಳಿಯಲ್ಲಿ ತಂಗಿದ್ದರು. ಅಂದು ಸಂಜೆ ಹಳ್ಳಿಯ ಪ್ರಾಥಮಿಕ ಶಾಲೆಯ ಬಳಿ ಹೋಗುತ್ತಿರುವಾಗ ಶಾಲೆಯಿಂದ ಮಕ್ಕಳು ಕೇಕೆಹಾಕುತ್ತ, ನಗುತ್ತ, ಕುಣಿಯುತ್ತ ಹೊರಬಂದರು. ವಿಶ್ವೇಶ್ವರಯ್ಯನವರು ಮಕ್ಕಳ ಕುಣಿದಾಟವನ್ನು ನೋಡಿ ಮುಗುಳುನಗೆ ನಗುತ್ತಾ ಮೇಷ್ಟರನ್ನು ಕರೆದು ಹತ್ತು ರೂಪಾಯಿ ನೋಟನ್ನು ಅವರ ಕೈಲಿಟ್ಟು 'ಮಕ್ಕಳಿಗೆ ಏನಾದರೂ ತರಿಸಿಕೊಡಿ. ಬಾಯಿ ಸಿಹಿಯಾಗಲಿ ಎಂದರು. ಇದನ್ನು ನೋಡುತ್ತಿದ್ದ ವೃದ್ದರೊಬ್ಬರು, 'ಸ್ವಾಮಿ, ಅವರಿಗೆ ಪೆಪ್ಪರ್ ಮೆಂಟು ಹಂಚಿದರೆ ಸಾಕೆ? ನಾಲ್ಕು ಬುದ್ದಿಯ ಮಾತು ಅಪ್ಪಣೆಯಾಗಬೇಕು' ಎಂದರು, ಹುಡುಗರನ್ನೆಲ್ಲಾ ಮತ್ತೆ ಶಾಲೆಯೊಳಕ್ಕೆ ಕರೆತಂದದ್ದಾಯಿತು. ವಿಶ್ವೇಶ್ವರಯ್ಯನವರು ಐದು ನಿಮಿಷ ಮಾತನ್ನೂ ಆಡಿದರು. ಆದರೆ ಶಾಲೆಯಿಂದ ಹೊರಗೆ ಬಂದಾಗ ಅವರಿಗೆ ತಮ್ಮ ವಿಷಯದಲ್ಲಿ ವಿಪರೀತ ಅಸಮಾಧಾನ, ಎಂದೂ ಮಾಡದ ಕೆಲಸವನ್ನು ಅಂದು ಮಾಡಿದ್ದರು. ಪೂರ್ವ ಸಿದ್ಧತೆಯಿಲ್ಲದೆ ಭಾಷಣ ಮಾಡಿದ್ದರು. ಅವರ ಮನದಲ್ಲಿ ಅಕ್ಷಮ್ಯವಾದ ಈ ಅಪರಾಧಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವವರೆಗೂ ಅವರಿಗೆ ಸಮಾಧಾನವಿಲ್ಲ. ಒಂದು ವಾರದೊಳಗೆ ಅವರು ಹಳ್ಳಿಗೆ ಹಿಂದಿರುಗಿ, ಇಪ್ಪತ್ತೈದು ರೂಪಾಯಿ ಖರ್ಚು ಮಾಡಿ ಮಕ್ಕಳಿಗೆ ತಿಂಡಿತೀರ್ಥಗಳನ್ನು ಹಂಚಿ, ಮತ್ತೆ ಒಂದು ಭಾಷಣ ಮಾಡಿದರು. ಜಾಗರೂಕತೆಯಿಂದ ತಯಾರು ಮಾಡಿದ್ದ ಭಾಷಣ, ಮೊದಲಿನ ಭಾಷಣಕ್ಕೂ ಎರಡನೇ ಭಾಷಣಕ್ಕೂ ವಿಷಯಸಂಪತ್ತಿನಲ್ಲೂ ಸುಸಂಬದ್ಧತೆಯಲ್ಲೂ ಏನು ವ್ಯತ್ಯಾಸವಿತ್ತೋ ತಿಳಿಯದು, ಅದು ಆ ಚಿಕ್ಕಮಕ್ಕಳ ಗಮನಕ್ಕಂತೂ ಬಂದಿರಲಾರದು, ಅವರು ಮಿಠಾಯಿ ತಿಂದು ಬಾಯಿ ಚಪ್ಪರಿಸುತ್ತಾ ಬಟ್ಟಲುಗಣ್ಣನ್ನು ಬಿಟ್ಟು

'ದಿವಾನರು' ಎಂಬ ವಿಚಿತ್ರ ಅದ್ಭುತ ವ್ಯಕ್ತಿಯನ್ನು ನೋಡುತ್ತಿದ್ದರೆ ಹೊರತು ಭಾಷಣವನ್ನು ಅಷ್ಟಾಗಿ ಕೇಳುತ್ತಿದ್ದಲಾರದು. ಈ ಪ್ರಸಂಗದಲ್ಲಿ ನಾವು ಗಮನಿಸಬೇಕಾದ ಅಂಶ ಇದು ವಿಶ್ವೇಶ್ವರಯ್ಯನವರು ಮೇಧಾವಿಗಳಾದ ಮತ್ತು ವಿಚಾರ ಪರರಾದ ಶ್ರೋತೃಗಳಿಗೆ ಎಷ್ಟು ಗೌರವ ಸಲ್ಲಿಸಬೇಕೋ ಅಷ್ಟೇ ಗೌರವವನ್ನು ಆ ಮಕ್ಕಳಿಗೂ ಸಲ್ಲಿಸಿದರು.

ವಿಶ್ವೇಶ್ವರಯ್ಯನವರು ಜೋಗ್ ಜಲಪಾತದ ಅದ್ಭುತ ಸೌಂದರ್ಯದ ಮುಂದೆ ಮೊದಲಬಾರಿ ನಿಂತಾಗ ಭಾವಸಮಾಧಿಗೆ ಹೋಗಲೊಲ್ಲದೆ 'ಎಷ್ಟೊಂದು ಶಕ್ತಿ ಪೋಲಾಗುತ್ತಿದೆ' ಎಂದರಂತೆ (ಈ ಮಾತನ್ನು ಇತರರ ವಿಷಯದಲ್ಲಿ ಹೇಳಿದ್ದನ್ನೂ ಕೇಳಿದ್ದೇನೆ). ಈ ಕಥೆ ನಿಜವಲ್ಲದಿದ್ದರೆ ನಿಜವಾಗಬೇಕಾದದ್ದು. ವಿಶ್ವೇಶ್ವರಯ್ಯನವರಿಂದ ಹೊರಡಬೇಕಾದರೆ ಅಂಥ ಮಾತೇ, ಆ ಜಲಪಾತದ ಶಕ್ತಿಯನ್ನು ಉಪಯೋಗಕ್ಕೆ ತರಲು ಮೈಸೂರು ಸರ್ಕಾರ ಈಗ ಶ್ರಮಿಸುತ್ತಿದೆ.

ಬಡವರು ತಮಗೆ ಅವಶ್ಯಕವಾದ ಸೇವೆಯಲ್ಲಕ್ಕೂ ಹಣ ಸುರಿಯಬೇಕು. ಹಣಗಾರರೂ ಅಧಿಕಾರದಲ್ಲಿರುವವರೂ ಅನೇಕ ವೇಳೆ, ಬಿಟ್ಟಿ ಸೇವೆಯನ್ನು ನಿರೀಕ್ಷಿಸುತ್ತಾರೆ. ಪಡೆದೂ ಪಡೆಯುತ್ತಾರೆ, ಅದು ಪ್ರಭಾವಶಾಲಿಗಳಾದವರಿಗೆ ನಾವು ಸಲ್ಲಿಸಬೇಕಾದ ಕಾಣಿಕೆ, ಅವರಿಂದ ಹಣ ತೆಗೆದುಕೊಳ್ಳದಿರುವದು ವಿವೇಕ' ಎಂಬ ಭಾವನೆ ಜನರ ಮನಸ್ಸಿನಲ್ಲಿರುವುದು ಸಾಮಾನ್ಯ. ಆದರೆ ವಿಶ್ವೇಶ್ವರಯ್ಯನವರು 'ದುಡಿದವನಿಗೆ ಪ್ರತಿಫಲ ದೊರೆಯಲೇಬೇಕು' ಎಂಬ ತತ್ವಕ್ಕೆ ವಿರೋಧವಾಗಿ ಎಂದೂ ನಡೆದವರಲ್ಲ, ಒಂದು ಬಾರಿ ಅವರು ಹಾಸನ ಜಿಲ್ಲೆಯ ಯಾವುದೋ ಸಣ್ಣ ಊರಿನ ಬಳಿ ಬಿಡಾರ ಮಾಡಿದ್ದರಂತೆ. ಕೈಬೆರಳಿಗೆ ಅಕಸ್ಮಾತ್ತಾಗಿ ಸಣ್ಣ ಗಾಯವಾಗಿ ರಕ್ತಬಂತು. ಹಳ್ಳಿಯ ಆಸ್ಪತ್ರೆಗೆ ಹೋಗಿ ಗಾಯದ ಮೇಲೊಂದು ಪ್ಲಾಸ್ತ್ರಿ ಹಾಕಿಸಿ, ಮರಳಿ ಬಿಡಾರಕ್ಕೆ ಬಂದೊಡನೆ ಡಾಕ್ಟರಿಗೆ ಇಪ್ಪತ್ತೈದು ರೂಪಾಯಿನ ಚೆಕ್ಕು ಕಳಿಸಿದರು. ಡಾಕ್ಟರರು ಚೆಕ್ಕನ್ನು ಹಿಡಿದುಕೊಂಡು ಓಡಿಬಂದು, ನನ್ನ ಕರ್ತವ್ಯಕ್ಕಿಂತ ಹೆಚ್ಚಿನದೇನನ್ನೂ ನಾನು ಮಾಡಲಿಲ್ಲ. ಈ ಚೆಕ್ಕನ್ನು ತೆಗೆದುಕೊಳ್ಳಲಾರೆ, ತಮಗೆ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿದ್ದೇ ನನಗೊಂದು ಗೌರವ' ಎಂದರು. ಅದಕ್ಕೆ ಉತ್ತರವಾಗಿ ವಿಶ್ವೇಶ್ವರಯ್ಯನವರು ಆತನ ಕೊನೆಯ ವಾಕ್ಯಕ್ಕೆ ಹೆಚ್ಚಿನ ವ್ಯಾಪ್ತಿಯನ್ನು ಕೊಟ್ಟು, ಗಂಭೀರ ಮುದ್ರೆಯಿಂದ ಹೇಳಿದರು: 'ಹೌದು, ಯಾವ ರೋಗಿಗೇ ಆಗಲಿ, ಸೇವೆ ಸಲ್ಲಿಸಿ ಆಗ ನಿಮ್ಮನ್ನು ನೀವು ಗೌರವಿಸಿಕೊಂಡಂತೆ, ನಮ್ಮೆಲ್ಲರ ಮನೋವೃತ್ತಿಯೂ ಹಾಗಿರಬೇಕೆಂಬುದೇ ನನ್ನ ಆಸೆ, ಆದರೆ ಹಣ

ಕೊಡುವ ಶಕ್ತಿಯುಳ್ಳವ ಕೊಡಬೇಕು. ಕೊಡದಿದ್ದರೆ, ಕೊಡಲಾರದವರಿಂದ ಹಣ ಪಡೆಯುವ ಆಸೆ ನಿಮ್ಮಲ್ಲಿ ಕುದುರಬಹುದು. ನಿಮ್ಮ ಕರ್ತವ್ಯವನ್ನು ನೀವು ಪಾಲಿಸಿದ್ದೀರಿ; ನನ್ನದನ್ನೂ ಪಾಲಿಸಲು ಅವಕಾಶ ಕೊಡಿ.

ಕೆಲವು ವೇಳೆ ಮಹಾಪುರುಷರು ಉನ್ನತವಾಗಿ ಬೆಳೆದು ವಿಶಾಲವಾಗಿ ಕೊಂಬೆಗಳನ್ನು ಮಾಡಿಕೊಂಡಿರುವ ಮರಗಳಂತೆ ತಮ್ಮ ಸುತ್ತಲೂ ದಟ್ಟವಾದ ನೆರಳು ಚೆಲ್ಲುತ್ತಾರೆ; ಆ ನೆರಳಿನಲ್ಲಿ ಮತ್ತಾವ ಗಿಡವೂ ಬೆಳೆಯದು. ಅಂಥವರ ಪ್ರಭಾವದಿಂದಾಗಿ ಅವರ ಸುತ್ತಮುತ್ತ ಇರುವವರ ಆತ್ಮ ವಿಶ್ವಾಸ, ಎದೆಗಾರಿಕೆ, ಮುನ್ನುಗ್ಗುವ ಶಕ್ತಿ ಇವೆಲ್ಲಾ ಕುಂದಿಹೋಗಬಹುದು. ಈ ಬಗೆಯ ಲೋಪಕ್ಕೆ ಅವಕಾಶ ಕೊಡದಿರುವ ಅಪರೂಪ ವ್ಯಕ್ತಿಗಳಲ್ಲಿ ವಿಶ್ವೇಶ್ವರಯ್ಯನವರೂ ಒಬ್ಬರು. ಅವರು ತಮ್ಮ ಸುತ್ತಲೂ ಚೆಲ್ಲಿರುವುದು ನೆರಳಲ್ಲ, ಬೆಳಕು, ಅವರು ಬಯಸುತ್ತಿದ್ದದ್ದು ಕುರುಡು ವಿಧೇಯತೆಯಲ್ಲ; ಆತ್ಮವಿಶ್ವಾಸವುಳ್ಳವರನ್ನೂ ಹೊಸ ಪ್ರಯೋಗಗಳನ್ನು ನಡೆಸುವ ಕಿಚ್ಚುಳ್ಳವವರನ್ನು ಅವರು ಹುಡುಕಿಕೊಂಡು ಹೋಗುತ್ತಿದ್ದರು; ಆ ಗುಣಗಳನ್ನು ಇತರರ ಮೇಲೆ ಬಲಾತ್ಕಾರವಾಗಿ ಹೊರಿಸಿದ್ದೂ ಉಂಟು, ಮೈಸೂರು ರಾಜ್ಯದಲ್ಲಿ ಅವರ ನಂತರ ಅಧಿಕಾರಕ್ಕೆ ಬಂದು ದಕ್ಷತೆಗೂ ಪ್ರಾಮಾಣಿಕತೆಗೂ ಹೆಸರು ಪಡೆದ ದಿವಾನರಿಬ್ಬರು ಅವರೊಡನೆಯೇ ಬಹುಕಾಲ ಕೆಲಸ ಮಾಡಿ ಅವರಲ್ಲಿ ಭಕ್ತಿಯಿಟ್ಟಿದ್ದರು, ಅವರ ಪಾಲಿಸಿಗಳನ್ನು ಮುಂದುವರೆಸಿದವರು, ಆದರೂ ಆವಶ್ಯಕವೆಂದು ತೋರಿದಾಗ ವಿಶ್ವೇಶ್ವರಯ್ಯನವರ ಅಭಿಪ್ರಾಯಗಳನ್ನು ವಿರೋಧಿಸುವ ಧೈರ್ಯ ಅವರಲ್ಲಿ ಬೆಳೆದಿತ್ತು; ಪ್ರಾಮಾಣಿಕ ವಿರೋಧಕ್ಕೆ ಗೌರವ ಕೊಡುವ ಔನ್ನತ್ಯ ವಿಶ್ವೇಶ್ವರಯ್ಯನವರಲ್ಲಿತ್ತು. ಆತ್ಮವಿಶ್ವಾಸವನ್ನು ಅವರು ಹೇಗೆ ಬೆಳೆಸುತ್ತಿದ್ದರೆಂಬುದಕ್ಕೆ ಉದಾಹರಣೆಯಾಗಿ ಒಂದು ಪ್ರಸಂಗವನ್ನು ಇಲ್ಲಿ ಕಾಣಿಸಬಹುದು. ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಬ್ಲಾಸ್ಟ್–ಫರ್ನೆಸಿನ ಮೇಲ್ವಿಚಾರಣೆಗೆ ಅಮೆರಿಕದವರೊಬ್ಬರನ್ನು ನೇಮಿಸಿದ್ದರು. ಆತನ ಅಧಿಕಾರಾವಧಿ ಮುಗಿದೊಡನೆ ವಿಶ್ವೇಶ್ವರಯ್ಯನವರು ಅವರನ್ನು ಗೌರವದಿಂದ ಕಳಿಸಿಕೊಟ್ಟು, ಮೈಸೂರಿನವರೊಬ್ಬರನ್ನು ಕರೆದು 'ಈ ಕೆಲಸವನ್ನು ನೀವು ವಹಿಸಿಕೊಳ್ಳಿ' ಎಂದರು. ಆ ಯುವಕನಿಗೆ ಅನಿರೀಕ್ಷಿತವಾಗಿ ಈ ಸನ್ಮಾನ ದೊರೆತದ್ದು ಆಶ್ಚರ್ಯವನ್ನುಂಟು ಮಾಡಿತು–ಯಾಂತ್ರಿಕ ವಿಷಯಗಳಲ್ಲಿ ದಕ್ಷತೆಯಿರುವುದೆಂದರೆ ಬಿಳಿಯರಲ್ಲಿ ಮಾತ್ರ ಎಂದು ಜನ ನಂಬಿದ್ದ ಕಾಲ! ಆತ 'ನನ್ನ ಕೈಲಾದಷ್ಟು ನಿಷ್ಠೆಯಿಂದ ಕೆಲಸಮಾಡುತ್ತೇನೆ. ನನಗೆ ಈ ಕೆಲಸಕ್ಕೆ ಬೇಕಾದಷ್ಟು ಶಕ್ತಿಯಿದೆಯೋ ಇಲ್ಲವೇ ಕಾಣೆ' ಎಂದು ನಮ್ರನಾಗಿ ತಡವರಿಸಿದ. ವಿಶ್ವೇಶ್ವರಯ್ಯನವರ ಉತ್ತರ

ಸ್ವಲ್ಪ ನಿಷ್ಠುರವಾಗಿಯೇ ಬಂತು: 'ನಿಮಗೆ ಶಕ್ತಿಯಿದೆಯ ಅಂತ ನಾನು ಕೇಳುತ್ತಿಲ್ಲ, ಇದೆ ಅಂತ ನಾನು ಹೇಳುತ್ತಿದ್ದೇನೆ'. ವಿಶ್ವೇಶ್ವರಯ್ಯನವರಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಸ್ವಲ್ಪ ಹೆಚ್ಚಾಯಿತಲ್ಲವೆ?' ಎಂಬ ಸಂದೇಹವನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ನಮ್ಮ ಜೀವನಸಂಪತ್ತನ್ನು ಹೆಚ್ಚಿಸಲು ನೆರವಾಗುವ ಅಂಶಗಳು ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಕಂಡುಬಂದಾಗ ಅವನ್ನು ಸ್ವೀಕರಿಸಲು ವಿಶ್ವೇಶ್ವರಯ್ಯನವರು ಹಿಂದೆಗೆಯುತ್ತಿರಲಿಲ್ಲ. ಏಕೆ ಹಿಂದೆಗೆಯಬೇಕು? ಆದರೆ ಅವರ ಜೀವನಕ್ಕೆ ತಳಹದಿಯಾಗಿದ್ದದ್ದು ಭಾರತೀಯ ಸಂಸ್ಕೃತಿಯಲ್ಲವೆಂದು ಭಾವಿಸಿದರೆ ಅದು ತಪ್ಪು

ಅವರಿಗೆ ಪಾಶ್ಚಾತ್ಯರ ದಿರಿಸನ್ನು ಕಂಡರೆ ಅಭಿಮಾನವೇನೋ ಉಂಟು. ಆದರೆ ಮನೆಯಲ್ಲಿ ಊಟಕ್ಕೆ ಕುಳಿತುಕೊಳ್ಳುವಾಗ ಅವರು ಪಂಚೆಯನ್ನೇ ಉಡುತ್ತಿದ್ದರಂತೆ. ಕೈಗಾರಿಕೆಗಳನ್ನು ಬೆಳೆಸಿಕೊಳ್ಳದಿದ್ದರೆ ಭಾರತಕ್ಕೆ ಉಳಿಗಾಲವಿಲ್ಲವೆಂಬುದನ್ನು ಅವರಿಗಿಂತ ಚೆನ್ನಾಗಿ ಮನಗಂಡವರಿಲ್ಲ; ಆದರೆ ಅವರು ಪ್ರಯಾಣ ಹೊರಟಿದ್ದಾಗ ಅವರ ಸೂಟ್ಕೇಸಿನಲ್ಲಿ ಭಗವದ್ಗೀತೆಯ ಪ್ರತಿ ಇದ್ದದ್ದನ್ನು ಮಿತ್ರರೊಬ್ಬರು ಕಂಡಿದ್ದಾರೆ. ಕೊನೆಯವರೆಗೂ ಅವರ ಮನೆಯಲ್ಲಿ ಉಪಾಕರ್ಮ ಮೊದಲಾದ ಹಬ್ಬಗಳು ಒಂದು ಮಿತಿಯಲ್ಲಿ ಅವರಿಗಿದ್ದ ಕಾಲಾವಕಾಶದ ಮಿತಿಯಲ್ಲಿ ಆಚರಣೆಯಲ್ಲಿದ್ದವೆಂದು ಕೇಳಿದ್ದೇನೆ. ಅವರು ಇಹಜೀವನಕ್ಕೆ ತಿರಸ್ಕಾರ ಹಾಕಿ ಆಧ್ಯಾತ್ಮಿಕ ಜೀವನವೊಂದನ್ನೇ ಗಗನಕ್ಕೆ ಏರಿಸುತ್ತಿರಲಿಲ್ಲ ನಿಜ. ಆದರೆ, ನಮ್ಮ ಉಪನಿಷತ್ತುಗಳು ತಾನೆ ಹಾಗೆ ಮಾಡುತ್ತವೇನು? ಕಾಯಕದ ಹಿರಿಮೆ, ಕರ್ತವ್ಯನಿಷ್ಠೆ ಸರ್ವರಿಗೂ ಸಂಪದ್ಯುಕ್ತವಾದ ಪೂರ್ಣಜೀವನ–ಇಂಥ ಆದರ್ಶಗಳನ್ನು ನಂಬಿದ್ದ ವಿಶ್ವೇಶ್ವರಯ್ಯನವರು ಉಪನಿಷತ್ತುಗಳ ಶ್ರುತಿಗೆ ಹೊಂದುವಂಥ ಜೀವನವನ್ನು ನಡೆಸುತ್ತಿದ್ದರೆಂದು ಧಾರಾಳವಾಗಿ ಹೇಳಬಹುದು. ಅಸ್ಪಷ್ಟವಾದ, ಜೀವನದ ಸಂಬಂಧವನ್ನು ಕಡಿದುಕೊಂಡಿರುವ, ನಿಷ್ಫಲ ಅನುಭಾವವು 'ನಾನೇ ಭಾರತದ ಅಂತರಾತ್ಮ' ಎಂದು ಅನೇಕವೇಳೆ ಸೋಗುಹಾಕುತ್ತದೆ. ಈ ಬಗೆಯ ಅನುಭಾವ ವಿಶ್ವೇಶ್ವರಯ್ಯನವರಿಗೆ ಹಿಡಿಸದು.

'ವಿಶ್ವೇಶ್ವರಯ್ಯ : ವ್ಯಕ್ತಿ ಮತ್ತು ಐತಿಹ್ಯ' ಈ ದ್ವೈತ ಸಲ್ಲದು; ಅವರ ಮಟ್ಟಿಗೆ 'ವ್ಯಕ್ತಿಯೇ ಐತಿಹ್ಯ, ಐತಿಹ್ಯವೇ ವ್ಯಕ್ತಿ ಎನ್ನಬಹುದು.

* * *

**ದುಃಖ : ಆಶಯ**

# ಮಂಕುತಿಮ್ಮನ ಕಗ್ಗ

– ಡಿ.ವಿ.ಜಿ

ಲೋಕವೆಲ್ಲವು ದೈವಲೀಲೆಯೆಂಬರೆ, ಪೇಳಿ ।
ಶೋಕ ಸೋಂಕಿರದೊಡಾ ಲೀಲೆ ನೀರಸವೇಂ? ॥
ಮೂಕಂಗೆ ಕಳ್ ಕುಡಿಸಿ ಚೇಳ್ ಕುಟಕಿಪಾಟವಿದು ।
ಏಕಪಕ್ಷದ ಲೀಲೆ – ಮಂಕುತಿಮ್ಮ ॥

ವಿಷಯಸನ್ನಿಧಿಗಿಂತ ಮಸಣಸನ್ನಿಧಿ ಲೇಸು ।
ವಿಷದೂಟಕಿಂತುಪೋಷಿತವೆ ಲೇಸಲ್ತೆ? ॥
ತೃಷೆ ಕನಲೆ, ಜೀವ ಬಿಸಿಬಾಣಲಿಗೆ ಬಿದ್ದ ಹುಳು ।
ಶಿಶು ಪಿಶಾಚಿಯ ಕೈಗೆ – ಮಂಕುತಿಮ್ಮ ॥

ತರಚುಗಾಯವ ಕೆರೆದು ಹುಣ್ಣಾಗಿಪುದು ಕಪಿ ।
ಕೊರತೆಯೊಂದನು ನೀನು ನೆನೆನೆನೆದು ಕೆರಳಿ ॥
ಧರೆಯೆಲ್ಲವನು ಶಪಿಸಿ, ಮನದಿ ನರಕವ ನಿಲಿಸಿ ।
ನರಳುವುದು ಬದುಕೇನೊ? – ಮಂಕುತಿಮ್ಮ ॥

* * *

# ಚಂದ್ರಮತಿಯ ಪ್ರಲಾಪ

– ರಾಘವಾಂಕ

ಏವೆನೇವೆನೆಲೆ ಮಗನೇ ಮಗನೇ
ಸಾವೇಕಾಯಿತ್ತೆಲೆ ಚೆನ್ನಿಗನೇ
ಇರಿದೆಯೆಲಾ ಎನ್ನನು ಸುಕುಮಾರಾ
ಕೊರೆದೆಯಲಾ ಕೊರಳನು ಜಿತಮಾರಾ
ವನಿತೆಯನಾರಡಿಗೊಂಡೆಯೊ ವಿಧಿಯೇ
ಎನಗೀ ಪರಿಯಲಿ ಮಡಿವುದವಧಿಯೇ
ಶಿರದಲಿ ಬರೆದಕ್ಕರವೀ ಪರಿಯೇ
ಗರಳದ ಉರಿಯಲಿ ಒರಗಿದೆ ಕಲಿಯೇ
ಎನುತ ಸುತನ ವದನವ ನೆರೆ ನೋಡಿ
ವನಿತೆ ಮಹಾದುಃಖದೊಳೊಡಗೂಡಿ

ಪುತ್ರ ಶೋಕದುರಿ ಭುಗಿಲೆನೆ ನೆಗೆದು
ಗಾತ್ರವನಡರೆ ಕೊರಳ ಸೆರೆ ಬಿಗಿದು
ಹೊಟಹೊಟನೊಡೆಯಲು ದುಃಖದಿ ಕಾಯ
ತುಟಿಯೆಂತೆಂತಲುಗುತ್ತಿರೆ ಬಾಯ
ತೆರೆದೊರಲಿದಳೊಲಿದಳೋರಂತೆ
ಮೊರೆಯಿಟ್ಟಳು ಹೊರಳಿದಳಾ ಕಾಂತೆ
ವಿಧು ಬಿಂಬಂ ರಾಹುವ ಪೋರ್ವಂತೆ
ವಧುವದನಂ ಸಿರಿಮುಡಿಯೋರಂತೆ
ಹುಡಿಯಾಗುತ್ತಿರೆ ಹೊರಳಿದಳಂದು
ಕಡುಶೋಕಾನಲನಿಂದುರಿ ಬೆಂದು

ಉಕ್ಕುವಳಲ ಶಬ್ದಂ ಪೊರಮಟ್ಟು
ಬಿಕ್ಕಿ ಬಿರಿದು ಹೊರಳುತ ಗೋಳಿಟ್ಟು
ಎತ್ತಣ ಬರಸಿಡಿಲೆರಗಿತೊ ನಿನ್ನ
ಹುತ್ತಿನ ಹತ್ತಿರೆ ಒರಗಿದೆ ಚೆನ್ನ
ಹಾವು ಹಿಡಿಯೆ ಹಾ ಎಂದೊರಲಿದೆಯಾ
ಸಾವಾಗವ್ವಾ ಎಂದಳಲಿದೆಯಾ
ಅಯ್ಯಂಗರುಚಿಯಳುತ ನೀ ಕೆಡೆದಾ
ಕೈಯೆಡೆಗೆನ್ನನಿದಾರಿಗೆ ನುಡಿದಾ
ಮಟ ಮಂಟೆಯ ದೇಗುಲ ನಿನಗೆಂದು
ದಿಟದಿಂದೆನಗಿತ್ತೆಯೊ ನೀನಿಂದು

ಎಂಬ ನುಡಿಗೆಯಂಬರದಲಿ ಸುರರು
ಕಂಬನಿಯುಗಲಂದಾ ನಿರ್ಜರರು
ಹರನರಸಿಯು ಸಿರಿಯುಂ ಕೋಪಿಸುತ
ಸರಸತಿಯುಂ ರತಿಯುಂ ತಾಪಿಸುತ
ಪಾಪಿ ಕೌಶಿಕಂಗಂಜಿ ನಭದೊಳು
ಆಪೊಳ್ತಳಲುತ್ತಿರೆಯವನಿಯೊಳು
ಹೊರಳುತ್ತತ್ತಳು ಆತನ ಮಾತೆ
ಸರಳುರ್ಚಿದ ಮೃಗದೊಲು ವಿಖ್ಯಾತೆ
ಎಂತು ಸೈರಿಸಲು ಬಹುದೆಲೆ ದೇವ
ಕಂತುಹರನೆ ಕರುಣಿಸೆನಗೆ ಸಾವ

ಎನುತ ಸುತನ ಹಣೆಯೊಳು ಹಣೆವೆರಸಿ
ವನಿತೆ ಮಹಾದುಃಖವ ನುರಿ ಧರಿಸಿ
ಆರ ಸಿರಿಯನೆಳೆಕೊಂಡೆನೊ ಮುನ್ನ
ಆರಳಲನು ಸೆಳೆಕೊಂಡೆನೊ ಮುನ್ನ
ಆರಿಕ್ಕಿದ ವನಮಂ ನಾಂ ಕಡಿದೆ
ಆರು ಸಲಹಿದಳಲತೆಗುಡಿಯುಡಿದೆ
ಆವನಮೃತ ಫಲವಳಲಿಸಿಕೊಂಡೆ
ಸಾವೆಯ್ದಿದ ಸುತನಳಿನಂ ಕಂಡೆ
ಅಲ್ಲದೊಡೀಯಳಲಪ್ಪುದೆ ನಿನಗೆ
ಇಲ್ಲಿ ವೃಥಾ ಸಾವಪ್ಪುದೆ ನಿನಗೆ

ಹೆತ್ತ ಹೊಟ್ಟೆಯುರಿಯುತ್ತಿದೆ ಮಗನೆ
ಎತ್ತಿದತೋಳಲು ಕೆತ್ತಿದೆ ಮಗನೆ
ಹಾಡುವ ಬಾಯೊಳು ಮಣ್ಣನು ಹೊಯ್ದೆ
ನೋಡುವ ಕಣ್ಣೊಳು ಸುಣ್ಣವ ಹೊಯ್ದೆ
ಪಾಪಿಯೆನ್ನ ನೀನೊಮ್ಮೆಯು ನೋಡಾ
ಕೋಪವನುಳಿದೊಯ್ಯನೆ ಮಾತಾಡಾ
ಅಳಲದಿರವ್ವಾ ಎನ್ನೆಲೆ ಮಗನೆ
ಬಳಲಿದೆ ತಾಯೇ ಎನ್ನೆಲೆ ಮಗನೆ
ನಾನಿದ್ದಿ ಹೆನಂಜದಿರೆಂದೆನ್ನ
ಏನುವನುಮ್ಮಳಿಸದಿರೆಂದೆನ್ನ

ಅರಿಗರುಪುವೆನು ಹೇಳೆಲೆ ಮಗನೆ
ಸಾರಿನ್ನಳಲದಿರೆನ್ನೆಲೆ ಮಗನೆ
ಎನ್ನನೊಯ್ಯಲೇಕೊಲ್ಲೆಯೊ ಮಗನೆ
ನಿನ್ನನಗಲಿಯಿರಲಾಪೆನೆ ಮಗನೆ
ಎನಗಿನ್ನೆಂತೋ ಶಿವನೇ ಶಿವನೆ
ತನಯನನೊಯ್ಯನೆ ಕೊಂದೆಯೊ ಜವನೆ
ಕರುಣಿಸು ಪಾಪಿಗೆ ಪಂಪಾಪತಿಯೆ
ಕರುಣಿಸನಾಥೆಗೆ ಕಾಶೀಪತಿಯೆ
ಕರುಣಿ ಕಾಯ್ದೈ ಗೌರೀರಮಣ
ನರಕಿಯ ನೋಡೆಲೆಯಗಜಾರಮಣ

(ಹರಿಶ್ಚಂದ್ರ ಕಾವ್ಯವನ್ನು ರಾಘವಾಂಕನು ವಾರ್ಧಕ ಷಟ್ಪದಿಯಲ್ಲಿ ರಚಿಸಿದ್ದರೂ, ಪ್ರಸ್ತುತ ಭಾಗವು ಮಂದಾನಿಲ ರಗಳೆಯ ಭಾಗವಾಗಿದೆ. ಚಂದ್ರಮತಿಯ ಪುತ್ರ ಶೋಕದ ತೊಳಲಾಟದ ಸನ್ನಿವೇಶವನ್ನು ವರ್ಣಿಸಲು ಕವಿ ಮಂದಾನಿಲ ರಗಳೆಯನ್ನು ಬಳಸಿಕೊಂಡಿರುವುದು ವಿಶೇಷವಾಗಿದೆ.)

* * *

# ಶವದ ಮನೆ

**– ಚದುರಂಗ**

ಥಣ್...

ಗೋಡೆಗೆ ಜೋತುಬಿದ್ದ ದೊಡ್ಡ ಗಡಿಯಾರ ಬಾಯಿ ತೆರೆದು ಚಿಲ್ಲನೆ ಚೀರಿತು.

ಹನ್ನೆರಡೂವರೆ ಗಂಟೆ!

ವಾರ್ಡಿನ ಬಾಗಿಲಿಗೆ ಆತು ಕುಳಿತು ತೂಕಡಿಸುತ್ತಿದ್ದ ಮುನಿಯ ಬೆಚ್ಚಿ ಬಿದ್ದು ಎಚ್ಚೆತ್ತ

'ಹಾಳು ಗಡಿಯಾರ ಯಾಕಾದರೂ ಕಾಕಿದರೋ ಇಲ್ಲಿ? ಇನ್ನೂ ಸರಿಯಾಗಿ ಒಂದು ಗೊರಕೆ ಹೊಡೀನಿಲ್ಲ. ತಟ್ಟಿ ತಟ್ಟಿ ಏಳಸ್ತದೆ.

ವಾರ್ಡ್‌ಬಾಯ್ ಮುನಿಯ ಗಡಿಯಾರವನ್ನೇ ದುರುದುರನೆ ನೋಡಿದ. ಆದರೆ ಮುನಿಯನ ಕೋಪ ಗಡಿಯಾರದ ಮೇಲೆ ಏನೊಂದು ಪರಿಣಾಮ ಮಾಡಿದಂತೆ ತೋರಲಿಲ್ಲ. ಉದ್ವೇಗರಿಹತವಾಗಿ ತನ್ನ ಪಾಡಿಗೆ ತಾನು ಕಾಲವನ್ನು ಸೂಚಿಸುತ್ತಾ ಸಾಗಿತ್ತು.

ತನ್ನೊಳಗೆ ಏನೇನೋ ಗೊಣಗಿದ ಮುನಿಯ

ಆದರೆ ಅಷ್ಟು ರಾತ್ರಿಯಲ್ಲಿ ಬಹಳಕಾಲ ಹಾಗೆ ಕೋಪಿಸಿಕೊಂಡಿರಲು ಸಾಧ್ಯವೆ?

– ಹೇಗೆ ಸಾಧ್ಯ?

ನಿದ್ದೆಯ ತೊಟ್ಟಿಲು ಒಂದೇ ಸಮನೆ ಅವನ ಕಣ್ಣುಗಳನ್ನು ತೂಗುತ್ತಿತ್ತು. ಬಾಗಿಲಿಗೆ ತಲೆಯೊರಗಿಸಿ ಮತ್ತೆ ಮಲಗಲು ಅನುವಾದ ಮುನಿಯ.

ನಿದ್ದೆ? ಎಲ್ಲಿ ಬಂತು ನಿದ್ದೆ?

ಅದು ಆಸ್ಪತ್ರೆಯ ಒಂದು ವಾರ್ಡ್ ಅಲ್ಲವೆ? ತಾನು ರಾತ್ರಿ 'ಡ್ಯೂಟಿಗೆ ನೇಮಕವಾದ ಒಬ್ಬ ವಾರ್ಡ್ ಬಾಯ್ ಅಲ್ಲವೆ?

– ಅಗೋ ಬಂದಿತು ಆಗಲೇ ಬುಲಾವ್

ಹನ್ನೊಂದನೇ ಬೆಡ್ಡಿನ ರೋಗಿ ಕ್ಷೀಣ ಸ್ವರದಲ್ಲಿ ಕೂಗುತ್ತಿದ್ದ. ವಿಧಿ ಇಲ್ಲದೆ ಬೇಸರದಿಂದ ಎದ್ದು ರೋಗಿಯ ಪಕ್ಕಕ್ಕೆ ಬಂದು ನಿಂತ ಮುನಿಯ.

ರೋಗಿಯ ಸ್ಥಿತಿ ಚಿಂತಾಜನಕವಾಗಿತ್ತು.

ಕಣ್ಣು ಮುಚ್ಚದೆ ನಿದ್ದೆ ಮಾಡುತ್ತಿದ್ದಾನೆ– ಎಂದುಕೊಂಡರೆ ಅವನ ತೆರೆದ ಬಾಯಿಂದ ಗಳಿಗೆಗೊಂದು ಸಲ ಹೊರಡುತ್ತಿದ್ದ ಅಮ್ಮಾ ಎಂಬ ನರಳಾಟದ ಆರ್ತಸ್ವರ ಹುಚ್ಚು ಈ ಸ್ಥಿತಿಯಲ್ಲಿ ನಿದ್ದೆಯಲ್ಲಿ  ಬರಬೇಕು? ಎಂದು ಅಣಕವಾಡುತ್ತಿತ್ತು.

ಮುನಿಯ ತುಂಬಿದ ಮರುಕದಿಂದ ರೋಗಿಯನ್ನೇ ನಿಟ್ಟಿಸಿ ನೋಡಿ.

ಏನೋ ಸಂಕಟವಾದಂತಾಯಿತು. ಕೊಂಚ ಹಾಲನ್ನಾದರೂ ಕೊಟ್ಟರೆ ಸಮಾದಾನವಾಗಬಹುದೆಂದು ಬಗೆದ.

ಆದರೆ ಬಾಯಿಗೆ ಹಾಕಿದ ಹಾಲು ದಕ್ಕದೆ, ಕಟವಾಯಿಂದ ಹರಿದು ಹೊರಗೆ ಚೆಲ್ಲಿ ಹೋಯಿತು.

ನಿಶ್ಚೇಷ್ಟಿತವಾಗಿ ನಿಂತು ನೋಡುತ್ತಿದ್ದ ಮುನಿಯ. ಆ ರೋಗಿಯ 'ಅಮ್ಮಾ ಅಮ್ಮಾ' ಎಂಬ ಒಂದೊಂದು ಕೂಗು ಅವನೆದೆಯ ನಿರಾಶೆಯನ್ನು ವೃದ್ಧಿಸುತ್ತಿತ್ತು.

ನಿಡಿದಾಗಿ ಉಸಿರು ಬಿಟ್ಟು ತಾನು ಹಿಂದೆ ಕುಳಿತಿದ್ದ ಜಾಗಕ್ಕೇ ಬಂದು ಕುಳಿತ.

ಮತ್ತೆ ನಿದ್ದೆ ಮಾಡುವುದೇ?

ಮಾಡಬಹುದಾಗಿತ್ತು.. ಬಂದರಲ್ಲವೆ?

ಸ್ವಲ್ಪ ಕಾಲದ ಹಿಂದೆ ಕವಿದು ಬರುತ್ತಿದ್ದ ನಿದ್ದೆಯ ತೆರೆ ಪೂರ್ಣವಾಗಿ ಹರಿದುಹೋಗಿತ್ತು. ಮನಸ್ಸು ಯವುದೋ ಯೋಚನೆಯ ಸುಳಿಯಲ್ಲಿ ಚಕ್ರಾಕಾರವಾಗಿ ಸುತ್ತುತ್ತಿತ್ತು.

ಏನು ಯೋಚನೆ?

ಇನ್ನೇನು, ಇದೆಯಲ್ಲ– ಹನ್ನೊಂದನೆ ಬೆಡ್! ಅನಿಷ್ಟ. ಒಂದೇ ತಿಂಗಳಲ್ಲಿ ಮೂರು ರೋಗಿಗಳನ್ನು ಬಲಿ ತೆಗೆದುಕೊಂಡಿತ್ತು.

ಈಗ ನಾಲ್ಕನೆಯ ಆಹುತಿಯನ್ನು ನುಂಗಲು ಸಿದ್ಧವಾಗುತ್ತಿದೆಯೋ ಏನೋ..

ಥಣ್..'..'..

ಮತ್ತೆ ಬೆಚ್ಚಿ ಬಿದ್ದ ಮುನಿಯ

ಹಾಳು ಗಡಿಯಾರ! ಪುನಃ ಚೀರುತ್ತಾ ಇದೆ.– ಒಂದು ಗಂಟೆ, ಒಂದು ಗಂಟೆ ಎಂದು. ಮುನಿಯನ ಮನಸ್ಸಿನ ಭಾರ ಶಾಪದ ರೂಪದಲ್ಲಿ ಗಡಿಯಾರದ ಮೇಲೆ ಹರಿದುಹೋಯಿತು.

ಮುನಿಯ ರೋಗಿಗಳು ಶಾಂತವಾಗಿ ಮಲಗಿದ್ದರು ಹನ್ನೊಂದನೆ ಬೆಡ್ ಈಗ ಶಾಂತವಗಿತ್ತು.

ಶಾಂತವಾಗಿತ್ತು!

ಏಕೆ?

ಒಂದೇ ಸಮನೆ ಕೇಳುತ್ತಿದ್ದ ಅಮ್ಮಾ ಅಮ್ಮಾ ಎಂಬ ಕೂಗು ಈಗ ಏಕೆ ಕೇಳಿಬರುತಿಲ್ಲ!

ಏನಾದರೂ...?

ದಡದಡನೆ ಎದ್ದು ರೋಗಿಯ ಹತ್ತಿರ ಓಡಿ ಬಂದ

ಓ! ಉಸಿರೇ ಆಡುತ್ತಿಲ್ಲ.

ಏನು ಮಾಡುವುದು?

ಮಾಡುವುದೇನು.........ಹೋಗಿ ಡಾಕ್ಟರನ್ನು ಕರೆತರುವುದು

~ * ~

ಮುನಿಯ ನೈಟ್ ಡ್ಯೂಟಿ ಡಾಕ್ಟರ ಕೋಣೆಯನ್ನು ಹೊಕ್ಕಾಗ ಅವರು ನಿದ್ರಾದೇವಿಯ ಮಡಿಲಲ್ಲಿ ಮುಖವಿಡುತ್ತಿದ್ದರು.

ಮುನಿಯ ಕೆಮ್ಮಿದ.

ಗಳಿಗೆಯ ಹಿಂದೆ ನಿರ್ಭೀತರಾಗಿ ಮಲಗುತ್ತಿದ್ದ ಡಾಕ್ಟರು ದಿಗಿಲಿನಿಂದ ಒಂದು ಬಾರಿ ನಡುಗಿದರು. ಕೆಮ್ಮಿದಾತ ಮೇಲಧಿಕಾರಿ ಆರ್.ಎಂ.ಓ. ಇರಬೇಕು ಎಂದು ಭಾವಿಸಿದರು.

ನಡುಕ ಹೆಚ್ಚಿತು.

ಮುನಿಯ ನ್ನಕ್ಕು.

ಏಕೆ ಹೆದರುತ್ತೀರಿ, ನಾನು ಮುನಿಯ ಎಂದು ಹೇಳಿದಾಗ ಮಾತ್ರ ಅವರಿಗೆ ಹೊದ ಜೀವ ಬಂದಂತಾಯಿತು.

ನೀನೇನೋ ಎಂದು ಕೇಳಿದರು. ಅವರ ಸ್ವರದಲ್ಲಿ ಇನ್ನೂ ಅಪನಂಬಿಕೆಯ ಲೇಪವಿತ್ತು.

ಊ ಸಾರ್ ಡಾಕ್ಟರ್ ಗಾಬರಿ ನೋಡಿ ಮುನಿಯನಿಗೆ ನಗು ಬಂತು.

ಏನು ಬಂದೆ? ಗಂಭೀರವಾಗಿ ಕೇಳಿದರು ಡಾಕ್ಟರು, ತಾವು ಡಾಕ್ಟರು, ಆತ ವಾರ್ಡ್ ಬಾಯ್ – ಎಂಬ ಧ್ವನಿ ಬೆರೆತ್ತಿತ್ತು ಅವರ ಪ್ರಶ್ನೆ ಯಲ್ಲಿ,

ಹನ್ನೊಂದನೆಯ ಬೆಡ್ಡು ಸಾರ್ ?

ಏನು ಹನ್ನೊಂದನೆಯ ಬೆಡ್ಡು ?

ಅದರ ಪೇಸೆಂಟು ಹೋತು ಸಾರ್

"ಏನೋ ಅದು ನಿನು ಹೇಳ್ತಾ ಇರೋದು?"

ಆ ಪೇಸಂಟು ಸತ್ತು ಹೋತು ಸರ್

ಯಾರೋ? ಆ ಗುಮಾಸ್ತ  ನಾರಣಪ್ಪನನೋ?

ಊ ಸಾರ್

“ಮಲೇರಿಯಾ ಆಗಿದ್ದೋನು?”

“ಎಂಟು ಗಂಟೇಲಿ ನಾನು ನೋಡಿದಾಗ ಚೆನ್ನಾಗಿದ್ದನಲ್ಲೋ?”

ಆಗ ಚೆನ್ನಾಗಿದ್ದ – ಈಗ ಗೊಟಕ್ ಅಂದ. ನೀವೇ ಬನ್ನಿ ಸಾರ್, ಪರೀಕ್ಷೆ ಮಾಡಿ

“ಬೇಡ ಬೇಡ, ಸತ್ತು ಹೋದ ಅಂದ ಮೇಲೆ ಪರೀಕ್ಷೆ ಮಾಡೋದೇನು? ತಗೊಂಡು ಹೋಗಿ ಶವದಮನೆಗೆ ಹಾಕಿಬಿಡು.”

~ * ~

ಶವದ ಮನೆ–ಎಂದರೆ ವಿಸ್ತಾರವಾದ ಒಂದು ಕೋಣೆ, ಅಷ್ಟೆ, ಕತ್ತಲು ತನ್ನ ನಿರಂತರ ಸಾಮ್ರಾಜ್ಯವನ್ನು ಅಲ್ಲಿ ಸ್ಥಾಪಿಸಿಬಿಟ್ಟಂತಿತ್ತು, ಎತ್ತರವಾದ ಮೇಲ್ಮಾವಣಿಗೆ ಅಂಟಿದಂತಿದ್ದ ಸಣ್ಣ ಕಿಟಕಿಯೊಂದರಿಂದ ಅಂಬೆಗಾಲಿಡುತ್ತ ಬರುತ್ತಿದ್ದ ಚಂದ್ರನ ನಸುಬೆಳಕು ದಿಟ್ಟಿಸಿದ್ದ ಕಲೆಗೆ ಹೆದರಿ ಅಷ್ಟು ದೂರದಲ್ಲೇ ನಿಂತಂತಿತ್ತು.

ಗುಮಾಸ್ತೆ ನಾರಣಪ್ಪ “ಅಮ್ಮಾ ಅಮ್ಮಾ” ಎಂದು ನರಳಾಡುತ್ತ ಮಗ್ಗುಲಾಗಿ ಕಷ್ಟಪಟ್ಟು ಮೆಲ್ಲಗೆ ಎದ್ದು ಕುಳಿತುಕೊಂಡ

ನಾರಣಪ್ಪ ಸತ್ತಿರಲಿಲ್ಲ!

ಸತ್ತಿದಾನೆ ಎಂದು ವಾರ್ಡ್‌ಬಾಯ್ ಮುನಿಯ ಹೇಳಿದ, ನಿದ್ದೆ ಹೋಗುವುದರಲ್ಲಿ ಮಗ್ನನಾಗಿದ್ದ ಡಾಕ್ಟರು ಶವದ ಮನೆಯಲ್ಲಿ ಹಾಕು ಎಂದು ಅಪ್ಪಣೆ ಮಾಡಿದರು. ಅದರಂತೆ ಮುನಿಯ ಅವನನ್ನು ಶವದ ಮನೆಗೆ ಎಳೆದು ತಂದು ಹೆಣಗಳ ಮಧ್ಯೆ ಹಾಕಿದ್ದ.

ನಾರಣಪ್ಪ ಎದ್ದು ಕುಳಿತವನೇ ಸುತ್ತ ನೋಡಿದ

ಎತ್ತ ತಿರುಗಿದರೂ ಅವನ ಕಣ್ಣಿಗೆ ಕಾಣಿಸಿದ್ದು ಒಂದೇ – ಕಪ್ಪು ಕಪ್ಪು ಕತ್ತಲೆ!

ವಾರ್ಡಿನಲ್ಲಿ ಸುತ್ತಲೂ ಇದ್ದ ಬೆಡ್‌ಗಳು ಏನಾದವು? ಒಂದಾದರೂ ಕಾಣುತ್ತಿಲ್ಲವಲ್ಲ!

ತನ್ನ ಬೆಡ್ ಏನಾಯಿತು?

ಇಲ್ಲ..ಇಲ್ಲವೇ ಇಲ್ಲ!!!

ಆಹಾ, ಎಷ್ಟು ತಣ್ಣಗಾಗುತ್ತಿದೆ? ನೆಲದ ಮೇಲೆ ಮಲಗಿರುವಂತಿದೆಯಲ್ಲಾ? ಜ್ವರ ಬಂದವರನ್ನು ನೆಲದ ಮೇಲೆ ಮಲಗಿಸುವುದೆ?

ಏನು ಕೇಡು ಬಂದಿದೆಯೋ ಈ ಜನಕ್ಕೆ !

ಗುಮಾಸ್ತ ನಾರಣಪ್ಪ ಮೈ ಮುರಿದು ದೀರ್ಘವಾಗಿ ಆಕಳಿಸಿದ.

ಆದರೆ ಆಕಳಿಕೆ ಅರ್ಧದಲ್ಲಿಯೇ ನಿಂತಿತು.

ಏನಿದು

ಶೋಕದ ಗೀತೆ... ಕತ್ತಲ ಕುಹರದಿಂದ ಅವ್ಯಾಹತವಾಗಿ ಏಳುತ್ತಿತ್ತು, ನಾರಣಪ್ಪ ಕುತೂಹಲದಿಂದ ಆಲಿಸಿದ.

ಅಲಿಸುತ್ತ ಆಲಿಸುತ್ತ ಅವನ ಬಲಗಡೆ ಅಷ್ಟು ದೂರದಲ್ಲಿ ಏನೋ ಮಿಂಚಿದಂತಾಯಿತು.

ಏನಾಶ್ಚರ್ಯ !.....ಹೆಣದ ಆಕೃತಿ,ಛೆ ಛೆ ಹೆಣ ಅಲ್ಲ.

ಹೆ..ಣ್ಣು!!!

ಆ ಹೆಣ್ಣು ಪ್ರಲಾಪಿಸುತ್ತಿತ್ತು......ಪ್ರಲಾಪ ದಿವ್ಯಗೀತೆಯಾಗಿ ಶವದ ಮನೆಯನ್ನು ತುಂಬುತ್ತಿತ್ತು.

ನಾರಣಪ್ಪ ದಿಗಿಲಿನಿಂದ ನಡುಗಿದ.

ಆ ಆಕೃತಿ ಹೆಣ್ಣಲ್ಲದಿದ್ದರೆ – ಆ ಹೆಣ್ಣು ಸುಂದರಿಯಾಗಿರದೆ ಇನ್ನೂ ಭಯ ಹುಟ್ಟಿಸು ವಂತಿದ್ದರೆ – ನಾರಣಪ್ಪ ಕೂಡಲೇ ಮೃತನಾಗುತ್ತಿದ್ದನೋ, ಏನೋ!

ಆ ಘೋರಾಂಧಕಾರದಲ್ಲಿ ಹೆಣ್ಣಿನ ಆಕಾರ ಮಾತ್ರ ಬೆಳಕಾಗಿತ್ತು–ಕಾಳರಾತ್ರಿಯಲ್ಲಿ ಬಳಕುವ ಬಳ್ಳಿ ಮಿಂಚಿನಂತೆ!

ಹೆಣ್ಣು ನಾರಾಣಪ್ಪನ ಇರುವಿಕೆಯನ್ನು, ಸಾಮ್ರಾಜ್ಯವನ್ನು ಗಮನಿಸಿದಂತೆ ತೋರಲಿಲ್ಲ. ಮಂಡಿಯನ್ನು ಮಡಿಸಿ ಕುಳಿತು, ನೀಳವಾದ ಕೂದಲ ರಾಶಿಯನ್ನು ಸುತ್ತಲೂ ಹರಡಿ ಎದುರಿಗೆ ಯಾವುದೋ ಕಾಣದ ಮುವನ್ನು ಶೂನ್ಯ ದೃಷ್ಟಿಯಲ್ಲಿ ನಿಟ್ಟಿಸುತ್ತಾ ಮೂಕವೇದನೆಯನ್ನು ಹೊರಸೂಸುತ್ತಿತ್ತು.

ನಾರಣಪ್ಪ ಕಣ್ಣುಗಳನ್ನು ಉಜ್ಜಿ, ಉಜ್ಜಿ ನೋಡಿದ– ತನ್ನ ಕಣ್ಣಿಗೆ ಇಷ್ಟು ಸ್ಪಷ್ಟವಾಗಿ ಕಾಣುತ್ತಿರುವ ಪವಾಡ ಕನಸಲ್ಲವೇ? ಅಲ್ಲವೆ?

ಹಿ–ಹಿ–ಹಿ!!!

ಕತ್ತಲ ಎದೆಯನ್ನು ಸೀಳುತ್ತ ಎದ್ದಿತು ಗಂಡು ನಗುವಿನ ಅಟ್ಟಹಾಸದ ಕೇಕೆ! ನಾರಣಪ್ಪ ಭೀತಿಯಿಂದ ಥರಥರಸೆ ನಡುಗುತ್ತ ಸದ್ದು ಎದ್ದ ಕಡೆ ತಿರುಗಿದ

ಹಿ–ಹಿ–ಹಿ!!!

ಕೇಕೆ ಅದರ ಬೆನ್ನಿಗೇ ಮಿಂಚನ ಪ್ರಕಾಶ!

ಮಧ್ಯವಯಸ್ಸಿನ ಗಂಡಸೊಬ್ಬ ನಗುನಗುತ್ತ ಎದ್ದು ಕುಳಿತ.

ದಿಗಿಲಿಂದಲೇ ಆ ವ್ಯಕ್ತಿಯನ್ನು ವೀಕ್ಷಿಸಿದ ನಾರಣಪ್ಪ.

ವಿಶಾಲವಾಗಿ ಸಣ್ಣ ದಿಣ್ಣೆಯಂತೆ ಕೊಂಚ ಉಬ್ಬಿದ ಹಣೆ, ಸಣ್ಣದಾದರೂ ಮೊನೆಯಾದ ಚುಚ್ಚುನೋಟದ ಕಣ್ಣು, ಪೊದೆಯಾಗಿ ಬೆಳೆದು ತುಟಿಯ ಅಂಚುಗಳಲ್ಲಿ ಬರಲಾಗಿ ಬಾಗಿದ ಮೀಸೆಯ ಠೀವಿ. ನಗುವಿನ ಉಲ್ಲಾಸದಿಂದ ಪ್ರದರ್ಶಿತವಾದ ಬೆಳ್ಳಕ್ಕಿಗಳಂತೆ ಸಾಲಿಟ್ಟ ಬಿಳಿಯ ಹಲ್ಲುಗಳು.

ಆ ವ್ಯಕ್ತಿಯನ್ನು ನೋಡುತ್ತ ನೋಡುತ್ತ ನಾರಣಪ್ಪನಿಗೆ ಅನ್ನಿಸಿತು

'ಆ ವ್ಯಕ್ತಿ ಹುಟ್ಟಿದಾಗ ನಗುವನ್ನೂ ತನ್ನ ಜೊತೆಗೆ ಕಟ್ಟಿಕೊಂಡು ಹುಟ್ಟಿರಬೇಕು

ವ್ಯಕ್ತಿ ನಗುನಗುತ್ತಲೇ ನಾರಣಪ್ಪನೆಡೆಗೆ ತನ್ನ ದೃಷ್ಟಿ ಬೀರಿದ, ನಾರಣಪ್ಪನನ್ನೇ ನೋಡನೋಡುತ್ತಾ ವ್ಯಕ್ತಿ ಕಣ್ಣಿನಲ್ಲಿ ಅಚ್ಚರಿ ತುಂಬಿತು.

ಈ ಮಾತುಗಳನ್ನಾಲಿಸಿ ಕಕ್ಕಾಬಿಕ್ಕಿಯಾದ ನಾರಣಪ್ಪ ಕೇಳಿದ.

ಏನಪ್ಪಾ ನೀನು ಹೇಳ್ತಾ ಇರೋದು?

ಅರ್ಥ ಆಗಲ್ವಾ? ನೋಡು ನೀನು ಇನ್ನೂ ಬದುಕಿದ್ದೀಯಾ, ಆದರೂ ಇಲ್ಲಿ ತಂದು ಹಾಕಿದ್ದಾರೆ.

ಇಲ್ಲಿ ಅಂದ್ರೆ–ಇದು ಆಸ್ಪತ್ರೆ ಜನರಲ್ ವಾರ್ಡ್ ಅಲ್ಲವೇ?

"ಹೂ–ಹೂ–ಹೂ ...ಜನರಲ್ ವಾರ್ಡ್! ಅದು ಇಲ್ಲಿಗೆ ಅರ್ಧ ಫರ್ಲಾಂಗ್ ಆಗುತ್ತೆ.

ಅಂದರೆ ಇದು ಯಾವ ಸ್ಥಳ?

"ಇದು ಆಸ್ಪತ್ರೆಲಿ ಸತ್ತು ಹೋಗಿ ವಾರಸುದಾರರು ಇಲ್ಲದೆ ಇರತಕ್ಕ ಹೆಣಗಳನ್ನು ಹಾಕುವ ಜಾಗ ಶವದ ಮನೆ.

ನಾರಣಪ್ಪನ ಹೃದಯದ ಬಡಿತ ಹಟ್ಟಾತ್ತನೆ ನಿಂತಂತಾಯಿತು, ಮೈ ಕೂದಲು ಭಯದಿಂದ ನಿಮಿರಿ ನಿಂತವು, ತಲೆಯಲ್ಲಿ ನೂರು ಕಾಗೆಗಳ ಕರ್ಕಶ ಮೇಳ, ಕಣ್ಣಿಗೆ ಭೀತಿಯ ತೆರೆಮುಸುಕಿತು.

ತಾನು .. ಶವದ ಮನೆಯಲ್ಲಿ ?

ಇರಲಾರದು, ಜ್ವರದ ತಾಪಕ್ಕೆ ಎಲ್ಲೋ ಕನಸು ಬೀಳುತ್ತಿರಬೇಕು, ಎಲ್ಲಾ ಸರಿ ಎಷ್ಟು ಹೊತ್ತಿನತನಕ ಹೀಗೆ ಸುಮ್ಮನೆ ದೆವ್ವದ ಹಾಗೆ ಕುಳಿತುಕೊಂಡಿರುವುದು ಆ ವ್ಯಕ್ತಿ ಒಳ್ಳೆಯವನ ಹಾಗೇ ಕಾಣುತ್ತಾನೆ.

ಮಾತನಾಡಿಸಿ ನೋಡೋಣ–ಇಂಥ ಜಾಗದಲ್ಲಿ ಮೌನವಾಗಿರುವುದಕ್ಕಿಂತ ಏನಾದರೂ ಮಾತನಾಡುವುದೇ ಒಳ್ಳೆಯದು....

ಯಾರಪ್ಪ ನೀನು?

"ನಾನು ವೆಂಕಟರಮಣ, ಕ್ಷೌರಿಕರ ವೆಂಕಟರಮಣ.

ನೀನು ಕ್ಷೌರ ಮಾಡುತ್ತೀಯಾ?'

ಮಾಡ್ತಿದ್ದೆ..... ಓ! ಎಷ್ಟು ಚೆಂದಾಗಿ ಮಾಡ್ತಿದ್ದೆ ಅಂತ? ದೊಡ್ಡ ದೊಡ್ಡ ಮನುಷ್ಯರು ತಮ್ಮ ತಲೆಗಳನ್ನು ನನ್ನ ಕೈಗೆ ಒಪ್ಪಿಸಿಬಿಟ್ಟು ಹಾಯಾಗಿ ಪೇಪರ್ ಓಡ್ತಾನೋ ಸಿಗರೇಟ್ ಸೇದ್ತಾನೋ ಕುಳ್ಳಿರಿಸೋರು. ಅವರ ತಲೆ ಮೇಲೆ ನನ್ನ ಕತ್ತಿ ಆಡೋದು ಅವರಿಗೆ ಗೊತ್ತೆ ಆಗ್ತಾ ಇರಲಿಲ್ಲ. ನಾನು ಎಲ್ಲಾ ಮುಗಿಸಿ 'ಆಯ್ತು, ಏಳಿ ಸ್ವಾಮಿ' ಅಂದಾಗ ಅವರು ಕನ್ನಡಿ ನೋಡಿ ತಲೆದೂಗಿ ಭಲೆ, ಕ್ಷೌರಿಕ ಅಂದರೆ ವೆಂಕಟರಮಣನ ಹೆಸರು ಹೇಳಬೇಕು ಅಂತಿದ್ದರು.

ಹಾಗಿದ್ದರೆ ಈ ಶವದ ಮನೆಗೆ ಹೇಗೆ ಬಂದೆ ನೀನು"?

ಎಲ್ಲ ಆ ಆಸ್ಪತ್ರೆಯ ಪ್ರಭಾವ!

ಹಾಗೆಂದರೆ?

ಕೇಳು – ಒಂದು ದಿನ ರಾತ್ರಿ ಶ್ರೀಮಂತರೊಬ್ಬರ ಮನೆಯ ವರಾಂಡದಲ್ಲಿ ಕ್ಷೌರ ಮಾಡ್ತಾ ಇದ್ದೆ. ಆಗ ಅವರ ಮಕ್ಕಳು ಮನೆ ಮುಂದೆ ಚೆಂಡಾಟ ಆಡ್ತಾ ಇದ್ದರು. ಆ ಚೆಂಡು ಹೋದ ಕಡೆ ತಲೆ ತಿರುಗಿಸಿಬಿಡೋನು. ನನಗೂ ಅವನ ತಲೆ ಹಿಡಿದು ಹತೋಟೀಲಿ ಇಟ್ಟು ಕೊಳ್ಳಬೇಕಾದರೆ ಸಾಕು ಸಾಕಾಗಿ ಹೋಗುತ್ತಿತ್ತು. ಎಷ್ಟು ಹೊತ್ತಿಗೆ ಈ ಮಹಾರಾಯನ ಕ್ಷೌರ ಮುಗಿಯುತ್ತೊ ಅನ್ನೊಹಾಗಾಗಿತ್ತು. ಆದರೆ ಆ ಹೊತ್ತಿಗೆ ಆ ಹುಡುಗರು ಆಡ್ತಾ ಇದ್ದ ಚೆಂಡು ಬಂದು ನಾನು ಕತ್ತಿಯನ್ನು ಹಿಡಿದಿದ್ದ ಕೈಗೆ ಪಟ್ಟನೆ ಬಡೀತು..

'ಆಮೇಲೆ ನಾನು ಹಿಡಿದಿದ್ದ ಕತ್ತಿ ಹೋಗಿ ಆ ಶ್ರೀಮಂತನ ಮೂಗನ್ನು ಕೆತ್ತಿಹಾಕಿತು

ಹಿ–ಹೀ–ಹೀ

ಆಮೇಲೆ!

ಚೆನ್ನಾಯಿತು.

'ಅಷ್ಟೇ ಆಗಿದ್ದರೆ ಚೆನ್ನಾಗಿತ್ತು. ಆದರೆ ಹಾಳು ಕತ್ತಿ ಬಂದು ನನ್ನ ಎಡದ ಕೈಗೂ ತಗಲಿತು.

ಛೇ ಛೇ

"ಛೆ, ಇಲ್ಲ, ಛಿ ಇಲ್ಲ. ಕೇಳು" ಆಮೇಲೆ ಅವನ್ನೂ ನನ್ನನ್ನೂ ಇದೇ ಆಸ್ಪತ್ರೆಗೆ ತಂದು ಹಾಕಿದರು.

"ಏಕೆ ನಿನಗೆ ಅಷ್ಟು ದೊಡ್ಡ ಗಾಯವಾಯಿತೆ?"

ಗಾಯ ದೊಡ್ಡದಾಗಿಲ್ಲದೇ ಇದ್ದರೂ ರೋಗ ದೊಡ್ಡದಾಗಿತ್ತು,

"ಅಂದರೆ,

ಆ ಮಹಾರಾಯ ಎಲ್ಲೋ ರೋಗ ಹತ್ತಿಸಿಕೊಂಡಿದ್ದ. ಸರಿ ಆ ರೋಗ ಜೊತೇಲೇ ನನ್ನ ಬೆರಳಿನ ರಕ್ತಕ್ಕೆ ಬೆರೆತುಹೋಯಿತು.

'ಅಯ್ಯೋ ಅನಿಷ್ಠ! ಅದಕ್ಕೆ ಆಸ್ಪತ್ರೆಲಿ ಔಷಧ ಕೊಟ್ಟು ತಾನೇ?

"ಆಸ್ಪತ್ರೆಲಿ ಔಷಧ' .....ಬಡವರಿಗೆಲ್ಲಯ್ಯಾ ಔಷಧ ಕೊಡ್ತಾರೆ ಈ ಆಸ್ಪತ್ರೆಗಳಲ್ಲಿ, ಇವು ಇರೋದೆಲ್ಲ ಶ್ರೀಮಂತರಿಗೆ ನೋಡು, ಮೂಗು ಕತ್ತರಿಸಿ ಹೋದರೂ ಆ ಶ್ರೀಮಂತ ಬದುಕಿಕೊಂಡು ಸುಖವಾಗಿ ಮನೆಗೆ ಹೋದ. ಬರೀ ಬೆರಳು ಕತ್ತರಿಸಿದ ನಾನು ವೃಥಾ ಜೀವ ಬಿಟ್ಟು ಈ ಶವದ ಮನೆ ಸೇರಬೇಕಾಯಿತು."

ಎಂಥಾ ಅನ್ಯಾಯ

ಅನ್ಯಾಯ...ಹಿ–ಹಿ–ಹಿ ಈ ಸಮಾಜದಲ್ಲಿ ಎಲ್ಲಾ ನ್ಯಾಯವೇ....ಈಗ

ಆ ಹುಡುಗಿ ಇದಾಳೆ ನೋಡು

ಹೂ ಎಂದು ಅವಳ ಕಡೆ ತಿರುಗಿದ ನಾರಣಪ್ಪ.

ಶೋಕದ ಗೀತೆ ಒಂದೇ ಸಮನೆ ಸಾಗಿತ್ತು.

ಇವಳ ಹೆಸರು ಮಹಾದೇವಿ.

ಹೇಳು, ಇವಳ ಗಂಡ ಮಲ್ಲಿಕಾರ್ಜುನಯ್ಯನ ಜೊತೆ ಅವಳೂ ಮಿಲ್ಲಿನಲ್ಲಿ ಕೆಲಸಕ್ಕೆ ಸೇರಿದ್ದಳು.

ಜೀವನ ಹೇಗೋ ನಡೀತಾ ಇತ್ತು. ಹೇಗೋ ಏನು ಚೆನ್ನಾಗಿನೇ ನಡೆತಾಯಿತ್ತು

ಹೊಟ್ಟೆಗೆ ಸರಿಯಾಗಿ ಇಲ್ಲದೆ ಇದ್ದರೂ ಇವರ ಚಿಕ್ಕ ಸಂಸಾರ ಚೊಕ್ಕವಾಗಿ ನಡೆದಿತ್ತು.

ಮಲ್ಲಿಕಾರ್ಜುನಯ್ಯ ಮಹಾದೇವಿಯನ್ನು ತುಂಬ ಇಷ್ಟಪಡುತ್ತಿದ್ದ. ಮಹಾದೇವಿಯು ಅವನನ್ನು ಪ್ರೀತಿಸುತ್ತಿದ್ದಳು. ಇವರಿಬ್ಬರನ್ನೂ ಸುತ್ತಿಕೊಂಡಿದ್ದ ಪ್ರೇಮ ದೇವತೆಗಳೂ ಕರುಬುವಂಥಾ ಪ್ರೇಮ ನೋಡು, ದೇವತೆಗಳು ಕರುಬಿದರೆ ಏನೋ ಒಂದ ಅಚಾತುರ್ಯ ನಡೆದುಹೋಯ್ತು.

ಏನಾಯಿತು.

ಒಂದು ಮಧ್ಯಾಹ್ನ ಕೂಲಿ ತೆಗೆದುಕೊಳ್ಳಲು ಮಿಲ್ಲಿನ ಮ್ಯಾನೇಜರ್ ಆಫೀಗೆ ಇವಳು ಹೋದಾಗ ಆತ ಬಲಾತ್ಕಾರವಾಗಿ ಇವಳ ಮಾನಭಂಗ ಮಾಡಿದ....

ವೆಂಕಟರಮಣಯ್ಯ ಇದನ್ನು ಹೇಳುವಾಗ ಮಹಾದೇವಿಯ ಆಕೃತಿ ನಡಗುತ್ತಿತ್ತು.. ಶೋಕಗೀತ ಉನ್ಮತ್ತವಾಗಿ, ಕರುಣಾಜನಕಗಿ ಕರುಳು ಕೊರೆಯುವಂತೆ ಶನದ ಮನೆಯ ಅತ್ತಿ ಅಡಚಣೆಗಳನ್ನು ದಾಟಿ ಹೊರಹೊಮ್ಮಲು ತವಕಿಸುತ್ತಿತ್ತು.

"ಇದಾದಮೇಲೆ ಮಹಾದೇವಿಗೆ ಜೀವನವೇ ಬೇಸರವಾಯಿತು. ಗಂಡನಿಗೆ ಮುಖ ತೋರಿಸಲು ನಾಚಿಕೆಯಾಯಿತು. ಮಲ್ಲಿಕಾರ್ಜುನಯ್ಯ ಮನೇಲಿಲ್ಲದೆ ಇದ್ದಾಗ ಸೀಮೆಎಣ್ಣೆನ ಮೈಮೇಲೆ ಸುರಿದುಕೊಂಡು ಬೆಂಕಿ ಹತ್ತಿಸಿಕೊಂಡು ಬಿಟ್ಟಳು, ಸೀರೆ ಹತ್ತಿಕೊಂಡು ಉರೀತಾ ಇತ್ತು. ಅಷ್ಟರಲ್ಲಿ ಮಲ್ಲಿಕಾರ್ಜುನಯ್ಯ ಎಲ್ಲೋ ಹೋಗಿದ್ದೋನು, ಮನೆಗೆ ಬಂದು ಇವಳ ಸ್ಥಿತಿ ನೋಡಿದಾಗ, ಅವನ ಎದೆ ಜಗ್ ಎಂದಿತು. ಬೇಗ ಬೇಗ ಕಂಬಳಿ ತಂದು ಇವಳ ಮೈ ಮೇಲೆ ಸುತ್ತಿ ಬೆಂಕಿ ಆರಿಸಿದ ಆಮೇಲೆ ಇವರನ್ನು ಕರೆದುಕೊಂಡು ಈ ಆಸ್ಪತ್ರೆಗೆ ಬಂದ. ಇಲ್ಲಿ ಬೆಡ್ ಖಾಲಿ ಇಲ್ಲ: ಅದಿಲ್ಲ ಇದಿಲ್ಲ' ಅಂತ ಬಾಳ ಗೊಣಗಿದ ಮೇಲೆ ಏನೋ ಹೋಗಲಿ ಅಂತ ಸೇರಿಸಿಕೊಂಡರು. ನೀನಿದ್ದೆಯಲ್ಲಾ ವಾರ್ಡ್, ಅದರ ಪಕ್ಕದ ಹೆಂಗಸರ ವಾರ್ಡಿನಲ್ಲಿ ಜಾಗ ಇಲ್ಲ ಅಂತ ಹೇಳಿ ವರಾಂಡದಲ್ಲಿ ಇವರನ್ನು ಮಲಗಿಸಿದರು. ಇವರ ಸುಟ್ಟ ಗಾಯಗಳಿಗೆ ಸರಿಯಾಗಿ ಟರ್ಪೆಂಟೈನ್' ಹಚ್ಚೋರೂ ಗತಿ ಇರಲಿಲ್ಲ ಈ ಆಸ್ಪತ್ರೆಯಲ್ಲಿ ! ಬಡವರು ಅಂದರೆ ಇದ್ದರೂ ಇಲ್ಲವಾಗಿ ಬುಡತ್ತದೆ, ನಾರಣಪ್ಪ"

"ಆಮೇಲೇನು, ಯಾರೂ ಸರಿಯಾಗಿ ನೋಡಿಕೊಳ್ಳದೆ ಇವಳು ಗೊಟಿಕ್ ಅಂದಳು. ಸರಿ ಪೀಡೆಮುಖ ನೋಡೋದೆ ತಪ್ಪಿತೂ ಅಂತ ಇವಳ ಹೆಣಾನ ಎಳೆದು ತಂದು ಈ ಶವದ ಮನೆಗೆ ಹಾಕಿದರು.

ಏಕೆ ಮಲ್ಲಿಕಾರ್ಜುನಯ್ಯ ಇವಳ ಶವಸಂಸ್ಕಾರ ಮಾಡಲಿಲ್ಲವೆ?"

ಎಲ್ಲಿ ಮಾಡೋದು? ಇವಳು ಸತ್ತಲು ಅಂದಕೂಡಲೆ ಅವನಿಗೆ ಹುಚ್ಚು ಹಿಡೀತು..

ವೆಂಕಟರಮಣಯ್ಯನ ಮಾತು ಇನ್ನೂ ಮುಗಿದಿರಲಿಲ್ಲ, ಮಹಾದೇವಿಯ ಸಂಕಟದ ಆರ್ತನಾದ ಇದ್ದಕ್ಕಿದ್ದಂತೆ ಮತ್ತಷ್ಟು ಉಲ್ಬಣವಾಗಿ ಭೀಕರವಾಯಿತು. ಸಣ್ಣಗೆ ಉರಿಯುವ ಜ್ವಾಲೆ ರೊಯ್ಯನೆ ಬೀಸುವ ಗಾಳಿಯ ಆಘಾತಕ್ಕೆ ಧಗ್ಗನೆ ಕೆದರಿ ಏಳುವಂತೆ, ಮಹಾದೇವಿಯ ಹೃದಯ ಯಾತನೆಯ ನೆನಪಿನ ಸುಂಟರಗಾಳಿಯಲ್ಲಿ ಹುಚ್ಚು ಹೆಚ್ಚಾದಂತಿತ್ತು.

ಮಹಾದೇವಿ ತನ್ನ ಪ್ರೇಮದ ಪಾತಿವ್ರತ್ಯಕ್ಕಾಗಿ ತನ್ನ ತನುವನ್ನೇ ನೀಗಿಕೊಂಡಿದ್ದಳು.

ಎಂತಹ ಭವ್ಯಬಾಳು ಇದು!

ಮಹಾದೇವಿಯಂಥ ಪತಿವ್ರತೆಯ ಸಾಮಾನ್ಯ ನಾರಣಪ್ಪನಿಗೆ ವಿಚಿತ್ರವಾಗಿ ತೋರಿತು. ಸತ್ತು ಬದುಕಿದಳು ಮಹಾದೇವಿ ಎಂದುಕೊಂಡ.

ಹೊರಗೆ ಬದುಕಿದವರ ಜೀವನ ಎಷ್ಟು ಹೇಯವಾಗಿದೆ ಎಂದು ನೆನೆಸಿಕೊಂಡಾಗ ನಾರಣಪ್ಪನಿಗೆ ಮಹಾದೇವಿಯ ಪವಿತ್ರಾತ್ಮದ ಸನ್ನಿಧಿಯಲ್ಲಿಯೇ ಬಾಳುವುದು ಲೇಸು ಎನಿಸಿತು.

~ * ~

'ಈತ ವಾರ್ಡಿನಲ್ಲಿ ಸತ್ತಿರಲಿಲ್ಲ. ಜ್ವರದ ತಾಪದಿಂದ ಮೂರ್ಛೆ ಹೋಗಿದ್ದ. ಇಲ್ಲಿಗೆ ತಂದುಹಾಕಿದಮೇಲೆ ಜ್ಞಾನ ಬಂತು ಸುತ್ತ ಹೆಣ ಬಿದ್ದಿದ್ದು ನೋಡಿ ಗಾಬರಿಯಾಯಿತು. ಆ ಭೀತಿಯಿಂದ ಹೃದಯಸ್ತಂಭನವಾಗಿ ಕಡೆಗೆ ಸತ್ತು ಹೋಗಿದ್ದಾನೆ" ಎಂದರು.

(ನಾಟಕದ ಆಯ್ದ ಭಾಗವನ್ನು ಪಠ್ಯವನ್ನಾಗಿಸಲಾಗಿದೆ.)

* * *

# ಸ್ಮಶಾನ ಕುರುಕ್ಷೇತ್ರಂ

**– ಕುವೆಂಪು**

(ಮುದುಕಿ ಮಗನನ್ನು ಎಲ್ಲಿಯೂ ಕಾಣದೆ ಬಳಲಿ ಬರುತ್ತಾಳೆ.)

ಮುದುಕಿ : ಇದೇನ್ ಮಾರಿಯಾಟಂ? ಇನಿತು ಜನಂ ತಿರುಗುತಿರ್ಪ ಈ ಕತ್ತಲೆಯಬಯಲಿನೊಳ್

ನನ್ನನ್ ಕೇಳ್ವರೆ ಇಲ್ಲ, ಎಲ್ಲರುಂ ಪಡುಕು ತಿರ್ಪರೆ ಪೊರತು, ತೋರ್ಪರನ್ ಕಾಣೆನ್, ಓ ನಾರಾಯಣಾ, ಎಲ್ಲಿರುವಯ್? ನುಡಿಯಯ್ – ಮಕ್ಕಳಿಲ್ಲದ ಮುದುಕರನ್ ಕೇಳ್ವರಾರ್? ಮಗೂ, ನೀನ್ ನನ್ನೊಡನಿರಲ್ ಎಲ್ಲಗರ್ಂ ನಾನ್ ನಚ್ಚಿನವಳಾಗಿರ್ದೆನ್, ನೀನ್ ತುಳಿಲಾಳೆಂದು ತಿಳಿದು ದೊರೆಯ ಸೇನಾಧಿಕಾರಿಗಳುಂ ನನ್ನೆಡೆಗೆ ಬಂದು ನೂರಾರು ಸವಿನುಡಿಗಳಿಂ, ಕವಡಾಸೆಗಳಿಂ ಬೆನ್ನನ್ ತಟ್ಟಿ ಬೋಳೈಸಿ, ದೇಶಾಭಿಮಾನಂ ಸ್ವಾಮಿಭಕ್ತಿ ಧರ್ಮನಿಷ್ಠೆ ಕಾತ್ರಧರ್ಮಂ ಮೊದಲಹ ಸಮಯಕ್ಕೊದಗುವ ಉಪಾಯವೇದಾಂತಮಂ ಪೇಳ್ದು ನಿನ್ನನ್ ಕೊಂಡೊಯ್ದುರ್, ನಾನುಂ ಮಾತಿಗೆ ಮರುಳಾದೆನ್, ಈಗಳೆಲ್ಲಿ ಆ ತತ್ತ್ವಂಗಳುಂ, ಆ ಅಧಿಕಾರಿಗಳುಂ, ಆ ಭಕ್ತಿಧರ್ಮಾಭಿಮಾನಗಳುಂ? ಎಲ್ಲ ಬರುಪುಸಿಯಲ್ತೆ? ತಿಳಿಯದವರ್ಗೆ ತಿಳಿದವರೊಡ್ಡುವ ಬಲೆಯುರುಳ್ಗಣ್ಣೆಗಳಲ್ತೆ? ಅಂತುಂ ಶ್ರೀಮಂತರ ಕಲಹಾಗ್ನಿಗೆ ೦ುಜ್ಞ ಪಶುಗಳೆಮ್ಮಂತಹದರಿದ್ರರಲ್ತೆ?

(ಮುದುಕಿ ತಲೆಯ ಮೇಲೆ ಕೈಹೊತ್ತುಕೊಂಡು ಕುಳಿತು ಚಿಂತಿಸುತ್ತಾಳೆ. ಮಾತೆಯೂ ಕಂದನೂ ಪ್ರವೇಶಿಸುತ್ತಾರೆ.)

ಕಂದ : ಅಮ್ಮಾ, ನಾನಿನ್ನು ನಡೆಯಲಾರೆ!

ಮಾತೆ : ಬಾ ಮಗೂ, ಎತ್ತಿಕೊಳ್ವೆನ್. (ಎತ್ತಿಕೊಂಡು ಮುಂದೆ ನಡೆದು ಮುದುಕಿಯನ್ನು ಕಂಡು) ಯಾರಲ್ಲಿ? (ಹತ್ತಿರ ಹೋಗಿ ನೋಡಿ) ಅಷ್ಟೇ, ಇದೇಕಿಲ್ಲಿ ಕುಳಿತಿರುವೆ?

ಮುದುಕಿ : (ತಲೆಯೆತ್ತಿ ನೋಡಿ) ತಾಯಿ, ನನ್ನ ಮಗು ನಾರಾಯಣನನ್ ಹುಡುಕಿ ಹುಡುಕಿ ಸೋತು ಸುಣ್ಣವಾದೆ. ಅಯ್ಯೋ ಎಲ್ಲಿರ್ಪನೋ ಏನೋ? ಪೇಳ್ವರಿಲ್ಲ, ಕೇಳ್ವರಿಲ್ಲ; ನನ್ನಗಿನ್ನೇನ್ ಗತಿ? ಪೇಳಮ್ಮಾ! ಕಡೆಗಾಲದೊಳ್ ಕಲ್ಲೆಡವಿದಂತಾಯ್ತು (ಕೂಸನ್ನು ನೋಡಿ) ತಾಯಿ, ಈ ಮಗುವನೇಕೆ ಇಲ್ಲಿಗೆಳೆತಂದಿರುವೆ? ಈ ರಾತ್ರಿಯ ರುದ್ರ ಭೂಮಿಗೆ?

ಮಾತೆ : ಅಜ್ಜೀ, ಗುಡಿಸಲೊಳಾರುಮಿಲ್ಲ; ಇವನನ್ ಬಿಟ್ಟರೆನಗಿನ್ನಾರುಂ ಗತಿಯಿಲ್ಲ. ಕದನ ಕೈತಂದ ನನ್ನ ಪತಿಯನರಸಿ ಬಂದಿಹೆನು – ಈ ಹಬ್ಬಯಲಿನ ಹೆಣದ ಬಣಬೆಯೊಳು ಕಾಣಿಸದೇನುಂ!

ಮುದುಕಿ : ನಿನ್ನ ಪತಿ ಆರಕಡೆಯವನ್?

ಮಾತೆ : ಪಾಂಡವರ ಪಕ್ಷದವನ್ – ನಿನ್ನ ಪುತ್ರನ್?

ಮುದುಕಿ : ಕೌರವನವನ್.

ಮಾತೆ : ನಿನ್ನ ಮಗನೆನ್ನ ಪತಿಗೆ ಪಗೆಯಾಗಿರ್ದನೇನ್?

ಮುದುಕಿ : ಆರಿಗಾರು ಪಗೆ? ನಿನಗಾನ್ ಪಗೆಯೆ?

ಮಾತೆ : ಉಂಟೇ?

ಮುದುಕಿ : ನಮ್ಮವೋಲಿಹ ಬಡಜನಂಗಳೆಲ್ಲ ಮಂಕುಗಳಮ್ಮಾ, ಪಾಂಡವರ್ ಕೌರವರ್ ನೆಲಕೆ ಪೊಯ್ದಾಡಿದರೆ ನಮ್ಮ ಮಕ್ಕಳ್ ಅವರಿವರಂ ಕೆಳೆಗೊಂಡು ನಿಂತು ಹೆಮ್ಮೆಗೆ ಬಡಿದಾಡಿ ಮಡಿಯುವರ್. ನನ್ನ ಮಗುಗೆ ನಿನ್ನಾತನಮೇಲೆ ಪಗೆಯೆನ್? – ನಾವಿರ್ವರುಂ ದುಃಖಾರ್ತರಮ್ಮಾ! ಬಾ, ಹುಡುಕಿ ನೋಡುವಂ.

(ಇಬ್ಬರೂ ಹೆಣಗಳ ನಡುವೆ ಕತ್ತಲಲ್ಲಿ ಸ್ವಲ್ಪ ಸ್ವಲ್ಪ ದೂರದಲ್ಲಿಯೆ ತಿರುಗುತ್ತ ಹುಡುಕುತ್ತಾರೆ. ಒಂದೆಡೆ ಮಾತೆ ನಿಂತು ಚೀರಿ ಮಗುವನ್ನು ಕೆಳಗಿಳಿಸಿ ರೋದಿಸುತ್ತಾಳೆ. ಅಲ್ಲಿ ಇಬ್ಬರು ಭಟರು ಒಬ್ಬರನ್ನೊಬ್ಬರು ಭರ್ಜಿಗಳಿಂದ ತಿವಿದು ಮಡಿದಿದ್ದಾರೆ. ಒಬ್ಬನು ಮುದುಕಿಯ ಮಗನು, ಮತ್ತೊಬ್ಬನು ಮಾತೆಯ ಪತಿ, ಮುದುಕಿ ರೋದನವನ್ನು ಆಲಿಸಿ ಓಡಿಬರುತ್ತಾಳೆ.)

ಮುದುಕಿ : ಏನಾಯ್ತು ಮಗಳೇ?

ಮಾತೆ : ಅಯ್ಯೋ, ಅಜ್ಜಿ, ನೋಡಿಲ್ಲಿ: ನನ್ನ ಪತಿಯನ್ ಈ ಪಾಪಿ ತಿವಿದು ಕೊಂದಿಹನ್. ಅಯ್ಯೋ –

ಮುದುಕಿ : ಅಯ್ಯೋ, ಅಯ್ಯೋ, ನನ್ನ ಮಗನನ್ ನಿನ್ನ ಪತಿ ತಿವಿದು ಕೊಂದಿಹನಲ್ಲಮ್ಮಾ!

ಅಯ್ಯೋ, ಪಾಂಡವರು ಹಾಳಾಗಲಿ!

ಮಾತೆ : ಅಯ್ಯೋ, ಕೌರವರು ಹಾಳಾಗಲಿ!

(ಇಬ್ಬರೂ ಬಿದ್ದು ಗೋಳಿಡುತ್ತಾರೆ.)

(ಕುರುಕ್ಷೇತ್ರ ಸ್ಮಶಾನದ ಒಂದು ಭಾಗದಲ್ಲಿ ಪಾಂಡವ ಪಕ್ಷದವರ ಚಿತೆ, ಭೀಮ, ಅರ್ಜುನ, ಧರ್ಮರಾಯ, ದ್ರೌಪದಿ – ಎಲ್ಲರೂ ಶೋಕ ವಿಹ್ವಲರಾಗಿ ನಿಂತಿದ್ದಾರೆ, ಸೂಡಿನ ಮೇಲೆ ಅಭಿಮನ್ಯು, ಘಟೋತ್ಕಚರೇ ಮೊದಲಾದವರ ಶವಗಳಿವೆ, ಇದುವರೆಗೂ ಕಲ್ಮನಸ್ಸಿನಿಂದಿದ್ದ ಭೀಮನಿಗೆ ಇಂದು ಸೂಡಿನ ಮೇಲಿದ್ದ ಘಟೋತ್ಕಚನ ಶವವನ್ನು ನೋಡಿ ಮರುಕ ಮಿತಿಮೀರಿಹೋಗಿದೆ. ಅಸ್ಪಷ್ಟರೋದನ ಧ್ವನಿ ಎಲ್ಲೆಲ್ಲಿಯೂ ವ್ಯಾಪಿಸಿದೆ.)

ಧರ್ಮರಾಯ : ಭೀಮಸೇನ, ಮೊದಲ್ಗಯ್ದ ಕಜ್ಜಮಂ ಗೊನೆಗಾಣ್ಬ.
ಅದುದಾಯಿತು; ಚಿಂತೆಯಿಂದೇನ್? ಸೂಡಿಂಗೆ
ಬೆಂಕಿಯಿಡು. (ಭೀಮನು ಗೋಳಿಡುತ್ತಾನೆ.)
ನೀನಿಂತು ಗೋಳಾಡಿದೊಡೆ, ಭೀಮ, ಉಳಿದರಂ
ಸಂತಯ್ಪರಾರ್?

ಭೀಮ : ಅಣ್ಣಾ, ಕೊಲೆಗಾರನ್ ಆನ್ ಎಂಬುದನ್ ಈಗಳರಿತೆನ್.
ಈ ಎನ್ನ ಮುದ್ದು ಶಿಶುಗಳ ಪೆಣಗಳೆಡೆ ನಿಂತು
ಗಾಂಧಾರಿ ಧೃತರಾಷ್ಟ್ರರಳಲಾಳಮಂ ತಿಳಿದನ್.

(ಅರ್ಜುನ ಮೊದಲಾದವರು ಅವನೊಡನೆ ರೋದಿಸುತ್ತಾರೆ)

ಧರ್ಮರಾಯ: (ಸ್ವಗತ) ಬೀರರಾದೊಡಮೇನ್? ಸ್ಥಿತಪ್ರಜ್ಞರಲ್ಲದೀ
ಮಾನವರ್ ಕೋಪಮನೆ ಕೆಚ್ಚೆಂದು ಭ್ರಮಿಸುವರ್.
ಕೋಪಂ ಬತ್ತಲೊಡನೆ ಕೆಚ್ಚುಂ ಕರಗುವುದು.
ಕೋಪಮೆಂಬಾ ಮದ್ಯಪಾನಮಿಲ್ಲದೆ ಇವರ್
ಕೊಲೆಗೆ ಕೈಯಿಡಲರಿದು !–ಚಿತೆಗೆ ನಾನೇ
ಬೆಂಕಿಯಿಡುವೆನ್ – (ಬೆಂಕಿ ಇಡಲು ಹೋಗಿ ನಿಲ್ಲುತ್ತಾನೆ.)
ಅದಾರಲ್ಲಿ ಬರ್ಪವರ್ ?
ಮಾತೆ ಕುಂತಿದೇವಿ! ಸೋದರನ್ ಸಹದೇವನ್ !
ಆರನೋ ಪೊತ್ತು ತಂದಪರಲ್ತೆ ?

(ಕುಂತಿ ಸಹದೇವರು ಕರ್ಣನನ್ನು ತರುತ್ತಾರೆ. ಎಲ್ಲರೂ ಆ ಕಡೆ ತಿರುಗಿ ನಿಲ್ಲುತ್ತಾರೆ. ಭೀಮನು ಮರುಕವನ್ನು ತೆಗೆದೊಗೆದು ನಿಂತು ಹುಬ್ಬು ಗಂಟಿಕ್ಕಿಕೊಂಡು ದುರದುರನೆ ಕರ್ಣನ ಶವವನ್ನು ನೋಡುತ್ತಾನೆ.)

ಧರ್ಮರಾಯ: ಸಹದೇವ, ಇದೇನಯ್ ?

ಕುಂತಿ : ಓ ಮಗೂ, ಯುದಿಷ್ಠಿರಾ, ಕರ್ಣನನ್ ಇದರೊಳೇ
ದಹನಂ ಗೈವಂತೆನಗೆ ಕೃಪೆಮಾಡ್ಯೆ.

ಧರ್ಮರಾಯ: ತಾಯೆ, ಸುಡುವ ಬೆಂಕಿಗೆ ಕರುಣೆಯಿಲ್ಲ, ಕರುಬಿಲ್ಲ.
ಆದೊಡಂ, ಇದರರ್ಥಮೇನ್? ತಿಳಿಯಲೆಳಸುವೆನ್.

ಕುಂತಿ : ಕಂದಾ, ನಾನಾವುದುಮಂ ಪೇಳಲಾರೆನ್;
ಎನ್ನಾಸೆಯಂ ನೀನ್ ನಡೆಸಿಕೊಡವೇಳ್ಕುಂ.

ಭೀಮ : (ರೋಷದಿಂದ)
ಏಂ ಮಾಳ್ಕೆಯಿದು, ತಾಯೆ? ಎಮ್ಮ ಕುಲಘಾತುಕನ್
ಈತನನ್ ನಾವುರಿಪುವುದೆ? ನೋಡು, ನೋಡಿದನ್;
ಇವನೆ ಕೊಲೆಗೈದಿರ್ಪ ಅಭಿಮನ್ಯು ಘಟೋತ್ಕಚರ್.
(ಕಣ್ಣು ಅರಳಿಸಿ ಸಹದೇವನನ್ನು ನೋಡಿ)
ಸಹದೇವ, ಇದೇನನ್ ನೀನೆಸಗಿರ್ಪೆ! ತೊಲಗಿಸಿಲ್ಲಿಂ
ಈ ಮಿಗದ ಪೆಣಮಂ! (ಕುಂತಿ ಅಳುತ್ತಾಳೆ)

ಧರ್ಮಜಾ, ರೋದನಕೆ
ನೀನಳುಕಿದೊಡೆ ವಿಲಯಮಹುದಿಂದೆ!

ಅರ್ಜುನ : ಅಣ್ಣಾ,
ಅಭಿಮನ್ಯುವನ್ ಬೇಳ್ವ ಬೆಂಕೆ ಕರ್ಣನನ್
ಸುಡಲಾಗದು. – ಈ ಕರ್ಣನಿವನಾರ್ ನಮಗೆ?

ಭೀಮ : ಪಗೆಯ ಕೆಳೆ! ಅಭಿಮನ್ಯುವನ್ ಘಟೋತ್ಕಚನನ್
ಮೋಸದಿಂದಿರಿದವನ್!

ಕುಂತಿ : (ಮರುಗಿ) ಓ ಭೀಮ, ಓ ಅರ್ಜುನ,
ಓ ಎನ್ನ ಕಂದಗಳಿರಾ, ಕೈಮುಗಿದು ಬೇಡುವೆನ್,
ಸೆರಗೊಡ್ಡಿ ಬೇಡುವೆನ್ ಎನ್ನಾಸೆಯಂ ಸಲಿಸಿಂ!
ನಾನ್ ನಿಮಗೆ ತಾಯಿ ಅಹುದಾದೊಡೆ–

ಭೀಮ : ತಾಯೆಂದೆ
ತಿಳಿದಿಂತು ಪೇಳ್ದಪೆನ್.

ಕುಂತಿ : ನಾನ್ ನಿಮಗೆ ತಾಯಲ್ತು;
ಮೇಣಿವಂಗೆ ತಾಯೆಂದು ತಿಳಿದೆನ್ನ ಬಯಕೆಯಂ
ದಯೆಕಾಯಿಂ. ವಾದಿಸದಿರಿಂ, ಓ ನನ್ನ ಪುತ್ರರಿರಾ!

(ಅಶ್ವತ್ಥಾಮನು ಬರುತ್ತಾನೆ)

ಅಶ್ವತ್ಥಾಮ : ಓ ಧರ್ಮಪುತ್ರಾ
ವೀರನೋರ್ವನ ಕಟ್ಟಕಡೆ ಬಯಕೆಯಂ ಸಲಿಸೆ
ಇಲ್ಲಿಗೈತಂದಿಹೆನ್. ವೀರರಾಗಿಹ ನೀವು
ಎನಗೆ ನೆರವಾಗದಂ ನೆರವೇರಿಸಲೆವೇಳ್ಕುಂ.
ಕೌರವೇಂದ್ರನ್ ಮಡಿವ ಮೊದಲೆನ್ನನ್ ಕರೆದು
ಕರ್ಣನನ್ ತನ್ನೊಡನೆ ಸೂಡುಗೈಯಲ್ ಬೆಸಸಿ
ಪೋದನ್. ಪೋದವರ ಬಯಕೆಯಂ ಇರ್ಪವರ್
ಕೈಗೂಡಿಪುದೆ ಧರ್ಮಂ!

ಭೀಮ : ಅಶ್ವತ್ಥಾಮ, ಕರ್ಣನನ್
ಕೊಂಡುಪೋಗಯ್, ನೀನಿವಂಗೆ ಸಂಸ್ಕಾರಂ
ಎಸಗುವುದೆ ಧರ್ಮಂ!

ಕುಂತಿ : ಓ ಅಶ್ವತ್ಥಾಮ
ಕರ್ಣನನ್ ಈ ಎಮ್ಮ ಚಿತೆಯೊಳೇ ದಹಿಪುದಯ್
ಎನ್ನಾಸೆ. ಆ ಬಯಕೆಗಡ್ಡ ಬರಬೇಯ್, ತಂದೆ.

ಅಶ್ವತ್ಥಾಮ : ದೇವಿ, ಕೌರವನಾಶೆ! ಮೇಣೆನ್ನ ಬಾಸೆ!
ಕೈಮುಗಿದು ಕೇಳ್ವೆನ್; ಬೀಳ್ಕೊಡಿಂ ಕರ್ಣನನ್.

ಭೀಮ : ತಮೇನ್? ಕೊಂಡುಪೋಗಯ್, ಅಶ್ವತ್ಥಾಮ!

ಕುಂತಿ : (ಭೀಮನ ಕಡೆ ತಿರುಗಿ ಹೇಳುತ್ತಾಳೆ)
ಓ ಭೀಮ,
ತಾಯಿಗೋಸುಗಮಾದೊಡಂ ಕರಗಲಾರೆಯೇನ್?
ಬೆಂದೊಡಲ್ಗಿಂತು ಕರ್ಬುನಂ ಚುರ್ಚುವರೇನ್?

(ಅಶ್ವತ್ಥಾಮನು ಕರ್ಣನನ್ನು ಕೊಂಡುಹೋಗುತ್ತಾನೆ. ಕುಂತಿ ತಿರುಗಿ ನೋಡಿ ಬಿದ್ದು ಗೋಳಾಡುತ್ತಾಳೆ)

ಓ ಕಂದಾ, ಓ ಕರ್ಣಾ, ನಿನ್ನನಿದಕಾಗಿಯೇ
ಪೆತ್ತೆನೇನ್ ? ಸುಮ್ಮನಿರ್ದಪೆ ಏಕೆ, ಓ ಸಹದೇವ ?

ಧರ್ಮರಾಯ : ಇದೇನಿದು ಸಹದೇವ? ತಾಯಿ ಕರ್ಣನನ್
ಪಡೆದೆನ್ ಎಂದಳಲ್ವಳಲ್ಲಾ!

ಸಹದೇವ : ಮನ್ನಿಸೆನ್ನನ್, ಅಣ್ಣಾ;
ತಾಯಿಯೊಡಲೊಳೆ ಬಂದ ರಾಧೇಯನಮಗೆಲ್ಲ
ಪಿರಿಯಣ್ಣನ್!

ಧರ್ಮರಾಯ : (ಸಿಡಿಲೆರಗಿದವನಂತೆ) ಏನನ್ ಪೇಳ್ವಯ್ ?

ಭೀಮ : ಪುಸಿಯಾಡದಿರ್!

ಅರ್ಜುನ : ಅಯ್ಯೋ ಏನಾದುದು ಕಡೆಗೆ?

ಸಹದೇವ : ವಿವರಂ ಅನಂತರಂ, ನಾನ್ ಪೇಳ್ವುದು ದಿಟಂ!

ಕುಂತಿ : ಓ ಎನ್ನ ಕಂದಾ, ಓ ಕರ್ಣಾ,
ಈಗಳಿವರೆಲ್ಲರು ನಿನ್ನವರೆ, ನಾನೆ,
ಪಾಪಿ ಪರಕೀಯಳಾದೆನಲ್ತೆ ?
ಲೋಕಮಿವರಾರನುಂ ನಿಂದಿಸದು. ಎನ್ನನೋ,
ಮಗನ ಕೊಲ್ಲೆಯಂಗ್ಯೆದ ಕಡುಪಾಪಿ ಎಂದು
ಪೇಸುವುದು! (ಅಳುತ್ತಾಳೆ.)

ಧರ್ಮರಾಯ: ತಾಯೇ, ಏನನೆಸಗಿರ್ಪೆ ನೀನ್ ?

ಅರ್ಜುನ : ಓ ಕೃಷ್ಣಾ, ಪುಸಿವೇಳ್ದು ಕೊಲಿಸಿದೆಯಾ!

ಭೀಮ : ಕಡೆಗುಂ ಪೊಲಸಾದುದೀ ಭಾರತ ಸಂಗ್ರಾಮಂ!

(ದೃಶ್ಯ ಮಾಯವಾಗುತ್ತದೆ.)

ಕುವೆಂಪು ಅವರ ಶ್ಮಶಾನ ಕುರುಕ್ಷೇತಂ ನಾಟಕದ ಎಂಟು ಮತ್ತು ಒಂಭತ್ತನೆಯ ದೃಶ್ಯಗಳನ್ನು ಪ್ರಸ್ತುತ ಭಾಗದಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಕುರುಕ್ಷೇತ್ರದ ಘೋರ ಯುದ್ಧದ ಅನಂತರದ ಪರಿಣಾಮವನ್ನು ಬಿಂಬಿಸುವ ಈ ನಾಟಕದಲ್ಲಿ ಮಾತೆ, ಮುದುಕಿ ಹಾಗು ಕುಂತಿಯ ಭೀಮ ಅರ್ಜುನ ಮೊದಲಾದವರ ವಿಭಿನ್ನ ದುಃಖದ ನೆಲೆಗಳನ್ನು ಅನಾವರಣ ಮಾಡುವ ಭಾಗವಾಗಿದೆ. ಮುದುಕಿ ತನ್ನ ಮಗ ಹಾಗು ಮಾತೆ ತನ್ನ ಪತಿಯನ್ನು ಅರಸಿಕೊಂಡು ಬರುವ ಹಿನ್ನೆಲೆಯಲ್ಲಿ ಎಂಟನೇ ದೃಶ್ಯ ಆರಂಭವಾಗುತ್ತದೆ.

* * *

**ಓದು ಪತ್ಯ**

# ಪುಟ್ಟ ವಿಧವೆ

**– ದ.ರಾ. ಬೇಂದ್ರೆ**

ಆಕೆಯಿದ್ದಳು ಕೂಸು; ಈತನಿನ್ನೂ ಹುಡುಗ
ಅವರ ತಾಯ್ತಂದೆಗಳ ಹಿಗ್ಗು ಎಷ್ಟು!
ಧರ್ಮದಾ ಹೆಸರಿನಲಿ ಅವರ ಕೈ ಕೂಡಿಸಲು
ಇವರಿಗೆನಿಸಿತು ಹರ್ಷ ಹಬ್ಬದಷ್ಟು.

ಕೊರಳ ಕರಿಮಣಿ, ಗಲ್ಲದರಿಷಿಣವು ಮುಗಬೊಟ್ಟು
ಆ ಮೇಲೆ ಉದ್ದು ಕುಂಕುಮದ ಅಂದ!
ಆ ಪುಟ್ಟ ಮುತ್ತೈದೆ ಪುಟಪುಟನೆ ನೆಗೆದಾಡೆ
ಅಷ್ಟೆ ಕಂಡಿತು ಕಣ್ಣಿಗೆಷ್ಟೊ ಚಂದ.

ಆಕೆ ದೊಡ್ಡವಳಾಗಿ ಈತ ಚಿಕ್ಕವನಿದ್ದು
ಶೋಭನವ ಮಾಡಿದ್ದು ಊರಿಗಾಟ!
ಪೆಚ್ಚುಮೋರೆಯ ಅಳಿಯ–ದೇವರಿದಿರಲಿ ಜನಕೆ
ಕಡಿಮೆ ಸಿಹಿಯೆನಿಸಿತ್ತೆ ಪ್ರಸ್ತದೂಟ?

ವರ್ಷವೆಂಬುದರೊಳಗೆ ಚೊಚ್ಚಿಲದ ಸಂಭ್ರಮವು
ದೈವದಾಟವು ಎಂದಿತಿಡಿಯ ಊರು.
ಮಗನು ಬಂದಿರೆ ಇಹಕೆ, ತಂದೆ ಏರಿದ ಪರಕೆ;
ಕ್ಷೀರಸಾಗರವಾಯ್ತು ಉಪ್ಪು ನೀರು.

ತಂದೆ ಹಿಡಿದಿಹ ಹಾದಿ ಒಂದೆರಡು ದಿನದಲ್ಲಿ
ಕೂಸು ಹಿಡಿದಿತು, ತಾಯಿಗುಳಿದಿತೇನು?
ಮೈ–ಗೋರಿಯಲಿ ಮಡಗಿ ಜೀವ, ಜೀವನವಾಯ್ತು
ಜೇನುಹುಳ ಉಳಿದಂತೆ ಕಳೆದು ಜೇನು.

ಸತ್ತೆನೆಂದಳು ಕೂಸು– ತಾಯಿ ಅಯ್ಯೋ ಎಂದು
ಘೋರೆಂದು ಗೋಳಿಟ್ಟು ಹೊಟ್ಟೆ ಹೊಸೆದು
ಹುಚ್ಚೆದ್ದು ಹೌಹಾರಿ ಹುಯ್ಯಲಿಟ್ಟಳು ಆಕೆ
ತನ್ನ ತಾ ಶಪಿಸಿದಳು ಹಲ್ಲ ಮಸೆದು.

ಹತ್ತು ದಿನಕೆ ಹಾಳು ಮುತ್ತೈದೆತನ ಹೋಗಿ
ವೈಧವ್ಯ ಸಂಪತ್ತು ಪಡೆದಳಾಕೆ;
ಮನೆಯವರು ವೈದಿಕರು, ಊರು ಧರ್ಮದ ತವುರು;
ಶಾಸ್ತ್ರವಿರೆ ಬೇರೆಯ ವಿಚಾರವೇಕೆ?

ತಲೆಭಾರ ಇಳಿದಿತ್ತು, ಅಂಗಾರ ಬೆಳೆದಿತ್ತು;
ಮೈಯನ್ನು ಮುಚ್ಚಿತ್ತು ಕೆಂಪು ಸೀರೆ.
ಆದರಯ್ಯೋ ಪಾಪ! ಆಕೆಯಿನ್ನೂ ಮಗುವು
ಸಿಂಗಾರವಿರದೆ! ಆ ಮಾತೆ ಬೇರೆ.

ಹಿಟ್ಟು ಅವಲಕ್ಕಿಗಳ ಮೂಲಕ್ಕೆ ಹುಟ್ಟಿದಳೊ
ಹೂಬತ್ತಿ ಹೊಸೆಯಲಿಕೆ ಮೈತಳೆದಳೊ,
ಎಂಬಂತೆ ಬಾಳ ಕಳೆದಳು, ಬಾಲೆ; ಹೂಮಾಲೆ
ಮುಳ್ಳುಕಂಟೆಯ ಮೇಲೆ ತಾನೆಳೆದಳೊ!

ನಿಟ್ಟುಸಿರ ಸರದಲ್ಲಿ ಕಂಬನಿಯ ಪೋಣಿಸುತ
ಪುಟ್ಟ ವಿಧವೆಯು ಪುರಾಣಕ್ಕೆ ಬರಲು
ಗುಡಿಯ ಮೂರ್ತಿಗೆ ಮಂಕು ಹಿಡಿದು, ಆಚಾರ್ಯರಿಗು
ಉರುಲಿಕ್ಕಿದಂತೆ ಬಿಗಿದಿತ್ತು ಕೊರಲು.

ಕುರುಡು ಧರ್ಮಕ್ಕೆ ಸ್ಮಾರಕವು ನಿಂತಂತಾಕೆ
ಮೈಮರೆತು ನಿಂತಾಗ್ಗೆ ಗೂಗೆ ಹಾಡಿತ್ತು.
ಮುದ್ರೆಯೊತ್ತುವ ಕಣ್ಣು ಮೋರೆ ನೋಡಿತ್ತೊಮ್ಮೆ
ಜಾರ ಕೃಷ್ಣನ ಕಥೆಗೆ ಕೋಡು ಮೂಡಿತ್ತು!

* * *

# ಮಾದರಿ ಪ್ರಶ್ನೆ ಪತ್ರಿಕೆ
# ಮೂರನೇ ಸೆಮಿಸ್ಟರ್ ಬಿ.ಕಾಂ.
## ಕನ್ನಡ ಪ್ರಶ್ನೆ ಪತ್ರಿಕೆ

**ಸಮಯ: ೩ ಗಂಟೆಗಳು** **ಅಂಕಗಳು: ೭೦**

**ಅ) ಐದು ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ (೫ X ೨=೧೦)**

೧. ಅಣ್ಣಯ್ಯನನ್ನು ಸ್ಮರಿಸಿಕೊಂಡು ಕವಿ ಹೇಳುತ್ತಿರುವುದೇನು?

೨. ವಿಜ್ಞಾನದ ಪರಮೋಚ್ಚ ಸಾಧನೆ ಯಾವುದು?

೩. ರಾಗಿ ಋಷಿ ಯಾರು? ಅವರನ್ನು ಹಾಗೆ ಕರೆಯಲು ಕಾರಣವೇನು?

೪. ಪುರುಷಸೂಕ್ತದ ಭಾರತೀಯನ ಸ್ವರೂಪ ಹೇಗಿದೆ?

೫. ಬೈಬಲ್‌ನ ಯಾವ ವಾಕ್ಯ 'ಆಗ್ನೀಸಾ'ಳ ಮನದಾಳದಲ್ಲಿ ನೆಲೆಗೊಂಡಿತ್ತು?

೬. ನಿಂಗನನ್ನು ಹಡುಗರು ಏನೆಂದು ಕರೆದರು? ಹಾಗೆ ಕರೆಯಲು ಕಾರಣವೇನು?

೭. ಲೋಕದ ಶೋಕವನ್ನು ಕುರಿತು ಕವಿ ಹೇಳಿರುವುದೇನು?

೮. ಮುನಿಯ ಗೋಣಗಲು ಕಾರಣಗಳೇನು?

**ಆ) ನಾಲ್ಕು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ (೪ X ೫=೨೦)**

೧. ಬನವಾಸಿಯಲ್ಲಿ ಮತ್ತೆ ಹುಟ್ಟ ಬೇಕೆಂದು ಕವಿ ಬಯಸಲು ಕಾರಣವೇನು?

೨. ರಾಮೇಶ್ವರದ ಪ್ರತಿ ಪ್ರದೇಶಕ್ಕೂ ದಿನವೂ ಒಂದೇ ಸಮಯಕ್ಕೆ ಪತ್ರಿಕೆ ಬಟವಾಡೆ ಮಾಡಲು 'ಕಲಾಂ'ರಿಗೆ ಹೇಗೆ ಸಾಧ್ಯವಾಯಿತು?

೩. 'ಕಾಲ್‌ಸೆಂಟರ್' ಜೊತೆಯಲ್ಲಿ ಬೆಳೆಯುತ್ತಿರುವ ಉದ್ಯಮಗಳನ್ನು ಕುರಿತು ಬರೆಯಿರಿ.

೪. ಸುಲ್ತಾನ್ ಇಬ್ರಾಹಿಂನಿಗೆ ಸೂಫಿ ಹೇಳಿದ್ದೇನು?

೫. 'ಆಗ್ನೇಸಾ' ತೆರೇಸಾ ಆಗಿದ್ದು ಹೇಗೆ?

**ಇ) ಮೂರು ಪ್ರಶ್ನೆಗಳಿಗೆ ಇಪ್ಪತ್ತು ವಾಕ್ಯಗಳಲ್ಲಿ ಉತ್ತರಿಸಿ. (೩ X ೧೦=೩೦)**

೧. ಅಪ್ಪನ ಬದುಕನ್ನು ಕುರಿತು ಕವಿ ಸಿದ್ದಲಿಂಗಯ್ಯನವರು ಏನನ್ನು ನೆನಪಿಸಿಕೊಳ್ಳುತ್ತಾರೆ?

೨. ರಸ್ತೆಗೆ ಡಾಂಬರು ಹಾಕುವ ಸಂದರ್ಭವನ್ನು ವಿವರಿಸಿ.

೩. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಭಾರತೀಯರು ಸಾಧಿಸಿದ ಸಾಧನೆಯನ್ನು ಪುರಷಸೂಕ್ತ ಕವನದ ಹಿನ್ನೆಲೆಯಲ್ಲಿ ತಿಳಿಸಿ.

೪. ಕುರುಕ್ಷೇತ್ರದ ಶ್ಮಶಾನದಲ್ಲಿ ಮಾತೆ ಮತ್ತು ಮುದುಕಿಯ ತೊಳಲಾಟವನ್ನು ವಿವರಿಸಿ.

೫. ಚಂದ್ರಮತಿಯ ಪ್ರಲಾಪವನ್ನು ವಿವರಿಸಿ.

**ಈ) ಎರಡು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. (೨ X ೫=೧೦)**

೧. 'ನನ್ನ ಪರೀಕ್ಷೆಗೆ ಹೊರಟಿದ್ದೆ ಅಲ್ಲವೆ' ? ಎಂದು ಮೂಕಜ್ಜಿಯು ಹೇಳಲು ಕಾರಣವೇನು?

೨. ಪಾರಿವಾಳ ಸಾಯಲು ಕಾರಣವೇನು?

೩. 'ಇದೆಲ್ಲಾ ವಿಶ್ವೇಶ್ವರಯ್ಯ ಅವರದೆ ' ಎಂದು ಜನ ಹೇಳಲು ಕಾರಣಗಳೇನು?

೪. ಪುಟ್ಟ ವಿಧವೆಯ ದುರಂತ ಬದುಕನ್ನು ವಿವರಿಸಿ.

ಬೆಂಗಳೂರು
ನಗರ ವಿಶ್ವವಿದ್ಯಾಲಯ

BENGALURU
CITY UNIVERSITY

ಆಗು ನೀ ಅನಿಕೇತನ
BE BOUNDLESS